ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಜುಲೈ 2025

ಬೆಲೆ ರೂ. 20/-

SAPTHAGIRI(KANNADA)
SPIRITUAL ILLUSTRATED MONTHLY
Volume:04, Issue:12, Pages:56
July - 2025,Price Rs.20/-



ತಿರುಮಲೆ, ಸ್ವಾಮಿಯವರ ಆಣಿವಾರ ಆಸ್ಥಾನ
16-07-2025 (ಪುಷ್ಪ ಪಲ್ಲಕಿ)

ತಿರುಮಲ ತಿರುಪತಿ ದೇವಸ್ಥಾನಗಳು

# ತಿರುಪತಿ
# ಶ್ರೀ ಗೋವಿಂದರಾಜ ಸ್ವಾಮಿಯವರ ಬ್ರಹ್ಮೋತ್ಸವಗಳ
## 02-06-2025 ರಿಂದ 10-06-2025 ರ ವರೆಗೆ ನಡೆದ
## ವಾಹನ ಸೇವೆಗಳ ದೃಶ್ಯಮಾಲಿಕೆ





# ಭಗವದ್ಗೀತೆ

ಆಶ್ಚರ್ಯವತ್ ಪಶ್ಯತಿ ಕಶ್ಚಿದೇನಂ
ಆಶ್ಚರ್ಯವದ್ವದತಿ ತಥೈವ ಚಾನ್ಯಃ।
ಆಶ್ಚರ್ಯವಚ್ಚೈ ನಮನ್ಯಃ ಶೃಣೋತಿ
ಶ್ರುತ್ವಾऽಪ್ಯೇನಂ ವೇದ ನಚೈವ ಕಶ್ಚಿತ್॥

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -29)

ಭಗವಂತನ ಪಡಿನೆಳಲಾದ ಈ ಜೀವತತ್ತ್ವವೂ ಒಂದು ವಿಸ್ಮಯ ಎನ್ನುವಂತೆ ಕಾಣುತ್ತದೆ. ವಿಸ್ಮಯವನ್ನು ಬಣ್ಣಿಸುವಂತೆ ಕೆಲವರು ಬಣ್ಣಿಸುತ್ತಾರೆ. ಇನ್ನೊಬ್ಬನು ವಿಸ್ಮಯಗೊಂಡು ಕೇಳುತ್ತಾನೆ. ಕೇಳಿಯೂ ಸರಿಯಾಗಿ ತಿಳಿದುಕೊಂಡವರು ತುಂಬ ವಿರಳ.



ಬನ್ನಿ ಬನ್ನಿ ವೆಂಕಟೇಶನ ನೆನೆದು।
ಭವ ಬಂಧನವ ನೀಗೋಣ ॥ಪ॥
ಬಂಧು ಬಾಂಧವರ ಕೂಡಿಕೊಂಡು ।
ಭಗವಂತನ ಕಲ್ಯಾಣ ಮಾಡೋಣ ॥ ಅ.ಪ.॥

ಕಲಿಯುಗದಲಿ ಬಲು ಸುಲಭದ ದೇವ ।
ಕಲ್ಲಾಗಿ ನಿಂತು ಭಕ್ತರ ಕಾಯುವ ॥
ಕಪ್ಪು ಶಿಲೆಯ ಸುಂದರ ವಿಗ್ರಹ ।
ಕಣ್ಮನಗಳಲಿ ತುಂಬಿಕೊಳ್ಳುವ ॥1॥

ವಿವಿಧ ಅವತಾರಗಳನೆತ್ತಿ ತಾನು ।
ವಿಧ ವಿಧ ಲೀಲೆಗಳ ತೋರುತಿಹ॥
ವಿವಿಧ ಭಕ್ತರ ಆಸೆ ಪೂರೈಸಲು ।
ವಿವಾಹ ತಾನೇ ಹವಣಿಸಿ ಕೊಂಡಿಹ ॥2॥

ನಿತ್ಯೋತ್ಸವವು ನಿತ್ಯ ಮಂಗಳನು ।
ನಿತ್ಯ ಕಲ್ಯಾಣ ವರ್ಣಿಸಲಸದಳ ॥
ಸತ್ಯ ಮಂಗಳಾಂಗಹರಿವಿಟ್ಠಲನು ।
ನಿತ್ಯ ನಿವಾರಿಪ ಭಕ್ತರ ಅಘಗಳ ॥3॥

- ಮಂಗಳಾಂಗ ಹರಿವಿಟ್ಠಲ






# ದಯಾ ಶತಕಮ್

**ವೇದಾಂತದೇಶಿಕ ಪದೇ ವಿನಿವೇಶ್ಯ ಬಾಲಂ ದೇವೋ ದಯಾಶತಕಮೇತದವಾದಯನ್ಮಾಮ್ ।**
**ವೈಹಾರಿಕೇಣ ವಿಧಿನಾ ಸಮಯೇ ಗೃಹೀತಂ ವೀಣಾವಿಶೇಷಮಿವ ವೇಂಕಟಶೈಲನಾಥಃ ॥ 104॥**

ಹಿಂದಿನ ಶ್ಲೋಕದಲ್ಲಿ ಆಚಾರ್ಯರು ದಯಾದೇವಿಯನ್ನು ಸ್ತುತಿಸುವುದರಲ್ಲಿ ಪ್ರಥಮ ಪ್ರಯತ್ನವನ್ನು ತಾವು ಮಾಡುತ್ತಿರುವುದರಿಂದ ಇದು ದೋಷಯುಕ್ತವಾಗಿರಬಹುದೆಂದು ಭಾವಿಸಿಕೊಂಡು, ಮಹಾ ಸಮರ್ಥರಾದ ವಾಲ್ಮೀಕಿಯೇ ಮೊದಲಾದವರು ಕೂಡ ದಯಾದೇವಿಯ ಪ್ರಭಾವವನ್ನು ಅರಿತುಕೊಳ್ಳಲು ಕಷ್ಟಪಡುತ್ತಿದ್ದರೆಂದ ಮೇಲೆ, ಈ ಕೆಲಸದಲ್ಲಿ ತನ್ನಂತಹ ದೀನನು ಮಾಡುತ್ತಿರುವ ಪ್ರಯತ್ನವನ್ನು ಮನ್ನಿಸಿ ತನ್ನನ್ನು ತಿರಸ್ಕರಿಸಬಾರದೆಂದು ಹೇಳಿದ್ದಾರೆ. ಈ ಶ್ಲೋಕದಲ್ಲಿ ಈ ಪ್ರಯತ್ನವು ತಾನು ಸ್ವತಂತ್ರಿಸಿ ಮಾಡಿದ್ದಲ್ಲವೆಂದೂ ಸ್ವತಃ ಭಗವಂತನ ಪ್ರೇರಣೆಯಿಂದ ತಾನು ನಿಮಿತ್ತ ಮಾತ್ರನಾಗಿ ಮಾಡಿದ್ದೆಂದೂ ಆದ್ದರಿಂದ ಇದರಲ್ಲಿ ಸಫಲತೆ ಅಥವಾ ಅಸಫಲತೆಯನ್ನು ಕುರಿತು ತಾನು ಯೋಚಿಸಬೇಕಾದ್ದಿಲ್ಲವೆಂದೂ ವಿಶದಪಡಿಸಿದ್ದಾರೆ.


ಈ ಸ್ತೋತ್ರವನ್ನು ರಚಿಸುವುದರಲ್ಲಿ, ಅಂದರೆ ದಯಾದೇವಿಯ ಮಹಿಮೆಯನ್ನು ಹಾಡುವುದರಲ್ಲಿ, ತಾನು ಕೇವಲ ಅನುಭವಿಯೆಂದೂ, ಇಂತಹ ಗಹನವಾದ ತಾತ್ವಿಕ ವಿಚಾರವನ್ನು ತಿಳಿದುಕೊಳ್ಳುವ ಸಾಮರ್ಥ್ಯವಿಲ್ಲದವನೆಂದೂ, ಹಾಗಿದ್ದರೂ ಕೂಡ ಸ್ವತಃ ಭಗವಂತನೇ ತನ್ನನ್ನು ವೇದಾಂತ ದೇಶಿಕನ ಸ್ಥಾನದಲ್ಲಿರಿಸಿ, ಅಂದರೆ ತನ್ನನ್ನು ವೇದಾಂತ ತತ್ವಗಳನ್ನು ಉಪದೇಶಿಸುವವನನ್ನಾಗಿ ಮಾಡಿ, ಆ ತತ್ವಗಳ ಅನುಸರಣಿಯಲ್ಲಿ ಮಾರ್ಗದರ್ಶಕನನ್ನಾಗಿ ಮಾಡಿ, ತನ್ನಿಂದ ಈ ಸ್ತೋತ್ರವನ್ನು ಹಾಡಿಸಿದ್ದಾನೆ. ತಾನೇ ನನ್ನ ಮೂಲಕ ಹಾಡಿದ್ದಾನೆ-ಎಂದು ಹೇಳಿ ತಮ್ಮ ಸರಳತೆಯನ್ನೂ ನಿರಹಂಕಾರಿಯಾದ ಸ್ವಭಾವವನ್ನೂ ಆಚಾರ್ಯರು ವ್ಯಕ್ತ ಪಡಿಸಿದ್ದಾರೆ. ಭಗವಂತನು ಈ ಸ್ತೋತ್ರವನ್ನು ತಾನೇ ಹಾಡಿರುವನೆಂಬುದನ್ನೂ ತಾನು ನಿಮಿತ್ತ ಮಾತ್ರನೆಂಬುದನ್ನು ಅತ್ಯಂತ ಸಮಯೋಚಿತವಾದ ದೃಷ್ಟಾಂತವೊಂದರಿಂದ ವಿವರಿಸಿದ್ದಾರೆ. ವಿಹಾರದಲ್ಲಿ ತೊಡಗಿರುವವನೊಬ್ಬ ಆನಂದಭರಿತನಾಗಿ ಆ ಸಮಯಕ್ಕೆ ಯೋಗ್ಯವಾದ ವೀಣೆಯನ್ನು ಹಿಡಿದು ನುಡಿಸುತ್ತಾನೆ. ಅದು ಮನೋಹರವಾದ ಧ್ವನಿಯನ್ನು ಕೊಡುತ್ತದೆ. ತಾಳ ಲಯ ಬದ್ಧವಾದ ಆ ಸಂಗೀತವು ಅತ್ಯಂತ ಸುಶ್ರಾವ್ಯವಾಗಿರುತ್ತದೆ. ಅದನ್ನು ಕೇಳುವ ರಸಿಕರು ಆನಂದಭರಿತರಾಗುತ್ತಾರೆ. ಆ ವೀಣಾನಿನಾದವನ್ನು ಮುಕ್ತಕಂಠದಿಂದ ಪ್ರಶಂಸಿಸಿ, **"ಆಹಾ! ವೀಣೆ ಎಷ್ಟು ಚೆನ್ನಾಗಿ ನುಡಿಯುತ್ತಿದೆ"** ಎನ್ನುತ್ತಾರೆ. ನುಡಿಯುತ್ತಿರುವುದೇನೆ ವೀಣೆಯೇ ಹೌದು. ಆದರೆ ಆ ವೀಣೆ ಸ್ವತಃ ಅಚೇತನ ವಸ್ತು. ಭಾವ ರಹಿತವಾದದ್ದು. ಕರ್ತೃತ್ವರಹಿತವಾದದ್ದು. ಆದರೂ ಅದರಿಂದ ಕೇಳುವವರ ಮನಸೆಳೆಯುವ ಪ್ರವೀಣತೆಯನ್ನವಲಂಭಿಸಿರುತ್ತದೆ. ನುಡಿಸುವವನು ತನ್ನಲ್ಲಿ ಎಷ್ಟರಮಟ್ಟಿಗೆ ಭಾವಗಳನ್ನೂ ಅವುಗಳನ್ನು ವ್ಯಕ್ತಪಡಿಸುವ ಸಾಮರ್ಥ್ಯವನ್ನೂ ಹೊಂದಿರುತ್ತಾನೋ ಅಷ್ಟರಮಟ್ಟಿಗೆ ಅದರಿಂದ ಧ್ವನಿ ಹೊರ ಚಿಮ್ಮುತ್ತದೆ. ಆದ್ದರಿಂದ ವೀಣಾವಾದನದ ಮಾಧುರ್ಯವು ವಾದಕನನ್ನೇ ಅವಲಂಭಿಸಿರುತ್ತದೆ. ಹಾಗೆಯೇ ವೈಣಿಕನಂತಿರುವ ಭಗವಂತನು ವೀಣೆಯಂತಿರುವ ತನ್ನ ಮೂಲಕ ಈ ಸ್ತೋತ್ರವನ್ನು ಹಾಡಿದ್ದಾನೆಂದು ಆಚಾರ್ಯರ ಅಭಿಪ್ರಾಯ. ಯೋಗಶಾಸ್ತ್ರದಲ್ಲಿ ಮನುಷ್ಯ ದೇಹವನ್ನು ವೀಣೆಗೆ ಹೋಲಿಸಿ ಬರೆದಿರುವುದು ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ಬರುತ್ತದೆ.

ತಿರುಮಲೆ ತಿರುಪತಿ ದೇವಸ್ಥಾನಗಳು ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

# ಸಪ್ತಗಿರಿ

ಶ್ರೀ ವಿಶ್ವಾವಸು ನಾಮ ಸಂವತ್ಸರ ಆಷಾಢ - ಶ್ರಾವಣಮಾಸ ಸಂಚಿಕೆ

ಸಂಪುಟ:04 ಜುಲೈ - 2025 ಸಂಚಿಕೆ:12



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಶ್ರೀ ಜೆ.ಶ್ಯಾಮಲ ರಾವ್,ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ.,ತಿರುಪತಿ.

**ಪ್ರಚುರಣೆ,ಸಂಪಾದಕರು ,**
**ಪ್ರಧಾನ ಸಂಪಾದಕರು** (ಎಫ್.ಎ.ಸಿ)
ಡಾ॥ವಿ.ಜಿ.ಚೊಕ್ಕಲಿಂಗಂ,ಎಮ್.ಎ.ಪಿಎಚ್.ಡಿ.,

**ಮುದ್ರಣ**
ಶ್ರೀ ಆರ್.ವಿ. ವಿಜಯ್‌ಕುಮಾರ್,ಬಿ.ಎ. ಬಿ.ಇಡಿ
ಉಪಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ ಮತ್ತು ಪ್ರಕಾಶನ,
ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್, ಪ್ರಧಾನ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ, ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ,
ತಿ.ತಿ.ದೇ.,ಪ್ರೆಸ್, 2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507
ಕಾರ್ಯಾಲಯ: 0877 - 2264543
: 0877 - 2264359
ಸಂಪಾದಕರು : 0877 - 2264360

ಬಿಡಿ ಪ್ರತಿ ರೂ. 20/-
ವಾರ್ಷಿಕ ಚಂದಾ ರೂ. 240/-
ಆಜೀವ ಚಂದಾ ರೂ. 2400/- (12 ವರ್ಷಗಳು)
ವಿದೇಶಿ ವಾರ್ಷಿಕ ಚಂದಾ ರೂ. 1030/-

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ:
**1800-425-4141**
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
**www.tirumala.org**
ಮೂಲಕ ಓದಬಹುದು.

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 06 |
| ಪರಶಿವನಿಗೆ ಪ್ರಿಯವಾದ ತುಂಬೆ ಹೂವು ಮತ್ತು ಅದರ ಉಪಯುಕ್ತತೆ | -ಎಸ್. ಗೋಪಾಲ್ | 07 |
| ಮಹರ್ಷಿ ವೇದವ್ಯಾಸರ ಸಂಸ್ಕಾರ ಮೀಮಾಂಸೆ | -ಕಲ್ಯಾಣಿ ಮೂರ್ತಿರಾಮನಾಥಪುರ | 08 |
| ಮಾನವನ ಏಳಿಗೆಗೆ ಷೋಡಷ ಸಂಸ್ಕಾರಗಳ ವಿಧಿ | -ಡಾ॥ ವಿಷ್ಣುದತ್ತ ಪ್ರಭುಜಿ | 11 |
| ರಾಯಚೂರು ಜಿಲ್ಲೆ ಕಸಬಾಲಿಂಗಸುಗೂರಿ ಶ್ರೀ 1008 ವರದೇಂದ್ರ ಸ್ವಾಮಿಗಳವರ ಚರಿತೆ | -ಬಿ. ಭೀಮಸೇನ | 14 |
| ಧೈರ್ಯಶಾಲಿನಿ ಸತಿ ಸಾವಿತ್ರಿ | -ಹನುಮಂತ ಮ. ದೇಶಕುಲಕರ್ಣಿ | 17 |
| ಪಾಳ್ಯದ ಲಕ್ಷ್ಮೀ ಜನಾರ್ದನ ದೇವಾಲಯ | -ಕೆಂಗೇರಿ ಚಕ್ರಪಾಣಿ | 20 |
| ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ | -ದಿ॥ ಬಿ. ಎನ್. ಶ್ರೀನಿವಾಸನ್ | 24 |
| ಆಷಾಢಮಾಸ ಮಾಸ ಬಂದೀತವ್ವಾ.... | ಶ್ರೀಮತಿ ವಾರುಣಿ ಹೊನ್ನಾಳಿ | 31 |
| ತಿರುಮಣಿಕ್ಕೂಡಮ್ | -ಶ್ರೀಮತಿ ಸೂರ್ಯವಂಶಿ | 35 |
| ಶ್ರೀ ವೆಂಕಟಾಚಲ ಮಹಾತ್ಮ್ಯೆ | - ಶ್ರೀಮತಿ ಎನ್. ಪಾರ್ವತಿ | 37 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ.ಆರ್. ನರಸಿಂಹನ್ | 39 |
| ತಿರುಮಲೆ ಕಾಲಮಾನಾಚರಣೆಗಳು | -ಶ್ರೀಮತಿ | 41 |
| ಶ್ರೀ ಮದ್ರಾಮಾಯಣದಲ್ಲಿ ಹನುಮಂತ ದೇವರ ಪಾತ್ರ | - ಶ್ರೀಧರ ರಾಯಸಂ | 43 |
| ರಾಶಿಫಲಗಳು | -ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ-ನಿರ್ಮಲ ಮನದವರು ನಮ್ಮ ಜತೆಗೆ ಇರಬೇಕು | - ಎ.ಆರ್.ರಘುರಾಮ | 48 |
| ಚಿತ್ರಕಥೆ-ಬಾಲ್ಯದಲ್ಲಿ ಒಳ್ಳೆಯದನ್ನು ಕಲಿಯೋಣ! | - ಶ್ರೀಮತಿ ವಿ. ನಾಗವಲ್ಲಿ | 52 |

**ಮುಖಚಿತ್ರ** - ಸ್ವಾಮಿಯವರ ಆಣಿವಾರ ಆಸ್ಥಾನ, ತಿರುಮಲೆ

**ಹಿಂಬದಿಚಿತ್ರ**- ಶ್ರೀ ಅಂಡಾಳ್ ದೇವಿ (ಚಿತ್ರಕಲೆ: ಮಣಿಯಂ ಸೆಲ್ವನ್, ಚೆನ್ನೈ)

## ಸಂಪಾದಕೀಯ.........................................

# ಪರಮಪಾವನವಾದ ಗುರುಸ್ಮರಣೆ

**'ಶಬ್ದ ಪರೇ ಚ ನಿಷ್ಣಾತಮ್ ಬ್ರಹ್ಮಣಿ ಉಪಸಂಶ್ರಯಮ್'** ಪರಬ್ರಹ್ಮ ತತ್ವವನ್ನು ಸಂಪೂರ್ಣವಾಗಿ ಅರಿತವನೇ ಆ ಪರಬ್ರಹ್ಮನ್ನೇ ಸಂಪೂರ್ಣವಾಗಿ ತಿಳಿದವನು. ಸದ್ಗುರುವು **'ಬ್ರಹ್ಮವಿತ್ ಬ್ರಹ್ಮೈವ ಭವತಿ'** ಎನ್ನುವಂತೆ ಬ್ರಹ್ಮನನ್ನು ತಿಳಿದವನೇ ಬ್ರಹ್ಮನಾಗುತ್ತಾನೆ. ಆದ್ದರಿಂದ ಸದ್ಗುರುವು ದೈವಸ್ವರೂಪವೆನಿಸಿಕೊಳ್ಳುತ್ತಾನೆ. ಅಂತಹಾ ಗುರುವಿಗೆ ಗುರುಪೌರ್ಣಮೆಯಂದು ಪೂಜೆಗಳು ನಡೆಯುತ್ತವೆ. ಆ ಪೂಜೆಯನ್ನು ನಾವು ಮಾಡಲೇಬೇಕು. ಸಾಧಕರಿಗೆ ಆಧ್ಯಾತ್ಮಿಕತೆಯ ಅವಶ್ಯಕತೆ ಇರುವುದರಿಂದಲೇ ಗುರುಪೌರ್ಣಿಮೆಗೆ ಅಷ್ಟೊಂದು ಪ್ರಾಮುಖ್ಯತೆಯು ಬಂದಿದೆ. ಇದು ಒಂದು ಮುಖ್ಯವಾದ ದಿನವೆಂದು ಪ್ರಸಿದ್ಧಿಯಾಗಿದೆ. ತಮ್ಮ ಸಾಧನೆಯ ತೀವ್ರತೆಯನ್ನು, ತಮ್ಮ ತಪ್ಪೊಪ್ಪುಗಳನ್ನು ಗುರುಗಳಿಗೆ ಸಮರ್ಪಿಸಿ, ಪುನಃ ಸಾಧನೆಯ ಹಾದಿಯಲ್ಲಿ ಮುನ್ನಡೆಯಲು ಅತ್ಯಂತ ಪ್ರಶಸ್ತವಾದ ದಿನವಾಗಿದೆ.

ಗುರುಶಿಷ್ಯಪರಂಪರೆಯು ಜ್ಞಾನಗಂಗೆಯ ಗಂಗೋತ್ರಿಯಂತಹುದು. ನಮ್ಮ ಭಾರತದೇಶದಲ್ಲಿ ಅತ್ಯಂತ ಪ್ರಾಚೀನ ಪರಂಪರೆಯ ಮೂಲಕ ಗುರುಗಳು ಅಂದಿನಿಂದ ಇಂದಿನವರೆಗೂ ತಮ್ಮ ಜ್ಞಾನವನ್ನು ಶಿಷ್ಯರಿಗೆ ನೀಡುತ್ತಲೇ ಬಂದಿದ್ದಾರೆ. ಅದಕ್ಕೆ ಗುರುಪೌರ್ಣಿಮೆಯಂದು ವೇದವ್ಯಾಸರಿಗೆ, ಋಷಿ ಪರಂಪರೆಗೆ, ಯತಿಗಳು, ನಂತರ ಅನೂಚಾನವಾಗಿ ನಡೆದು ಕೊಂಡು ಬಂದಿರುವಂತಹಾ ಗುರುಪರಂಪರೆಗೆ ನಮ್ಮ ಭಕ್ತಿ ಪೂರ್ವಕವಾದ ವಿನಯದಿಂದ ಕೂಡಿದ ನಮಸ್ಕಾರಗಳನ್ನು ಸಮರ್ಪಿಸೋಣ. ಗುರುಗಳ ಬಗೆಗೆ ವಿನಯವಿಧೇಯತೆಗಳಿಂದ ನಡೆದುಕೊಂಡು ಎಲ್ಲಾ ಭಗವಂತನೇ, ಗುರುವೂ ಭಗವಂತನೇ ಎಂಬ ಭಾವನೆಯಲ್ಲಿ ನಾವು ಮುನ್ನಡೆದಾಗ ಮಾತ್ರಾ ನಮಗೆ ಗುರುವಿನ ಅನುಗ್ರಹವು ಅನುಭವಕ್ಕೆ ಬರುತ್ತದೆ. ಇದೇ ಗುರುಶಿಷ್ಯರ ಸಂಬಂಧದಲ್ಲಿ ಇರುವ ವಿಶಿಷ್ಟತೆ-ಹೀಗೆ ಗುರುಶಿಷ್ಯಪರಂಪರೆಯ ತಲೆತಲಾಂತರಗಳಿಂದ ಮುಂದುವರೆಯುತ್ತಿದೆ.

ಸಂಸ್ಕೃತದಲ್ಲಿ ಕ್ಷರ ಎಂದರೆ ನಾಶವಾಗುವುದು ಎಂದರ್ಥ. ಅಕ್ಷರ ಎಂದರೆ ನಾಶವಿಲ್ಲದ್ದು ಎಂದರ್ಥ! ಈ ಜಗತ್ತಿನಲ್ಲಿ ಜನನ ಮರಣಗಳ ಚಕ್ರಗಳು ನಿರಂತರವಾಗಿ ತಿರುಗುತ್ತಲೇ ಇರುತ್ತವೆ. ಈ ಲೋಕದಲ್ಲಿ ಎಷ್ಟೋ ಜನ ಗುರುಶಿಷ್ಯರು ಹುಟ್ಟಿದ್ದಾರೆ. ಮರಣಿಸಿದ್ದಾರೆ. ಕೆಲವರು ಮಾತ್ರಾ ಉತ್ತಮ ಗ್ರಂಥಗಳನ್ನು ರಚಿಸಿ ಪ್ರಪಂಚಕ್ಕೆ ಅರ್ಪಿಸಿದ್ದಾರೆ. ಅದೇ ಮಹಾಭಾರತ, ರಾಮಾಯಾಣ, ಮಹಾಭಾಗವತ, ಉಪನಿಷತ್ತುಗಳು, ಪುರಾಣಗಳು ಮೊದಲಾದುವು ಇದೇ ನಮ್ಮ ಅತ್ಯುತ್ತಮ ಸಂಪತ್ತು.

ಈ ದೈನಂದಿನ ಜೀವನದಲ್ಲಿ ಇರುವ ಕಷ್ಟನಷ್ಟಗಳಿಂದ ದುಗುಡ ದುಮ್ಮಾನಗಳಿಂದ ನಮಗೆ ಮುಕ್ತಿ ದೊರೆಯಬೇಕೆಂದರೆ ಅದಕ್ಕೆ ಬೇಕಾಗಿರುವುದು ಜ್ಞಾನ ! ಆ ಜ್ಞಾನವನ್ನು ಸಂಪಾದನೆ ಮಾಡಿಕೊಳ್ಳಬೇಕು. ಅಜ್ಞಾನವನ್ನು ನಿವಾರಿಸಿ, ಜ್ಞಾನವನ್ನು ಪ್ರಸಾದಿಸುವುದೇ **'ಜ್ಞಾನತೋ ಗುರು'** ಎಂಬ ಮಾತು ಸತ್ಯವಾದುದು. ಇಹಪರಗಳಲ್ಲಿನ ಸುಖಸಾಧನೆಗೆ, ಗುರುವಿನ ಉಪದೇಶ, ಅನುಗ್ರಹ ಎರಡೂ ಅಗತ್ಯವಾಗುತ್ತದೆ.

ಗುರುವಿನ ಪಾದಗಳಿಗೆ **'ಚರಣಗಳು'** ಎಂಬ ಅರ್ಥವಿದೆ. ಚರಣ ಎಂದರೆ ನಡತೆ ಎಂದೂ ಅರ್ಥವಿದೆ. ಶಿಷ್ಯನು ಗುರುವಿನ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡರೆ ಗುರುವು ನಡೆದ ದಾರಿಯಲ್ಲಿ ತಾನೂ ನಡೆಯಬೇಕೆಂದರ್ಥ! ಅಂತಹಾ ಗುರುವಿನ ಚರಣಗಳನ್ನು ಈ ಗುರುಪೌರ್ಣಮಿಯಂದು ಭಜನೆಮಾಡೋಣ, ಅವರ ಆಶೀರ್ವಾದಗಳನ್ನು ಪಡೆದು ಧನ್ಯರಾಗೋಣ.

# ಪರಶಿವನಿಗೆ ಪ್ರಿಯವಾದ ತುಂಬೆ ಹೂವು ಮತ್ತು ಅದರ ಉಪಯುಕ್ತತೆ



– ಎಸ್. ಗೋಪಾಲ

84533 26571

ಪರಮೇಶ್ವರ ಸಾಮಾನ್ಯವಾಗಿ ಮಾನವರಿಂದ ಅಪೇಕ್ಷಿಸುವುದೇನೆಂದರೆ ಭಕ್ತಿ ಭಾವ. ಅರ್ಚನೆ, ಅಭಿಷೇಕ, ಸಾಧಾರಣ ಪುಷ್ಪಾಲಂಕಾರ, ರುದ್ರಾಭಿಷೇಕ, ಏಕಾದಶ ಶತ ರುದ್ರಾಭಿಷೇಕ, ದೀಪ, ಧೂಪ, ವಿಭೂತಿ (ಭಸ್ಮಾಲಂಕಾರ), ಇವಕೆಲ್ಲ ಪ್ರಮುಖವಾಗಿ ಬಳಸುವ ಪರಿಕರಗಳೆಂದರೆ ಶುದ್ಧ ಗಂಗಾಜಲ-ಬಿಲ್ವಪತ್ರೆ. ಭಸ್ಮ, ತುಂಬೆ, ಹೂವು ವಗೈರ ವಗೈರ ಜೊತೆಗೆ ಸುಶ್ರಾವ್ಯವಾದ ಶ್ರೀ ರುದ್ರ ನಮಕಮ್ ಶ್ರೀರುದ್ರ ಚಮಕಮ್ ಮಂತ್ರಪಠಣ. ಇವೆಲ್ಲಾ ಹೇಗಾದರಾಗಲಿ ಈ ಲೇಖನದ ಪ್ರಮುಖ ವಿಷಯ ತುಂಬೆ ಸಸ್ಯ ಹೂವಿನ ಬಗ್ಗೆ. ಭಗವಂತನಿಗೆ ಪ್ರಿಯವಾಗುವ ಸಸ್ಯಗಳು, ಹೂವುಗಳು ಎಲ್ಲವು ಕೂಡ ಯಥೇಚ್ಛವಾಗಿ ಔಷಧಿಗುಣಗಳನ್ನು ಹೊಂದಿರುತ್ತದೆ. ಶಿವನಿಗೆ ಪುಟ್ಟ ತುಂಬೆ (ತುಂಬೆ ಇದೊಂದು ಪುಟ್ಟ ಹೂ ಬಿಡುವ ಸಸ್ಯ/ಗಿಡ ) ಇದು ಬೇಲಿಗಳಲ್ಲಿ ರಸ್ತೆಗಳ ಅಂಚಿನಲ್ಲಿ ನಸುನಗುತ್ತಾ ಕಂಗೊಳಿಸುವ ಈ ಪುಟ್ಟ ಸಸ್ಯದಲ್ಲಿ ಔಷಧದ ಭಂಡಾರವೇ ಅಡಗಿದೆ. ಶಿವನಿಗೆ ಪ್ರಿಯವೆಂದು ನಮ್ಮ ಪೂರ್ವಜರು /ಭಕ್ತರು ಹುಡುಕಿ ತಂದು ಶಿವನಿಗೆ ಅರ್ಪಿಸಿ ಪೂಜಿಸುತ್ತಾರೆ. ಏತಕ್ಕಾಗಿ ನಮ್ಮ ಪೂರ್ವಜರು ಪ್ರಿಯವೆಂದು ಹೇಳಿದ್ದಾರೆಂದರೆ (ಹಲವು ಔಷಧಿ ಗುಣವುಳ್ಳ) ಅಂತಹ ಸಸ್ಯ ಗಿಡಮರಗಳನ್ನು ಓತನದಿಂದ ಕಾಪಾಡಿ ಅವುಗಳ ಪ್ರಯೋಜನ ಪಡೆಯಲಿ ಎಂಬ ಉದ್ದೇಶದಿಂದ (ತುಂಬೆ, ದಾಸವಾಳ, ದಾಳಿಂಬೆ, ಬೇವು, ಬಿಲ್ವ ಇತ್ಯಾದಿ)

ಈಗ ತುಂಬೆ ಗಿಡದ ಬಗ್ಗೆ ಹೇಳುವುದಾದರೆ ಮೊದಲಿಗೆ ಈ ಹೂವಿನ (ತುಂಬೆ) ಗಿಡ ಎಲ್ಲರ ಮನೆಯ ಹಿತ್ತಲಲ್ಲಿ, ಬೇಲಿಯಲ್ಲಿ, ಹಳೇ ಮನೆ ಗೋಡೆ ಬದಿಯಲ್ಲಿ ರಸ್ತೆಯ ಅಂಚಿನಲ್ಲಿ ಕಾಣಿಸುತ್ತಿತ್ತು ಆದರೆ ಈಚೆಗೆ ನಗರ ಪ್ರದೇಶದಲ್ಲಿ ಕಾಣಸಿಗುವುದಿಲ್ಲ -ವಿರಳ ಎನ್ನಬಹುದು. ಆದರೆ ಇದು ಭರತಖಂಡದಲ್ಲೆಲ್ಲಾ ವ್ಯಾಪಾಕವಾಗಿರುವ ಈ ಸಸ್ಯ (ಹೂ) ಅತ್ಯಂತ ಉಪಕಾರಿ. ಹೇಗೆ ಉಪಕಾರಿ ಎಂದರೆ ಈ ಸಸ್ಯ (ಮೂಲಿಕೆ) ಕಫವನ್ನು ಹೊರದೂಡುತ್ತದೆ. ಕ್ರಿಮಿನಾಶಕ, ಮೃದುವಿರೇಚಕ, ಮೂಲ ವ್ಯಾಧಿ ಕಣ್ಣಿನ ಸಮಸ್ಯೆಗಳು, ಗಂಟಲು ರೋಗ ನಿವಾರಕ,ವಾತದೋಷ,ರಕ್ತಶೋಧಕ,ಮಲಬದ್ಧತೆ,ಕಫ ಸಂಬಂಧಿಸಮಸ್ಯೆ, ಕಾಮಾಲೆ, ಉದರ ಶೂಲೆ, ಚರ್ಮರೋಗ, ನೆಗಡಿ, ಕೆಮ್ಮು, ವಿಷಮಜ್ವರ,ಸರ್ಪವಿಷ ಇವುಗಳ ಗುಣ ಪಡಿಸುವಿಕೆಯಲ್ಲಿ ಇದರ (ಈ ಸಸ್ಯದ) ಪಾತ್ರ ಪ್ರಮುಖವಾದುದು ಹೀಗಾಗಿ ಈ ಸಸ್ಯ ಅಮೂಲ್ಯ ಗುಣಗಳಿಂದ ಕೂಡಿದೆ, ಇದರ ಉಪಯೋಗಗಳೆಂದರೆ,

**ಅರಿಶಿನಕಾಯಿಲೆ:** ಗುಣಪಡಿಸುವಿಕೆ ಒಂದು ಹಿಡಿ ತುಂಬೆ ಸೊಪ್ಪನ್ನು ತಂದು ಶುದ್ಧಗೊಳಿಸಿ ಜಜ್ಜಿ ರಸ ಹಿಂಡಿ ಇಟ್ಟುಕೊಳ್ಳಿ ಈ ರಸಕ್ಕೆ ಚಿಟಿಕೆ ಕಾಳುಮೆಣಸು ಪುಡಿ, ಚಿಟಿಕೆ ಸೈಂದವಲವಣ ಬೆರಸಿ ಪ್ರತಿದಿನ 3 ಸಲ ಕೆಲವು ದಿನ ಸೇವಿಸಿದರೆ ಉತ್ತಮ ಫಲಿತಾಂಶ ಕಾಣಬಹುದು.

**ನೆಗಡಿಗೆ :** ಒಣಗಿದ ತುಂಬೆ ಸೊಪ್ಪಿನ ಚೂರ್ಣ ಸಮ ಪ್ರಮಾಣ ಅತಿ ಮಧುರ ಚೂರ್ಣ ಜೇನುತುಪ್ಪದ ಜೊತೆ 3 ದಿನಗಳು ಬೆಳಿಗ್ಗೆ ಸಂಜೆ ಸೇವಿಸಿದರೆ ನೆಗಡಿ ಗುಣವಾಗುವುದು.

**ಕೆಮ್ಮಿಗೆ:** ಅರ್ಧಚಮಚ ಅಕ್ಕಿಕಾಳು,ಒಂದು ಹಿಡಿ ತುಂಬೆಯ ಚಿಗುರೆಲೆ ಎರಡನ್ನು ಅರೆದು ಅದನ್ನು ಸ್ವಲ್ಪ ಬಿಸಿ ಮಾಡಿ ಅದಕ್ಕೆ ಜೇನುತುಪ್ಪ ಸೇರಿಸಿ 3 ದಿನ ಸೇವಿಸಿದರೆ ವಾಸಿಯಾಗುತ್ತದೆ.

**ಮೂಲವ್ಯಾಧಿ:** ತುಂಬೆ ಸೊಪ್ಪಿನ ರಸಕ್ಕೆ ಸುಣ್ಣದ ತಿಳಿ ನೀರನ್ನು ಸೇರಿಸಿ ಸೇವಿಸುತ್ತಾ ಬಂದರೆ ಮೂಲವ್ಯಾಧಿ ಮೊಳಕೆಗಳು ನಶಿಸುತ್ತಾ ಬರುತ್ತದೆ. ಹೊಟ್ಟೆನೋವಿಗೆ ಖರ್ಜೂರವನ್ನು ತುಂಬೆಸೊಪ್ಪಿನ ರಸದಲ್ಲಿ ಅರೆದು ಸೇವಿದರೆ ಶಮನವಾಗುತ್ತದೆ.


**ಅಜೀರ್ಣಕ್ಕೆ ಮತ್ತು ಹಸಿವು ಹೆಚ್ಚಾಗಲು:** ತುಂಬಿ ಚಿಗುರೆಲೆಗಳನ್ನು ಬಾಳೆ ಎಲೆಯಲ್ಲಿ ಸುತ್ತಿ ಕೆಂಬೂದಿಯಲ್ಲಿಟ್ಟು ಸ್ವಲ್ಪ ಸಮಯದ ನಂತರ ತೆಗೆದರೆ ಒಳಗಿರುವ ತುಂಬೆ ಸೊಪ್ಪು ಹದನಾಗಿ ಬೆಂದಿರುತ್ತದೆ. ಇದಕ್ಕೆ ಸ್ವಲ್ಪ ಸೈಂದವಲವಣ ಬೆರಸಿ ಸೇವಿಸುವುದರಿಂದ ಉತ್ತಮ ಪರಿಹಾರ ಕಾಣಬಹುದು.

**ಅರ್ಧ ತಲೆನೋವಿಗೆ:** ತುಂಬೆ ಸೊಪ್ಪಿನ ರಸವನ್ನು 2 ಬಾರಿ ಶೋಧಿಸಿ 2-3 ಹನಿ ಮೂಗಿನ ಹೊಳ್ಳೆಗಳಿಗೆ ಹಾಕುವುದರಿಂದ ಉಪಯೋಗವಾಗುವುದು.

**ಮುಟ್ಟಿನ ಸಮಯ ಹೊಟ್ಟೆನೋವು :** 1 ಚಮಚ ತುಂಬೆ ರಸ 1 ಚಮಚ ನಿಂಬೆರಸ ಹಾಗೂ ಒಂದು ಚಿಟಿಕೆ ಉಪ್ಪು ಸೇರಿಸಿ 3 ದಿನ ಬೆಳಿಗ್ಗೆ - ಸಂಜೆ ಸೇವಿಸಿದರೆ-ಮುಂದಿನ ತಿಂಗಳಿಂದ ಈ ಶೂಲೆ ಬರುವುದಿಲ್ಲ ಇರುವುದಿಲ್ಲ.

**ಚರ್ಮರೋಗಕ್ಕೆ:** ತುಂಬೆ ಸೊಪ್ಪಿನ ರಸವನ್ನು ಲೇಪಿಸಿದರೆ, ನವೆ,ತುರಿಕೆ, ಕಜ್ಜಿ, ಇಸಬು ಗಜಕರ್ಣ ಇವುಗಳಿಗೆಲ್ಲಾ ಪರಿಹಾರಸಿಗುವುದು. ತುಂಬೆ ಹೂವಿನ ತೊಟ್ಟಿನಲ್ಲಿ ಸಿಹಿ ದ್ರವವಿದ್ದು ಆಗಿಂದ್ದಾಗೆ ಸೇವಿಸಿದರೆ ದೇಹದಲ್ಲಿನ ಉಷ್ಣ ಶಮನವಾಗುವುದು ದಣಿವು ಆರುವುದು.

ಹೀಗೆ ತುಂಬೆ ಗಿಡದ ಎಲೆಗಳು ಚಿಗುರು ಹೂವು ಬಲು ಉಪಯುಕ್ತ ಹೀಗಾಗಿ ತುಂಬೆ ಗಿಡ (ಸಸ್ಯ) ಹಲವು ರೀತಿಯಲ್ಲಿ ಉಪಕಾರಿ-ಆದ್ದರಿಂದ ಎಲ್ಲರ ಮನೆಗಳಲ್ಲಿ ಪಾಟ್‌ನಲ್ಲಿ ಬೆಳಸಿ ಸಮಯ ಬಂದಾಗ ಬಳಸಬಹುದು. ಅದಕ್ಕೂ ಮಿಗಿಲಾಗಿ ದಿನವೂ ಇದರ ಹೂವನ್ನು ಶಿವನಿಗೆ (ಪೂಜೆಯಲ್ಲಿ) ಅರ್ಪಿಸಿ ಧನ್ಯರಾಗಬಹುದು. ಒಂದು ಕಿವಿ ಮಾತೆಂದರೆ ಮೇಲೆ ಹೇಳಿದ ಈ ಗಿಡದ ಬಳಕೆಯಲ್ಲಿ ತಜ್ಞ (ಆಯುರ್ವೇದಿಕ್) ಸಲಹೆ ಪಡೆಯುವುದು ಅತಿಮುಖ್ಯ .



# ಮಹರ್ಷಿ ವೇದವ್ಯಾಸರ ಸಂಸ್ಕಾರ ಮೀಮಾಂಸೆ

**– ಕಲ್ಯಾಣಿ ಮೂರ್ತಿರಾಮನಾಥಪುರ**

**"ವಾಙ್ಮಯಾವತಾರ"** ವೋ ಎನ್ನುವಷ್ಟು ಎಲ್ಲರ ಗೌರವ ಘನತೆಗಳನ್ನು ಸಹಜವಾಗಿ ಹೊತ್ತವರು ಮಹರ್ಷಿವೇದವ್ಯಾಸರು, ವೇದವ್ಯಾಸರು ವಸಿಷ್ಠರ ಪ್ರಪೌತ್ರರೂ, ಶಕ್ತಿ ಋಷಿಯ ಪೌತ್ರರೂ, ಪರಾಶರರ ಪ್ರಪೌತ್ರರೂ, ಶಕ್ತಿ ಋಷಿಯ ಪೌತ್ರರು, ಪರಾಶರರ ಪುತ್ರರೂ ಹಾಗೂ ಮಹಾಭಾಗವತ ಶುಕ ದೇವರ ತಂದೆಯೂ ಹೌದು. ವೇದಜ್ಞಾನ ಪ್ರಸಾರ ಹಾಗೂ ವೇದಜ್ಞಾನದ ವ್ಯಾಖ್ಯಾನ ಶೈಲಿಯ ಪುರಾಣಗಳಲ್ಲಿ ಪ್ರತಿಪಾದಿತವಾಗಿರುವ ಅಪೂರ್ವ ಕೌಶಲ್ಯ ವೇದವ್ಯಾಸರದು. ವೇದ ಸಂಹಿತೆಯ ಋಕ್, ಯಜುಸಾಮ ಹಾಗೂ ಅಥರ್ವ ಈ ನಾಲ್ಕು ರೂಪಗಳಲ್ಲಿ ಅವರೇ ವಿಭಜಿಸಿದ ಮತ್ತು ಹದಿನೆಂಟು ಪುರಾಣಗಳು ಹಾಗೂ ಉಪಪುರಾಣಗಳ ಕರ್ತೃವೂ ಅವರೇ, ಮಹಾಭಾರತ ದಂತಹ ಬೃಹತ್ ಗ್ರಂಥ ನಮಗೆ ದೊರಕಿದ್ದು ಸಹ ಅವರ ಕೃಪಾಕಟಾಕ್ಷ ದಿಂದಲೇ, ಅದರ ಬಗ್ಗೆ ಪ್ರಸಿದ್ಧವಾದ ನುಡಿ ಎಂದರೆ **"ಯತ್ರ ಭಾರತೇ ತತ್ರ ಭಾರತೇ"** ಅಂದರೆ ಮಹಾಭಾರತದಲ್ಲಿ ಹೇಳದಿರುವುದು ಭರತ ಖಂಡದಲ್ಲಿ ಯಾರಿಂದಲೂ, ಎಲ್ಲೂ ಹೇಳಲ್ಪಟ್ಟಿಲ್ಲ. ಮಹರ್ಷಿ ವೇದವ್ಯಾಸರನ್ನು ಭಗವಂತನ 24 ಅವತಾರಗಳಲ್ಲಿ ಒಬ್ಬರಾಗಿ ಪರಿಗಣಿಸುತ್ತಾರೆ. ಹಾಗಾಗಿಯೇ ಅವನ ಅವತಾರಗಳಲ್ಲೆಲ್ಲ ವೇದವ್ಯಾಸರ ಪ್ರತಿಷ್ಠೆ ಗೌರವ ಹೊಮ್ಮಿದೆ. ಇದರೊಂದಿಗೆ ಆರ್ಷಗ್ರಂಥ ಬ್ರಹ್ಮ ಸೂತ್ರವೂ ಅವರಿಂದಲೇ ಕೊಡಲ್ಪಟ್ಟದ್ದು. ಹೀಗೆ ಸಮಸ್ತ ವಿದ್ಯೆಗಳು, ಜ್ಞಾನ, ವಿಜ್ಞಾನ, ಕಲೆ, ಸಾಹಿತ್ಯ ಎಲ್ಲವನ್ನು ಕರುಣಿಸಿದ ವೇದವ್ಯಾಸರ ಋಣ ನಮ್ಮ ಮೇಲೆ ಅಪಾರವಾಗಿದೆ.

ಮಹರ್ಷಿಗಳ ಬದುಕು ಧರ್ಮ, ಸದಾಚಾರ, ಜ್ಞಾನ, ವೈರಾಗ್ಯ, ತಪಸ್ಸು, ಸಂತೋಷ, ಅಪರಿಗ್ರಹ ಮುಂತಾದವುಗಳ ಮೇಲೆ ಪ್ರತಿಪಾದಿತವಾಗಿದೆ. ಇವುಗಳನ್ನು ಪ್ರತಿಷ್ಠಾಪಿಸಲೆಂದೇ ಅವರು ಅವತರಿಸಿದ್ದರು. ಅವರು ತಮ್ಮ ವಾಙ್ಮಯದ ಮೂಲಕ ಈ ಎಲ್ಲ ವಿಷಯಗಳನ್ನು ತಿಳಿಸಿದರಲ್ಲದೆ ತಮ್ಮ ಜೀವನದಲ್ಲಿಯೂ ಅಳವಡಿಸಿಕೊಂಡಿದ್ದರು. ವೇದಗಳು ಹಾಗೂ ಬ್ರಹ್ಮಸೂತ್ರಗಳಲ್ಲಿ ಅವರು ಶುದ್ಧ ಪರಮಾತ್ಮತತ್ವದ ನಿರೂಪಣೆ ಮಾಡಿ ಜ್ಞಾನ ಮಾರ್ಗ ಮತ್ತು ಕರ್ಮ ಮಾರ್ಗದ ಉಪದೇಶ ನೀಡಿದ್ದಾರೆ. ಅದನ್ನೇ ಪುರಾಣಗಳಲ್ಲಿ ಸಂಪೂರ್ಣ ಆಚಾರ ಧರ್ಮವಾಗಿ ನಿರೂಪಿಸಿದ್ದಾರೆ. ನಿತ್ಯ, ನೈಮಿತ್ತಿಕ ವಿಧಿ ಪ್ರತಿಪಾದಿತವಾದ ಕರ್ಮಗಳು ಹಾಗೂ ನಿಷ್ಕಾಮ ಕರ್ಮದಂತಹ ಮೀಮಾಂಸೆಯನ್ನು ವೇದ ವ್ಯಾಸರು ಪ್ರಸ್ತುತ ಪಡಿಸಿದ್ದಾರೆ. ಅದು ಬೇರೆಡೆಸಿಗಲಾರದು. ಅವರು ರಚಿಸಿದ ಧರ್ಮಶಾಸ್ತ್ರದ ಎರಡು ಪ್ರಮುಖ ಗ್ರಂಥಗಳು ಅವರ ಹೆಸರಿನಿಂದಲೇ ಪ್ರಸಿದ್ಧಿ ಪಡೆದಿವೆ. 1.ವ್ಯಾಸಸ್ಮೃತಿ 2. ಲಘು ವ್ಯಾಸ ಸಂಹಿತಾ.

ಭಗವಂತನನ್ನು ಹೊಂದಲು ಅಂತಃಕರಣಶುದ್ಧಿ ಪರಮಾವಶ್ಯಕ ಎಂಬುದು ವೇದವ್ಯಾಸರ ಅಭಿಪ್ರಾಯ. ಅದರಲ್ಲೂ ಈ ಶುದ್ಧಿಯಲ್ಲಿ ಮುಖ್ಯವಾದುದು-ವ್ಯಕ್ತಿಯ ಅಂತರ್ಬಾಹ್ಯ ಎಲ್ಲ ರೀತಿಯ ಶುದ್ಧತೆ, ಪಾವಿತ್ರ್ಯತೆ ಹಾಗೂ ಸಂಸ್ಕಾರಸಂಪನ್ನತೆ. ಆದ್ದರಿಂದಲೇ ವೇದವ್ಯಾಸರು ಅಂತರ್ ಹಾಗೂ ಬಾಹ್ಯದ ಶುದ್ಧಿಗಾಗಿ ಸಂಸ್ಕಾರಗಳಿಂದ ಸಂಸ್ಕೃತಗೊಳ್ಳುವ ವಿಶೇಷ ಪರಾಮರ್ಶೆಯನ್ನು ನೀಡಿದ್ದಾರೆ. ಮಹರ್ಷಿಗಳ ಇಡೀ ಬದುಕೇ ಸಂಸ್ಕಾರಗಳಿಂದಲೇ ಪೋಷಿತವಾದದ್ದು. ಸಂಧ್ಯಾವಂದನಾದಿ ನಿತ್ಯಕರ್ಮಗಳ ಪ್ರಶಸ್ತಿಯಲ್ಲಿ ವೇದವ್ಯಾಸರ ಮಾತು ಬಹಳ ಪ್ರಸ್ತುತ ಅಲ್ಲದೆ ಇದರ ಅನಿವಾರ್ಯ ಅವಶ್ಯಕತೆ ಗೋಚರವಾಗುತ್ತದೆ. ಹಾಗಾಗಿಯೇ ತಮ್ಮ ಇಡೀ ಕೃತತ್ವವನ್ನು ವಿಶೇಷವಾಗಿ ಸ್ಮೃತಿಗಳು ಹಾಗೂ ಪುರಾಣಗಳಲ್ಲಿ ಸಂಸ್ಕಾರಗಳ ವಿಶೇಷತೆಯೊಂದಿಗೆ ಅವರು ಪ್ರತಿಪಾದನೆ ಮಾಡಿದ್ದಾರೆ. ಸಂಪೂರ್ಣ ವ್ಯಾಸಸ್ಮೃತಿಯಲ್ಲಿ ಮುಖ್ಯವಾಗಿ ಧರ್ಮಾಚರಣೆ, ಸದಾಚಾರ, ಸಂಸ್ಕಾರ ತತ್ವ, ಪಾತಿವ್ರತ್ಯಧರ್ಮ, ನಿತ್ಯ ಕರ್ಮಗಳ ಮಹಿಮೆ, ಗೃಹಸ್ಥಧರ್ಮ ಹಾಗೂ ದಾನಧರ್ಮಗಳ ವಿಷಯವನ್ನು ಪ್ರತಿಪಾದಿಸಿದ್ದಾರೆ. ಸಂಸ್ಕಾರಗಳ ಅವಶ್ಯಕತೆಗೆ ಒತ್ತು ನೀಡುತ್ತಾ ವ್ಯಾಸರು 19 ಸಂಸ್ಕಾರಗಳ ಪರಿಗಣನೆ ಮಾಡಿದ್ದಾರೆ.

**ಗರ್ಭಾಧಾನಂ ಪುಂಸವನಂ ಸೀಮಂತೋ ಜಾತ ಕರ್ಮ ಚ ।**
**ನಾಮಕ್ರಿಯಾನಿಷ್ಕ್ರಮಣೇ ನ್ನಾಶನಂ ವಪನಕ್ರಿಯಾ ।**
**ಕರ್ಣವೇಧೋ ವ್ರತಾದೇಶೋ ವೇದಾರಂಭಕ್ರಿಯಾವಿಧಿಃ ।**
**ಕೇಶಾಂತ ಸ್ನಾನಮುದ್ವಾಹೋ ವಿವಾಹಾಗ್ನಿಪರಿಗ್ರಹಃ ॥**
**ತ್ರೇತಾಗ್ನಿಸಂಗ್ರಹಶ್ಚೇತಿ ಸಂಸ್ಕಾರಾಃ ಷೋಡಶಃ ಸ್ಮೃತಾ ॥**

ಗರ್ಭಾಧಾನದಿಂದ ಕರ್ಣವೇಧದವರೆಗಿನ 9 ಸಂಸ್ಕಾರಗಳು ಸ್ತ್ರೀಯರಿಗೆ ಅಮಂತ್ರಕಗಳು. ಆದರೆ ವಿವಾಹ ಸಂಸ್ಕಾರ ಸಮಂತಕವಾದದು. ಅನ್ಯರ ಈ ಹತ್ತು ಸಂಸ್ಕಾರಗಳು ಮಂತ್ರವಿಲ್ಲದೆಯೇ ನಡೆಯುತ್ತವೆ.

**ನಮೈತಾಃ ಕರ್ಣವೇದಾಂತಾ ಮಂತ್ರವರ್ಜಂ ಕ್ರಿಯಾಃ ಸ್ತ್ರೀಯಾಃ ।**
**ವಿವಾಹೋ ಮಂತ್ರತಸ್ತಸ್ಯಾಃ ಶೂದ್ರಸ್ಯಾಮಂತ್ರ ತೋ ದಶ ॥**

ಮುಂದೆ ಸ್ಮೃತಿಯಲ್ಲಿ ಈ 19 ಸಂಸ್ಕಾರಗಳ ಕ್ರಿಯಾವಿಧಾನವನ್ನು ಸಹ ಕೊಡಲಾಗಿದೆ. ಲಘುವ್ಯಾಸ ಸಂಹಿತೆಯಾದರೋ ಸಂಪೂರ್ಣವಾಗಿ ನೈತ್ಯಿಕ ಸಂಸ್ಕಾರಗಳ ಪ್ರತಿಪಾದನೆಯಲ್ಲಿಯೇ ಮುಗಿಯುತ್ತದೆ. ಸಂಸ್ಕಾರಗಳಿಂದ ಒಡಗೂಡಿರುವುದು ಉತ್ತಮ ಭಾಗವೇ ಆದರೂ ಅದರೊಂದಿಗೆ ದೈನಿಕ ಆಚರಣೆಯ ಪಾಲನೆ ಪರಮ ಅವಶ್ಯಕ ಎನ್ನುತ್ತಾರೆ ವೇದವ್ಯಾಸರು. ದೈನಿಕ ನಿತ್ಯಕರ್ಮಗಳಿಂದ ಕೂಡಿದ್ದರೆ ವ್ಯಕ್ತಿ ಸುಸಂಕೃತ ಮತ್ತು ಸದಾಚಾರಿಯಾಗಿರುತ್ತಾನೆ. ಆದ್ದರಿಂದ ಸ್ನಾನ, ಸಂಧ್ಯಾವಂದನ, ಜಪ, ದೇವರ ಪೂಜೆ, ಬಲಿವೈಶ್ವ ದೇವ ಹಾಗೂ ಅತಿಥಿ ಪೂಜೆ (ಸತ್ಕಾರ)ಈ ಷಟ್ಕರ್ಮಗಳನ್ನು ಪ್ರತಿನಿತ್ಯ ಯಥಾವಿಧಿಯಾಗಿ ಮಾಡಬೇಕು. ಸಂಧ್ಯಾವಂದನೆ ಇಲ್ಲದ ವ್ಯಕ್ತಿ ನಿತ್ಯ ಅಪವಿತ್ರನಾಗಿಯೇ ಇರುತ್ತಾನೆ. ಆತ ಎಲ್ಲ ವಿಹಿತ ಕರ್ಮಗಳಿಗೂ ಅನರ್ಹನಾಗಿರುತ್ತಾನೆ. ಆತ ಮಾಡುವ ಯಾವುದೇ ಕರ್ಮವು ಫಲ ನೀಡುವುದಿಲ್ಲ.

**ಸಂಧ್ಯಾಹೀನೋಽ ಶುಚಿರ್ನಿತ್ಯಮನರ್ಹ ಸರ್ವಕರ್ಮಸು**
**ಯದನ್ಯತ್ ಕುರುತೇ ಕರ್ಮ ನ ತಸ್ಯ ಫಲ ಮಾಪ್ನುಯಾತ್॥**

ವೇದವ್ಯಾಸರು ಪುರಾಣಗಳಲ್ಲಿ ಅಕ್ಷರಕ್ಷರ ಸಂಸ್ಕಾರಗಳ ಪಾಲನೆ ಹಾಗೂ ಸದಾಚಾರವನ್ನು ಅನುಸರಿಸುವ ಬಗ್ಗೆ ವಿಶೇಷ ಒತ್ತು ನೀಡುತ್ತಾರೆ. ಭಾಗವತ, ಪದ್ಮ, ಸ್ಕಂದ, ಮತ್ಸ್ಯ, ವಾಮನ, ನಾರದ ಮುಂತಾದ ಪುರಾಣಗಳಲ್ಲಿ ಈ ವಿಷಯ ಅತಿಶಯವಾಗಿ ಬಂದಿದೆ. ಇವುಗಳಲ್ಲಿ ಕೇವಲ ಶರೀರ ಸಂಸ್ಕಾರಗಳಷ್ಟೇ ಅಲ್ಲ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ ಶುದ್ಧಿಗಾಗಿ ಸಹ ವಿಶೇಷವಾದ ಸಂಸ್ಕಾರಗಳು ಪ್ರತಿಪಾದಿತವಾಗಿವೆ. ಇವರು ಭಾವ ಶುದ್ಧಿಯ ಮೇಲಂತೂ ಬಹಳ ಆಸ್ಥೆವಹಿಸುತ್ತಾರೆ. ಭಾವಶುದ್ಧಿಯಾಗದೆ ಸ್ಥೂಲ ಸಂಸ್ಕಾರಗಳಿಂದ ಯಾವುದೇ ಲಾಭವಿಲ್ಲ ಎಂದೆನ್ನುತ್ತಾರೆ ಅವರು. ಪ್ರಮುಖ ಸಂಸ್ಕಾರವೆಂದರೆ ಭಗವನ್ನಾಮ ಸಂಕೀರ್ತನೆ. ಎಲ್ಲ ಸಂಸ್ಕಾರಗಳು ಅಂತ್ಯಗೊಳ್ಳುವುದು ಭಗವಂತನ ಭಕ್ತಿಗಳಿಸುವುದರೊಂದಿಗೆ, ಹಾಗಾಗಿಯೇ ಅಂತಹ ಭಗವಂತನ ನಾಮವನ್ನು ಸಂಕೀರ್ತನೆ ಮಾಡಬೇಕು. ಇದು ಮಂಗಳಕ್ಕೆ ಸರ್ವೋತ್ಕೃಷ್ಟ ಸಾಧನ. ವ್ಯಾಸರು ಇದನ್ನು ಹೇಳುವುದು ಹೀಗೆ :-

**ನಾಮ ಸಂಕೀರ್ತನಂ ಯಸ್ಯ ಸರ್ವಪಾಪಪ್ರಣಾಶನಮ್**
**ಪ್ರಣಾಮೋ ದುಃಖಶಮನಸ್ತಂ ನಮಾಮಿ ಹರಿಂ ಪರಮ್ ॥**

ಅಂದರೆ ಯಾವ ಭಗವಂತನ ನಾಮ ಸಂಕೀರ್ತನೆ ಎಲ್ಲ ಪಾಪಗಳನ್ನು ಸರ್ವಥಾ ನಾಶಗೊಳಿಸುತ್ತದೋ ಯಾವ ಭಗವಂತನ ಚರಣಗಳಲ್ಲಿ ಆತ್ಮಸಮರ್ಪಣೆ ಅವನ ಚರಣಗಳಲ್ಲಿನ ಬೆಳಕು ಸದಾ ಎಲ್ಲ ರೀತಿಯ ದುಃಖಗಳನ್ನು ಶಾಂತಗೊಳಿಸುತ್ತದೆ ಆ ಪರಮತತ್ವ ಸ್ವರೂಪ ಶ್ರೀಹರಿಗೆ ನಾನು ನಮಸ್ಕರಿಸುತ್ತೇನೆ. ಭಗವದ್ಭಕ್ತಿಯ ಸಂಸ್ಕಾರ ದೃಢಗೊಳಿಸಲು ವ್ಯಾಸರು ನಾರದಪುರಾಣದಲ್ಲಿ **"ಯಾರ ನಾಲಿಗೆಯ ತುದಿಯಲ್ಲಿ ಹರಿ ಎಂಬ ಎರಡು ಅಕ್ಷರ ವಾಸವಾಗಿದೆಯೋ ಅವರು ಪುನರಾವೃತ್ತಿರಹಿತವಾದ ಶ್ರೀ ವಿಷ್ಣುಧಾಮವನ್ನು ಹೊಂದುತ್ತಾರೆ"** ಎಂದು ತಿಳಿಸಿದ್ದಾರೆ.

**ಜಿಹ್ವಾಗ್ರೇ ವಸತೇ ಯಸ್ಯ ಹರಿರಿತ್ಯಕ್ಷರದ್ವಯಮ್ ।**
**ಸ ವಿಷ್ಣು ಲೋಕಮಾಪ್ನೋತಿ ಪುನರಾವೃತ್ತಿ ದುರ್ಲಭಮ್ ॥**

ನಾರದ ಪುರಾಣದ ಪೂರ್ವಭಾಗ ಅಧ್ಯಾಯ 25 ರಲ್ಲಿ ವೇದವ್ಯಾಸರು ಸಂಸ್ಕಾರಗಳು ಹಾಗೂ ಅವುಗಳ ನಿಯಮಿತ ಕಾಲಗಳ ವಿಶೇಷ ವಿವರಣೆಯನ್ನು ನೀಡಿದ್ದಾರೆ. ವಿವಾಹ ಸಂಸ್ಕಾರಗಳ ಭೇದವನ್ನು ತಿಳಿಸುತ್ತಾ:- ಬ್ರಾಹ್ಮ, ದೈವ, ಆರ್ಷ,ಪ್ರಾಜಾಪತ್ಯ ಅಸುರ, ಗಾಂಧರ್ವ ರಾಕ್ಷಸ ಹಾಗೂ ಪೈಶಾಚ ಇವೆಂಟು ಎಂದು ವಿಂಗಡಿಸುತ್ತಾರೆ. ಇವುಗಳಲ್ಲಿ ಬ್ರಾಹ್ಮ ವಿವಾಹ ಪ್ರಶಸ್ತವಾಗಿದ್ದು, ದೈವ ಹಾಗೂ ಆರ್ಷ ಮಧ್ಯಮವಿದ್ದು ಉಳಿದ ಐದು ರೀತಿಯ ವಿವಾಹಗಳು ನಿಂದಿತ ಎಂದಿದೆ. ಮುಂದೆ ವಿಸ್ತಾರವಾಗಿ ಸದಾಚಾರ ಹಾಗೂ ಶೌಚಾಚಾರ ಮೀಮಾಂಸೆಯನ್ನು ತಿಳಿಸಿದೆಯಲ್ಲದೆ ಸಂಧ್ಯೋಪಾಸನೆಯ ವಿಧಿಯನ್ನು ಹೇಳಿದೆ. ಮೂರೂ ಕಾಲದ ಗಾಯತ್ರೀ ದೇವಿಯ ಧ್ಯಾನಮಂತ್ರವನ್ನು ಕೊಟ್ಟಿದೆ.

ಮಹರ್ಷಿ ವ್ಯಾಸರು ದೈನಿಕ ಆಚಾರಮೀಮಾಂಸೆಯನ್ನು ತಿಳಿಸುತ್ತಾ ಭೂಮಿ ನಮ್ಮ ತಾಯಿ, ತಾಯಿಯನ್ನು ಕಾಲುಗಳಿಂದ ಸ್ಪರ್ಶಿಸುವುದು ನಿಷಿದ್ಧ. ಆದರೂ ಹಾಸಿಗೆಯಿಂದ ಎದ್ದ ಮೇಲೆ ವಿಧಿಯಿಲ್ಲದೆ (ದುಃಖದಿಂದಲೇ) ಭೂಮಿಯ ಮೇಲೆ ಕಾಲಿಡಬೇಕಾಗುತ್ತದೆ. ಹಾಗಾಗಿ ಕೆಳಗಿನ ಮಂತ್ರದಿಂದ ಭೂದೇವಿಯನ್ನು ಕ್ಷಮೆಯಾಚಿಸಬೇಕು.

**ಸಮುದ್ರಮೇ ಖಲೇ ದೇವಿ ಪರ್ವತಸ್ತನ ಮಂಡಲೇ ।**
**ವಿಷ್ಣು ಪತ್ನಿ ನಮಸ್ತುಭ್ಯಂ ಪಾದಸ್ಪರ್ಶಂ ಕ್ಷಮಸ್ವಮೇ ॥**

ಸಂಸ್ಕಾರಗಳ ವಿಧಿ ವಿಧಾನಗಳು ಪವಿತ್ರಜಲವಿಲ್ಲದೆ ಆಗಲಾರದು ಎಂದು ವೇದವ್ಯಾಸರು ತಿಳಿಸುತ್ತಾರೆ. ಆದ್ದರಿಂದ ಸ್ನಾನ, ಆಚಮನ, ಸಂಕಲ್ಪ ಮುಂತಾದುವಕ್ಕೆ ಗಂಗೆಯೇ ಇನ್ನಿತರ ನದಿಗಳ ಪವಿತ್ರ ಜಲವನ್ನು ಯಥಾಶಕ್ತಿ ಉಪಯೋಗಿಸಬೇಕು. ಅದರ ಮಹಿಮೆಯಲ್ಲಿ - ಯಾರ ಕ್ರಿಯೆಗಳೆಲ್ಲವೂ ಗಂಗಾ ಹಾಗೂ ಇನ್ನಿತರ ಜಲಗಳಲ್ಲಿಯೇ ನಡೆಯುತ್ತದೋ ಅವರು ಮನುಷ್ಯ ಶರೀರ ತ್ಯಜಿಸಿ ಭಗವಂತನ ಬಳಿ ಆನಂದಾನುಭವವನ್ನು ಹೊಂದುತ್ತಾರೆ ಎಂದು ತಿಳಿಸಿದ್ದಾರೆ.

**ಸರ್ವಾಣಿ ಯೇಷಾಂ ಗಂಗಾಯಸ್ತೋಯೈಃ ಕೃತ್ಯಾನಿ ಸರ್ವದಾ ।**
**ದೇಹಂ ತ್ಯಕ್ತ್ವಾ ನರಾಸ್ತೇತು ಮೋದಂತೆ ಶಿವಸನ್ನಿಧೌ ॥**

ಪದ್ಮಪುರಾಣದಲ್ಲಿ ಉಪನಯನ ಸಂಸ್ಕಾರ ಪ್ರಕರಣದಲ್ಲಿ ಗಾಯತ್ರಿ ಜಪದ ವಿಶೇಷ ಮಹಿಮೆ ಪ್ರತಿಪಾದಿತವಾಗಿದೆ. ಗಾಯತ್ರಿ ವೇದಗಳ ಜನನಿ, ಗಾಯತ್ರಿ ಸಂಸ್ಕಾರಗಳನ್ನು ಪವಿತ್ರಗೊಳಿಸುವವಳೂ ಎಂದು ತಿಳಿಸಿದೆ. ಗಾಯತ್ರಿಗಿಂತ ಮೇಲಾದ ಬೇರಾವುದೇ ಜಪ ಮಂತ್ರಗಳಿಲ್ಲ ಇದನ್ನು ತಿಳಿದರೆ ಮನುಷ್ಯ ಮುಕ್ತಿ ಹೊಂದುತ್ತಾನೆ.

**ಗಾಯತ್ರೀ ವೇದ ಜನನೀ ಗಾಯತ್ರೀ ಲೋಕಪಾವನೀ ।**
**ಗಾಯತ್ರ್ಯಾನ ಪರಂ ಜಪ್ಯಮೇತದ್ವಿಜ್ಞಾಯ ಮುಚ್ಯತೇ ॥**

ವೇದವ್ಯಾಸರು ರಚಿಸಿದ ಪದ್ಮಪುರಾಣದ ಪಾತಾಳ ಖಂಡದಲ್ಲಿ ಒಂದು ವರ್ಣನೆ ಬಂದಿದೆ. - ಸೀತಾ ಮಾತೆ ಮಹರ್ಷಿ ವಾಲ್ಮೀಕಿಗಳ ಆಶ್ರಮದಲ್ಲಿ ಪರ್ಣಶಾಲೆಯಲ್ಲಿದ್ದಾಗ ಇಬ್ಬರು ಮಕ್ಕಳಿಗೆ ಜನ್ಮಕೊಟ್ಟಳು. ಇವರು ಆಕೃತಿಯಲ್ಲಿ ಶ್ರೀರಾಮಚಂದ್ರನಂತೆಯೂ ಹಾಗೂ ಅಶ್ವಿನಿ ಕುಮಾರರಂತೆಯೂ ಸುಂದರರಾಗಿದ್ದರು. ಇದನ್ನು ಕೇಳಿ ಮಹರ್ಷಿ ವಾಲ್ಮೀಕಿಗಳಿಗೆ ಬಹಳ ಸಂತೃಪ್ತಿ. ಅವರು ಮಂತ್ರ ವೇತ್ತಾರರಲ್ಲಿ ಶ್ರೇಷ್ಠರು. ಹಾಗಾಗಿಯೇ ಆ ಬಾಲಕರ ಜಾತಕರ್ಮ ಮುಂತಾದ ಸಂಸ್ಕಾರಗಳನ್ನು ಅವರೇ ನಿರ್ವಹಿಸಿದರು. ಮಹರ್ಷಿ ವಾಲ್ಮೀಕಿಗಳು ಆ ಮಕ್ಕಳ ಸಂಸ್ಕಾರ ಸಂಬಂಧದ ಎಲ್ಲ ಕ್ರಿಯೆಗಳನ್ನು ದರ್ಬೆ ಹಾಗೂ ಅವುಗಳ ಚೂರುಗಳಿಂದಲೇ ಮಾಡಿದ್ದು, ಆದ್ದರಿಂದ ಅವರಿಬ್ಬರಿಗೂ ಕುಶ ಮತ್ತು ಲವ

ಎಂದು ನಾಮಕರಣ ಮಾಡಿದ್ದು, ವಿಷ್ಣು ಪುರಾಣದಲ್ಲಿ ಜಾತಕರ್ಮ, ನಾಮಕರ್ಮ, ಉಪನಯನ ಹಾಗೂ ವಿವಾಹ ಮುಂತಾದವುಗಳ (ಸಂಸ್ಕಾರಗಳ)ವರ್ಣನೆ ಇದೆ ಜಾತಕರ್ಮದ ವಿಷಯದಲ್ಲಿ ವ್ಯಾಸರು ಮಗ ಹುಟ್ಟಿದ ಮೇಲೆ ತಂದೆಯಾದವನು ಅದರ ಜಾತಕರ್ಮ ಮುಂತಾದ ಸಮಸ್ತ ಕ್ರಿಯಾಕಾಂಡ ಮತ್ತು ಅಭ್ಯುದಯಿಕವಾದ ಶ್ರಾದ್ಧ ವನ್ನು ಮಾಡಬೇಕೆಂದು ತಿಳಿಸಿದ್ದಾರೆ.

**ಜಾತಸ್ಯ ಜಾತಕರ್ಮಾದಿಕ್ರಿಯಾಕಾಂಡ ಮಶೇಷತಃ।**
**ಪುತ್ರಸ್ಯ ಕುರ್ವೀತ ಪಿತಾ ಶ್ರಾದ್ಧಂ ಚಾಭ್ಯುದಯಾತ್ಮಕಮ್॥**

ಮುಂದೆ ಉಪನಯನ ಸಂಸ್ಕಾರವಾದ ಮೇಲೆ ಗುರುಗೃಹದಲ್ಲಿದ್ದು ಕೊಂಡೇ ವಿಧಿಪೂರ್ವಕ ವಿದ್ಯಾಧ್ಯಯನ ಮಾಡಬೇಕೆಂದು ತಿಳಿಸ ಲಾಗಿದೆ:-

**ತತ್ಯೋಽನಂತರ ಸಂಸ್ಕಾರ ಸಂಸ್ಕೃತೋ ಗುರುವೇಶ್ಮನಿ।**
**ಯಥೋಕ್ತವಿಧಿಮಾಶ್ರಿತ್ಯ ಕುರ್ಯಾದ್ವಿದ್ಯಾಪರಿಗ್ರಹಮ್॥**

ವಿವಾಹ ಸಂಸ್ಕಾರದ ವಿವರಣೆಯಲ್ಲಿ, ಮಾತೃ ಪಕ್ಷದಿಂದ ಐದ ನೆಯ ಪೀಳಿಗೆಯವರಿಗೆ ಮತ್ತು ಪಿತೃಪಕ್ಷದಿಂದ ಏಳನೆಯ ಪೀಳಿಗೆಯ ವರೆಗೆ ಕನ್ಯೆಯ ಸಂಬಂಧವಿಲ್ಲದಿರುವಲ್ಲಿ, (ಗೃಹಸ್ಥ) ಪುರುಷನಿಗೆ ನಿಯ ಮಾನುಸಾರ ವಿವಾಹ ಮಾಡಬೇಕೆಂದು ವ್ಯಾಸರು ತಿಳಿಸಿದ್ದಾರೆ.

**ಪಂಚಮೀ ಮಾತೃಪಕ್ಷಾಯ ಪಿತೃಪಕ್ಷಾಯ ಸಪ್ತಮೀಮ್।**
**ಗೃಹಸ್ಥಶ್ಚೋಹೇತ್ಕನ್ಯಾಂ ನ್ಯಾಯೇನ ವಿಧಿನಾನೃಪ॥**

ಮಹರ್ಷಿಗಳು ಮಾತಾ-ಪಿತರ ಸೇವೆಯನ್ನು ಪಾರಮಾರ್ಥಿಕ ಸಂಸ್ಕಾರ ರೂಪದಲ್ಲಿ ತಿಳಿಸುತ್ತಾ ಅದರ ಮಹಿಮೆಯನ್ನು ಕೊಂಡಾ ಡುತ್ತಾರೆ.

**ಸರ್ವತೀರ್ಥಮಯೀ ಮಾತಾ ಸರ್ವದೇವಮಯಃ ಪಿತಾ।**
**ಮಾತರಂ ಪಿತರಂ ತಸ್ಮಾತ್ ಸರ್ವಯತ್ನೇನ ಪೂಜಯೇತ್॥**

ಅಂದರೆ ತಾಯಿಯಲ್ಲಿ ಎಲ್ಲ ತೀರ್ಥಗಳ ಅಧಿಷ್ಠಾನವಿದೆ. ಎಲ್ಲ ತೀರ್ಥಗಳಿಗೆ ಇರುವ ಪಾವಿತ್ರತೆಗಿಂತಲೂ ಹೆಚ್ಚು ಪಾವಿತ್ರತೆ ತಾಯಿ ಯಲ್ಲಿದೆ. ಇದರಂತೆಯೇ ತಂದೆಯಲ್ಲಿ ಎಲ್ಲ ದೇವತೆಗಳೂ ಪ್ರತಿಷ್ಠಿತ ರಾಗಿದ್ದಾರೆ. ಎಲ್ಲ ರೀತಿಯ ಪ್ರಯತ್ನಗಳಿಂದ ತಾಯಿ-ತಂದೆಗಳ ಸೇವಾ ಪೂಜೆ ಮಾಡಬೇಕು.

ಇಂತಹ ಸದಾಚಾರ ಸಂಪನ್ನನೂ, ಸಂಸ್ಕಾರವಂತನೂ, ಧರ್ಮಾತ್ಮ ಪುರುಷನನ್ನು ದೇವಸ್ವರೂಪವೆನ್ನುತ್ತಾರೆ ವ್ಯಾಸರು ಯಾವನು ಜಿತೇಂದ್ರಿಯನಾಗಿ, ದುರ್ಗುಣಗಳಿಂದ ಮುಕ್ತನಾಗಿ, ನೀತಿಶಾಸ್ತ್ರ ತತ್ವ ಗಳನ್ನು ತಿಳಿದವನಾಗಿರುತ್ತಾನೋ ಹಾಗೂ ಇಂತಹ ಉತ್ತಮ ಗುಣ ಗಳಿಂದ ಪವಿತ್ರನಾಗಿರುವವನು ಬಯಸಿದರೆ ಸ್ವರ್ಗಲೋಕವಾಸಿಯಾಗ ಬಹುದು.

ಇಲ್ಲವೇ ಭೂಲೋಕದಲ್ಲಿರಬಹುದು. ಒಂದು ವೇಳೆ ಪುರಾಣ ಗಳಲ್ಲಿ ಮತ್ತು ಆಗಮಗಳಲ್ಲಿ ನಿರ್ದಿಷ್ಟವಾದ ಸದಾಚರಣ ರೂಪ ಪುಣ್ಯ ಕಾರ್ಯಗಳನ್ನು ಪಾಲಿಸುವವನಾದರೆ ಈ ಭೂಮಂಡಲವನ್ನು ಉದ್ಧರಿ ಸಲು ಸಮರ್ಥನಾಗಿರುತ್ತಾನೆ.

**ಯೋ ದಾಂತೋ ವಿಗುಣೈರ್ಮುಕ್ತೋ ನೀತಿ ಶಾಸ್ತ್ರಾರ್ಥತತ್ತ್ವಗಃ**
**ಏತೈಶ್ಚ ವಿವಿಧೈಃ ಪುತಃ ಸ ಭವೇತ್ಸುರಲಕ್ಷಣಃ॥**
**ಪುರಾಣಾಗಮಕರ್ಮಾಣಿ ನಾಕೇಶ್ವತ್ರ ಚ ವೈ ದ್ವಿಜಃ।**
**ಸ್ವಯಮಾಚರತೇ ಪುಣ್ಯಂ ಸ ಧರೋದ್ಧರಣ ಕ್ಷಮಃ॥**

ಮಹರ್ಷಿ ವೇದವ್ಯಾಸ ಪ್ರಣೀತವಾದ ಅಗ್ನಿ ಪುರಾಣವಾದರೋ ಸಮಸ್ತ ವಿದ್ಯೆಗಳು ಕಲೆಗಳು ಹಾಗೂ ಜ್ಞಾನ-ವಿಜ್ಞಾನಗಳ ಕೋಶವೇ ಆಗಿದೆ. ಸ್ವತಃ ವ್ಯಾಸರು ಹೇಳುವುದು.

**"ಆಗ್ನೇಯೋ ಹಿ ಪುರಾಣೇಽಸ್ಮಿನ್ ಸರ್ವವಿದ್ಯಾಃ ಪ್ರದರ್ಶಿತಾ॥"**

ಅದರಂತೆ ಇದರಲ್ಲಿ ಸಂಸ್ಕಾರಗಳ ಸೂಕ್ಷ್ಮ ಆದರೆ ಮಹತ್ವಪೂರ್ಣ ವರ್ಣನೆಗಳಿವೆ. ಗೃಹಸ್ಥ ಧರ್ಮದ ಪ್ರಕರಣದಲ್ಲಿ ವ್ಯಾಸರು ತಿಳಿಸಿರುವುದು, ಗರ್ಭಾಧಾನದ ನಂತರ ಗರ್ಭ ಸ್ಪಷ್ಟರೂಪದಲ್ಲಿ ತಿಳಿದ ಮೇಲೆ ಗರ್ಭಸ್ಥ ಶಿಶು ಅಲುಗಾಡುವ ಮುನ್ನವೇ ಪುಂಸವನ ಸಂಸ್ಕಾರವಾಗುತ್ತದೆ. ಅನಂತರ ಆರು ಇಲ್ಲವೇ ಎಂಟನೆಯ ತಿಂಗಳಿನಲ್ಲಿ ಸೀಮಂತೋನ್ನಯನ ಮಾಡಲ್ಪ ಡುತ್ತದೆ. ಗಂಡು ಮಗು ಜನಿಸಿದ ಮೇಲೆ ನಾಭಿನಾಳವನ್ನು ಕತ್ತರಿಸುವ ಅದರ ಜಾತಕರ್ಮ ಸಂಸ್ಕಾರ ಮಾಡಬೇಕು. ಸೂತಕ ನಿವೃತ್ತಿಯಾದ ಮೇಲೆ ನಾಮಕರಣ ಸಂಸ್ಕಾರ ಮಾಡಬೇಕು.

**"ಅಶೌಚೇತು ವ್ಯತಿ ಕ್ರಾಂತೇ ನಾಮಕರ್ಮವಿಧೀಯತೇ।"**

ಮೇಲೆ ಹೇಳಿದ ಸಂಸ್ಕಾರದ ಸಮಯದಲ್ಲಿ ಪತ್ನಿಯಾದವಳು ಪತಿಯ ಮಡಿಲಿನಲ್ಲಿ ಮಗುವನ್ನು ಬಿಟ್ಟು (ಮಲಗಿಸಿ) ಇದು ನಿಮ್ಮ ಮಗು ಎಂದು ಹೇಳಬೇಕು.

**"ಬಾಲಂ ನಿವೇದಯೇದ್ ಭರ್ತ್ರೇ ತವ ಪುತ್ರೋಽಯಮಿತ್ಯುತ।"**

ಮತ್ತೆ ಕುಲಾಚರಣೆಯ ಅನುಸಾರ ಚೂಡಾಕರಣವನ್ನು (ಚೂಡಾ ಕರ್ಮ) ಮಾಡಿ ಉಪನಯನ ಸಂಸ್ಕಾರ ಮಾಡಬೇಕು. ಬ್ರಾಹ್ಮಣವಟು ಭಿಕ್ಷೆಯನ್ನು ಬೇಡುವಾಗ ವಾಕ್ಯದ ಮುಂದೆ (ಮೊದಲು)**'ಭವತ್'** ಶಬ್ದವನ್ನು ಪ್ರಯೋಗಿಸಬೇಕು. ತಾಯಿಯ ಬಳಿ ಹೋಗಿ **"ಭವತಿ ಭಿಕ್ಷಾಂ ಮೆ ದೇಹಿಮಾತಃ"** ಇದರಂತೆ ಕ್ಷತ್ರಿಯವಟು ವಾಕ್ಯದ ಮಧ್ಯದಲ್ಲಿ ಹಾಗೂ ವೈಶ್ಯವಟು ಅಂತ್ಯದಲ್ಲಿ ಭವತ್ ಶಬ್ದವನ್ನು ಬಳಸಬೇಕು. ಹಾಗಾಗಿ ಕ್ಷತ್ರಿಯ ವಟು **"ಭಿಕ್ಷಾಂ ಭವತಿ ಮೆ ದೇಹಿ ಎಂದು ವೈಶ್ಯವಟು - ಭಿಕ್ಷಾಂ ಮೇ ದೇಹಿಭವತಿ"** ಎಂದು ಹೇಳಬೇಕು. ವ್ಯಾಸರು ಸಂಕ್ಷೇಪವಾಗಿ ಈ ವಿಷಯ ವನ್ನು ನಿದರ್ಶನಗೊಳಿಸುತ್ತಾ ಹೇಳಿದ್ದಾರೆ.

**'ಆದಿ ಮಧ್ಯಾವಸಾನೇಷು ಭವಚ್ಛಬ್ದೋ ಪಲಕ್ಷಿತಮ್'**

ಉಪನಯನ ಮಾಡಿ ಗುರು ಬ್ರಹ್ಮಚಾರಿಗೆ ಶೌಚಾಚಾರ, ಸದಾ ಚಾರ, ಅಗ್ನಿಹೋತ್ರ ಹಾಗೂ ಸಂಧ್ಯೋಪಾಸನೆಯ ಶಿಕ್ಷಣವನ್ನು ಕೊಡ ಬೇಕು.

**ಉಪನೀಯ ಗುರುಃ ಶಿಷ್ಯಂ ಶಿಕ್ಷಯೇ ಚ್ಛೌಚ ಮಾದಿತಃ।**
**ಆಚಾರಮಗ್ನಿ ಕಾರ್ಯಂ ಚ ಸಂಧ್ಯೋಪಾಸನ ಮೇವ ಚ॥**



# ಮಾನವನ ಏಳಿಗೆಗೆ ಷೋಡಷ ಸಂಸ್ಕಾರಗಳ ವಿಧಿ

**ಡಾ|| ವಿಷ್ಣುದತ್ತ ಪ್ರಭುಜಿ**

ಚಿತ್, ಅಚಿತ್ ಮತ್ತು ಈಶ್ವರ - ಎಂದು ತತ್ವವು ಮೂರು ವಿಧವಾಗಿರುತ್ತವೆ. ಇದು-ಶ್ವೇತಾಶ್ವತರೋಪನಿಷತ್ತಿನಲ್ಲಿ **'ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ'** ಎಂಬ ವಾಕ್ಯದಲ್ಲಿ ತಿಳಿಸಲ್ಪಟ್ಟಿದೆ. ಭೋಗವನ್ನನುಭವಿಸುವವನು ಭೋಕ್ತಾ ಇವನೇ ಚಿತ್ ಚೇತನ ಅಥವಾ ಜೀವಾತ್ಮ ಸ್ವರೂಪನು. ಜೀವಾತ್ಮರು ಮೂರು ವಿಧವಾಗಿರುತ್ತಾರೆ. ನಿತ್ಯರು, ಮುಕ್ತರು ಮತ್ತು ಬದ್ಧರೆಂದು, ಅನಾದಿಕರ್ಮ ದಿಂದ ಕಟ್ಟಲ್ಪಟ್ಟವರಾಗಿ ಜನ್ಮಮರಣಚಕ್ರದಲ್ಲಿ ಸಿಲುಕಿಕೊಂಡು ಸಂಸಾರ ಸಾಗರದಲ್ಲಿ ತೊಳಲುತ್ತಿರುವ ಚೇತನರನ್ನು 'ಬದ್ಧರು' ಎನ್ನುತ್ತಾರೆ. ಒಂದು ಕಾಲದಲ್ಲಿ ಬದ್ಧರಾಗಿದ್ದು ಕರ್ಮಬಂಧವನ್ನು ಬಿಡಿಸಿ ಕೊಳ್ಳಲು ಮಾಡಬೇಕಾದ ಸಾಧನೆಗಳನ್ನು ಮಾಡಿ, ಕರ್ಮಬಂಧದಿಂದ ಬಿಡುಗಡೆ ಹೊಂದಿರುವ ಚೇತನರನ್ನು, **'ಮುಕ್ತರು'** ಎನ್ನುತ್ತಾರೆ ಎಂದೂ ಕರ್ಮಬಂಧಕ್ಕೆ ಒಳಗಾಗದೆ ಶ್ರೀವೈಕುಂಠ ಲೋಕದಲ್ಲಿ ಪರಬ್ರಹ್ಮವನ್ನನುಭವಿಸುತ್ತಾ ಪರಿಪೂರ್ಣ ಬ್ರಹ್ಮಾನಂದವನ್ನು ಅನುಭವಿಸುತ್ತಿರುವ ಚೇತನರನ್ನು **"ನಿತ್ಯರ"** ಎನ್ನುತ್ತಾರೆ.


ಈ ಬದ್ಧ ಚೇತನರಿಂದ ಅನುಭವಿಸಲ್ಪಡುವ ವಸ್ತುವನ್ನು **'ಭೋಗ್ಯ'** ಎನ್ನುತ್ತಾರೆ. ಇದು ಜಡಸ್ವರೂಪವಾದ ಪ್ರಕೃತಿ. ಇದರಲ್ಲಿ ಸ್ವತಃ ಪ್ರಕಾಶವಾದ ಚೈತನ್ಯವಿಲ್ಲದಿರುವುದರಿಂದ ಇದನ್ನು **'ಅಚೇತನ'** ಎಂದೂ ಕರೆಯುತ್ತಾರೆ. ಇದು ಪ್ರಕೃತಿ, ಮಹಾನ್, ಅಹಂಕಾರ, ವಾಕ್,ಪಾಣಿ,ಪಾದ,ಪಾಯು (ಗುದದ್ವಾರ) ಮತ್ತು ಉಪಸ್ಥ (ಗುಹೇಂದ್ರಿಯ) ಎಂಬ ಐದು ಕರ್ಮೇಂದ್ರಿಯ ಕಣ್ಣು, ಕಿವಿ, ನಾಲಿಗೆ, ಮೂಗು ಮತ್ತು ಚರ್ಮ-ಎಂಬ ಐದು ಜ್ಞಾನೇಂದ್ರಿಯಗಳು. ಮನಸ್ಸು, ಶಬ್ದತನ್ಮಾತ್ರ, ಆಕಾಶ, ಸ್ಪರ್ಶತನ್ಮಾತ್ರ,ವಾಯು, ರೂಪತನ್ಮಾ ತ್ರ, ತೇಜಸ್, ರಸತನ್ಮಾತ್ರ, ಅಪ್,ಗಂಧತನ್ಮಾತ್ರ ಮತ್ತು ಪೃಥಿವೀ-ಎಂದು ಇಪ್ಪತ್ತನಾಲ್ಕು ವಿಧವಾಗಿರುತ್ತದೆ. ಇವುಗಳ ಸಂಮಿಶ್ರಣ ದಿಂದಲೇ ವಿಶ್ವವು ಸ್ಪಷ್ಟವಾಗಿರುತ್ತದೆ. ಇವುಗಳಿಂದಲೇ, ಪ್ರತಿಯೊಬ್ಬ ಬದ್ಧ ಚೇತನರ ದೇಹವೂ ಸ್ಪಷ್ಟವಾಗಿರುತ್ತವೆ. ಬದ ಚೇತನರಿಗೂ ಈ ಪ್ರಕೃತಿಗೂ ಸಂಬಂಧವೇರ್ಪಡುವುದೇ ಸೃಷ್ಟಿ. ಇದರಿಂದ ಚೇತನರು ತಮ್ಮ ಅನಾದಿಯಾದ ಕರ್ಮದಿಂದ ಜನ್ಮಮರಣ ಚಕ್ರದಲ್ಲಿ ಸಿಲುಕಿಕೊಂಡು ತೊಳಲುತ್ತಿರುವುದೇ ಸ್ಥಿತಿ. ಬದ್ಧ ಚೇತನರಿಗೆ ಅವರವರ ಕರ್ಮವು ಪೂರ್ಣವಾಗಿ ಸವೆಯದಿದ್ದರೂ ಈ ಪ್ರಕೃತಿಯಿಂದ ಬೇರ್ಪಡುವುದೇ ಪ್ರಲಯ ಅಥವಾ ಲಯ. ಪ್ರಕೃತಿ ಬಂಧನದಿಂದ ಬಿಡಿಸಿಕೊಳ್ಳುವುದಕ್ಕೆ ಮೋಕ್ಷ.

ಈ ಚೇತನ ಅಚೇತನಗಳನ್ನು ಒಳ ಹೊರಗೆ ಎಲ್ಲೆಡೆಯೂ ವ್ಯಾಪಿಸಿಕೊಂಡು ತನ್ನ ನಿಯಮದಲ್ಲಿಟ್ಟು ಕೊಂಡಿರುವವನೇ ಈಶ್ವರ, ಪರಮಾತ್ಮಾ ಅಥವಾ ಪರಬ್ರಹ್ಮ. ಪ್ರಲಯ ದಶೆಯಲ್ಲಿ ಪ್ರಕೃತಿಯನ್ನೂ ಬದ್ಧ ಚೇತನರನ್ನೂ ಪರಮಾತ್ಮನು ತನ್ನ ಉದರದಲ್ಲಿ ಅಡಗಿಸಿ ಇಟ್ಟು ಕೊಂಡಿರುತ್ತಾನೆ. ಲೋಕದಲ್ಲಿ ಜೇಡರ ಹುಳುವು ಸ್ವೇಚ್ಛೆಯಿಂದ, ತನ್ನ ಲಾಲಾರಸದಿಂದಲೇ ಬಲೆಯನ್ನು ಕಟ್ಟಿ, ತಾನೂ ಅದರ ಒಳಹೊಕ್ಕು ಕೆಲ ಕಾಲವಿದ್ದು ತನಗೆ ಬೇಡವೆಂದಾಗ, ಆ ಬಲೆಯನ್ನು ಸೆಳೆದುಕೊಂಡು ತನ್ನಲ್ಲಿಯೇ ಅಡಗಿಸಿ ಇಟ್ಟುಕೊಳ್ಳುವಂತೆ, ಪರಮಾತ್ಮನೂ ತನ್ನ ಸಂಕಲ್ಪದಿಂದಲೇ ಚೇತನಾಚೇತನಾತ್ಮಕವಾದ ವಿಶ್ವದ ಸೃಷ್ಟಿ,ಸ್ಥಿತಿ,ಲಯಗಳನ್ನು ಮಾಡುತ್ತಿರುತ್ತಾನೆ.

**ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ' ಮುಂಡಕೋಪನಿಷತ್**
**ಯಥೋರ್ಣನಾಭಿಃ ಹೃದಯಾದೂರ್ಣಂ ಸಂತತ್ಯ ವಸ್ತುತಃ।**
**ತಯಾ ವಿಹೃತ್ಯ ಭೂಯಸ್ತಾ ಪ್ರಸತ್ಯೇವಂ ಜನಾರ್ದನಃ॥**

**ವಿಷ್ಣುಪುರಾಣ**

ಸೃಷ್ಟಿ, ಸ್ಥಿತಿ ದೆಸೆಗಳಲ್ಲಿ ಬದ್ಧ ಜೀವರಿಗೆ ಅವರವರ ಅನಾದಿಯಾದ ಕರ್ಮಫಲವನ್ನು ಭುಜಿಸಲು ಯೋಗ್ಯವಾದ ಶರೀರವನ್ನು ಕೊಟ್ಟು, ಅವನು



ಉತ್ತರೋತ್ತರ ಕರ್ಮವನ್ನು ಮಾಡಲು ಸ್ವಾತಂತ್ರ್ಯವನ್ನೂ ಕೊಟ್ಟು, ಅವನು ಆ ಕರ್ಮದ ಸಂಕೋಲೆಯಲ್ಲಿದ್ದರೂ ಉತ್ತರೋತ್ತರ ಉಚ್ಚ, ಉಚ್ಚತರ, ಉಚ್ಚತಮ ಜನ್ಮಗಳನ್ನು ಪಡೆಯಲು, ಅಥವಾ ಪಡೆದಿರುವ ಜನ್ಮದಲ್ಲಿಯೇ ದುಃಖವನ್ನು ದೂರಮಾಡಿಕೊಂಡು ನಾನಾ ತರಹವಾದ ಸುಖ ಭೋಗಗಳನ್ನು ಪಡೆಯಲು ಮಾಡಬೇಕಾದ ಕರ್ಮಗಳನ್ನೂ, ಕರ್ಮದಿಂದ ಎಂದೂ ನಿರಂತರವಾದ ಸುಖವನ್ನು ಪಡೆಯಲಾಗದಿರುವುದರಿಂದ, ಕರ್ಮಬಂಧವನ್ನು ನೀಗಿ, ಮೋಕ್ಷವನ್ನು ಪಡೆದು ನಿರಂತರವಾದ ಸುಖವನ್ನು ಪಡೆಯುವ ಮಾರ್ಗವನ್ನು ತಿಳಿಸುವ ಜ್ಞಾನರೂಪವಾದ ವೇದ-ಶಾಸ್ತ್ರಗಳನ್ನೂ ಅನುಗ್ರಹಿಸಿಕೊಟ್ಟಿರುತ್ತಾನೆ.

ಈಶ್ವರನು ಜೀವನಿಗೆ ಅಂತರ್ಯಾಮಿಯಾಗಿದ್ದು ಇದು ಒಳ್ಳೆಯ ಕರ್ಮ-ಇದು ಕೆಟ್ಟ ಕರ್ಮ-ಎಂದು ವಿಭಜಿಸಿ ತಿಳಿಯುವ ಸಾಮರ್ಥ್ಯವನ್ನೂ ಕೊಟ್ಟಿರುತ್ತಾನೆ. ಚೇತನನು ಕೆಟ್ಟ ಕರ್ಮಗಳಲ್ಲಿ ತೊಡಗಿದಾಗ, ಒಂದು ಕ್ಷಣ ತಡೆಯುತ್ತಾನೆ. ಅಷ್ಟರಲ್ಲಿ ಎಚ್ಚೆತ್ತುಕೊಳ್ಳದೆ, ಚೇತನನು ಅದೇ ಕರ್ಮವನ್ನು ಮಾಡುವುದಾಗಿ ತೊಡಗಿದರೆ. ಅದಕ್ಕೆ ಅನುಮತಿಯನ್ನಿತ್ತು ಆಯಾ ಕರ್ಮಗಳನ್ನು ಮಾಡಲು ಶಕ್ತಿಯನ್ನೂ ಕೊಟ್ಟು ಅವನು ಮಾಡಿದ ಕರ್ಮಗಳಿಗನುಗುಣವಾಗಿ ಸುಖ-ದುಃಖ ರೂಪವಾದ ಫಲವನ್ನು ಕೊಟ್ಟು, ಅವುಗಳನ್ನು ಅನುಭವಿಸುವಂತೆಯೂ ಪ್ರೇರಿಸುತ್ತಾನೆ. ಆದುದರಿಂದ ಇವನನ್ನು **'ಪ್ರೇರಿತಾ'** ಎಂದು ಉಪನಿಷದ್ವಾಣಿಯು ತಿಳಿಸಿರುತ್ತದೆ.

**ಆದಾವೀಶ್ವರದತ್ತಯ್ಯವ ಕೃಪಯಾ ಸ್ವಾತಂತ್ರ್ಯಶಕ್ತ್ಯಾ ಸ್ವಯಂ**
**ತತ್ತತ್ಕರ್ಮ ಚಿಕೀರ್ಷಣ ಪ್ರಯತನಾನ್ಯು ತ್ಪಾದಯನ್ ವರ್ತತೇ ।**
**ತತ್ರೋಪೇಕ್ಷ್ಯ ತತೋನುಮಕ್ತ ವಿದಧತ್ತನ್ನಿ**
**ಗ್ರಹಾನುಗ್ರಹೌ ತತ್ತತ್ಕರ್ಮಫಲಂ ಪ್ರಯಚ್ಛತಿ ಯತಃ ಸರ್ವಸ್ಯ ಪುಂಸೋ ಹರಿಃ॥**

**ವಾತ್ಮವರದಾಚಾರ್ಯರ ನ್ಯಾಯಸಾರ :**

ಯಾವ ವಿಕಾರಕ್ಕೂ ಒಳಗಾಗದಿರುವ ನಿತ್ಯಾತ್ಮರೂ ಮತ್ತು ಮುಕ್ತಾತ್ಮರೂ ಬ್ರಹ್ಮಾನಂದ ಪಡುತ್ತಿರುವ ಸ್ಥಳವೇ **'ಶ್ರೀವೈಕುಂಠ'** ಅಥವಾ **'ನಿತ್ಯವಿಭೂತಿ'** ಎಂದೂ, ಪರಮಾತ್ಮನಿಂದ ಅವನ ಲೀಲೆಗೋಸ್ಕರವಾಗಿ ಸೃಷ್ಟವಾದ ಚೇತನಾಚೇತನಾತ್ಮಕವಾದ ಪ್ರಪಂಚವು **'ಲೀಲಾ ವಿಭೂತಿ'**-ಎಂದೂ ಕರೆಯಲ್ಪಡುತ್ತದೆ. ಈ ಉಭಯ ವಿಭೂತಿಗೂ ಅವನೇ ಪ್ರಭುವಾಗಿರುತ್ತಾನೆ.

**ವರ್ಣಾಶ್ರಮಗಳ ಸ್ಥಾಪನೆ :**

ಉಭಯ ವಿಭೂತಿ ನಾಯಕನಾದ ಪರಮಾತ್ಮನು ತನ್ನ ಲೀಲಾ ವಿಭೂತಿಯು ಸುವ್ಯವಸ್ಥಿತವಾಗಿರಲು, ಸೃಷ್ಟವಾದ ಪ್ರಜೆಗಳಲ್ಲಿ ಅವರವರ ಪೂರ್ವಾರ್ಜಿತ ಕರ್ಮಗಳಿಗನುಗುಣವಾಗಿ, ಪ್ರಕೃತ ಪಡೆದಿರುವ ದೇಹದಿಂದ ಅವರು ಮಾಡಬಹುದಾದ ಕರ್ಮಾನುಷ್ಠಾನಗಳಿಗೆ ಸಾಮರ್ಥ್ಯವನ್ನು ಅಥವಾ ಅರ್ಹತೆಯನ್ನು ಹೊಂದಿ, ಅವರು ಮಾಡುವ ಕರ್ಮಗಳಿಗನುಗುಣವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ನಾಲ್ಕು ವರ್ಣಗಳನ್ನು ಸ್ಥಾಪಿಸಿದನು.

ಇವರಲ್ಲಿ ಬ್ರಾಹ್ಮಣನು ಸತ್ತ್ವಗುಣದಿಂದ ಕೂಡಿದವನಾಗಿ, ವಿಶೇಷವಾಗಿ ತಾನೂ ಜ್ಞಾನವನ್ನು ಪಡೆದು ಮತ್ತೊಬ್ಬರಿಗೂ ಕೊಡುವವನಾಗಿರುತ್ತಾನೆ. ಒಳ್ಳೆಯ ವಾಕ್ಸಾಮರ್ಥ್ಯವನ್ನು ಹೊಂದಿದವನಾಗಿರುತ್ತಾನೆ. **'ವಾಚಿ ಶೌರ್ಯಂ ಬ್ರಾಹ್ಮಣಸ್ಯ'**, ಕ್ಷತ್ರಿಯನು ಲೋಕದಲ್ಲಿನ ಸತ್ ಪ್ರಜೆಗಳಿಗೆ ಶತ್ರುಗಳಿಂದ ಒದುಗುವ ತೊಂದರೆಗಳನ್ನು ನಿವಾರಣೆ ಮಾಡಿ, ದೇಶವನ್ನೇ ರಕ್ಷಿಸುವವನಾಗಿರುತ್ತಾನೆ. ಈ ತರಹದ ರಕ್ಷಣೆಗೆ ಅತ್ಯವಶ್ಯಕವಾದ ತೋಳ್ಬಲ ಪರಾಕ್ರಮಗಳನ್ನು ಹೊಂದಿರುತ್ತಾನೆ. ವೈಶ್ಯನಾದರೋ, ಕೃಷಿ, ವಾಣಿಜ್ಯಗಳನ್ನು ಮಾಡಿ, ದೇಶದಲ್ಲಿನ ಪ್ರಜೆಗಳೆಲ್ಲರಿಗೂ ಬೇಕಾದ ದವಸ ಧಾನ್ಯಗಳೇ ಮುಂತಾದ ಅವಶ್ಯಕವಾದ ಪದಾರ್ಥಗಳನ್ನು ಒದಗಿಸಿಕೊಟ್ಟು ಪ್ರಜೆಗಳ ಸಂರಕ್ಷಣೆಗೆ ಕಾರಣನಾಗಿರುತ್ತಾನೆ.

ಶೂದ್ರನಾದರೊ ಈ ಮೂರು ವರ್ಣದವರೂ ಅವರವರ ಕೆಲಸಗಳನ್ನು ಮಾಡಲು ಅನುಕೂಲವಾಗುವಂತೆ ಸೇವೆಯನ್ನು ಮಾಡುತ್ತಾ, ಲೋಕದ ವ್ಯವಸ್ಥೆಗೆ ಕಾರಣನಾಗಿರುತ್ತಾನೆ. ಲೋಕವು ಸುವ್ಯವಸ್ಥಿತವಾಗಿರಲು ಈ ನಾಲ್ಕೂ ವರ್ಣದ ಜನರೂ ಅವರವರ ಕೆಲಸಗಳನ್ನು ಸರಿಯಾಗಿ ಮಾಡಿದರೆ ಮಾತ್ರ ಸಾಧ್ಯ. ಇಲ್ಲದಿದ್ದರೆ ಸಾಧ್ಯವಿಲ್ಲ. ಲೋಕದ ದೃಷ್ಟಿಯಿಂದ ಸಮಾಜದಲ್ಲಿ ಈ ನಾಲ್ಕೂ ವರ್ಣದವರೂ ಸಮಾನರು. ಯಾರೊಬ್ಬರೂ ಉತ್ತಮರೂ ಅಲ್ಲ ಅಥವಾ ಯಾರೊಬ್ಬರೂ ನೀಚರೂ ಅಲ್ಲ. ಆದರೆ, ಈ ನಾಲ್ಕು ವರ್ಣದವರಲ್ಲಿ ಬ್ರಾಹ್ಮಣರ ಜವಾಬ್ದಾರಿ ಅಧಿಕವಾಗಿರುತ್ತದೆ. ನಾಲ್ಕೂ ವರ್ಣದ ಜನರಿಗೆ ಅವರವರ ಕಸುಬಿನ ಅರಿವನ್ನುಂಟು ಮಾಡುವುದರೊಡನೆ ಅವರ ಕಸುಬಿಗೆ ಬೇಕಾದ ಜ್ಞಾನವನ್ನೂ ಬೋಧನೆ ಮಾಡಬೇಕು.

ಲೋಕದಲ್ಲಿರುವ ಪ್ರಜೆಗಳೆಲ್ಲರಿಗೂ ಕ್ಷೇಮವಾಗಲೆಂದು ತಾವು ವೇದಾಧ್ಯಯನವನ್ನು ಮಾಡಿ, ಬ್ರಾಹ್ಮಣ, ಕ್ಷತ್ರಿಯ ವೈಶ್ಯರೆಂಬ ತ್ರೈವರ್ಣಿಕರಿಗೂ ವೇದಶಾಸ್ತ್ರಗಳ ಅಧ್ಯಯನವನ್ನು ಮಾಡಿಸಿ, ಅವುಗಳ ಅರ್ಥವನ್ನು ಬೋಧಿಸಿ, ಅವರುಗಳ ಅಪೇಕ್ಷೆಯಂತೆ ಅವರು ಉತ್ತರೋತ್ತರ ಅಭಿವೃದ್ಧಿಯಾಗಲು ಯಜ್ಞಯಾಗಾದಿಗಳನ್ನು ಮಾಡಿಸಬೇಕೆಂದು ಪ್ರಾರ್ಥಿಸಿದರೆ, ಅವುಗಳನ್ನೂ ಮಾಡಿ, ಯಾರೊಬ್ಬರೂ ತಮ್ಮನ್ನು ಕೇಳದಿದ್ದರೂ, ಲೋಕದಲ್ಲಿರುವ ಎಲ್ಲರ ಕ್ಷೇಮಾರ್ಥವಾಗಿ ತಾವೂ ಯಜ್ಞಯಾಗಾದಿಗಳನ್ನೂ ತಪಸ್ಸನ್ನೂ ವೇದಪಾರಾಯಣಾದಿಗಳನ್ನೂ ಮಾಡುತ್ತಲಿರಬೇಕು.

ಈ ರೀತಿಯಾಗಿ ನಿಃಸ್ವಾರ್ಥವಾಗಿ, ಪರಾರ್ಥವಾಗಿ ಲೋಕಕ್ಷೇಮಾರ್ಥವಾಗಿ ತಪಸ್ಸೇ ಮೊದಲಾದುವುಗಳನ್ನು ಮಾಡುವ ಬುದ್ಧಿಯುಂಟಾಗಬೇಕಾದರೆ, ಬ್ರಾಹ್ಮಣನಾಗಿ ಜನ್ಮವೆತ್ತಿದ ಚೇತನನು ಗರ್ಭಾಧಾನಾದಿ ಸಂಸ್ಕಾರಗಳಿಂದ ಸಂಸ್ಕೃತನಾಗಿ, ಮುಂದೆ ತಾನು ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನಗಳನ್ನು ತಪ್ಪದೇ ಮಾಡುವುದರಿಂದ ಮಾತ್ರ ಸಾಧ್ಯ. ಮೊದಲಿನ ಮೂರು ವರ್ಣದವರಲ್ಲಿಯೂ, ಅವರವರ ವಯೋಮಿತಿಗೆ ಅನುಗುಣವಾಗಿ ಬಹ್ಮಚರ್ಯ, ಗಾರ್ಹಸ್ತ್ಯ, ವಾನಪ್ರಸ್ಥ ಮತ್ತು ಸಂನ್ಯಾಸವೆಂಬ ನಾಲ್ಕು ಆಶ್ರಮಗಳೂ ಸ್ಥಾಪಿಸಲ್ಪಟ್ಟವು. ಇದರಲ್ಲಿ ಬ್ರಾಹ್ಮಣಾದಿಗಳು ಉಪನಯನವಾದ ನಂತರ, ಗುರುಕುಲದಲ್ಲಿದ್ದು ಷಡಂಗಸಹಿತವಾಗಿ ವೇದಾಧ್ಯಯನವನ್ನು ಮಾಡಬೇಕು. ವಿದ್ಯಾಭ್ಯಾಸ ಮುಗಿದನಂತರ, ಗೃಹಸ್ಥಾಶ್ರಮವನ್ನು ಸ್ವೀಕರಿಸಿ, ಸಂಧ್ಯಾವಂದನ, ಔಪಾಸನಹೋಮ, ಅಗ್ನಿಹೋತ್ರ, ವೈಶ್ವದೇವ ಮತ್ತು ಪಂಚ ಮಹಾಯಜ್ಞವೆಂಬ ನಿತ್ಯ ಕರ್ಮಗಳನ್ನೂ ಮತ್ತು ನೈಮಿತ್ತಿಕ ಕರ್ಮಗಳನ್ನೂ ಮಾಡಿಯೇ ತೀರಬೇಕು. ವಾರ್ಧಕ್ಯದಲ್ಲಿ ಕೇವಲ ಮುನಿವೃತ್ತಿಗಳಿಂದಿದ್ದು ಅರಣ್ಯಗಳಲ್ಲಿ ವಾಸಿಸುತ್ತಾ ಪರಮಾತೋಪಾಸನೆಗಳನ್ನು ಮಾಡುತ್ತಿರಬೇಕು. ಸಂನ್ಯಾಸಿಯಾದರೋ ಸರ್ವಸಂಗ ಪರಿತ್ಯಾಗವನ್ನು ಮಾಡಿ ಕೇವಲ ಪರಬ್ರಹ್ಮೋಪಾಸನೆಯನ್ನು ಮಾಡುತ್ತಿರಬೇಕು. ಈ ನಾಲ್ಕು ಆಶ್ರಮದವರಲ್ಲಿ ಗೃಹಸ್ಥಾಶ್ರಮವು ಸರ್ವಶ್ರೇಷ್ಠವಾದುದು. ಏಕೆಂದರೆ, ಗೃಹಸ್ಥನನ್ನು ಆಶ್ರಯಿಸಿಯೇ ಎಲ್ಲ ಆಶ್ರಮಿಗಳೂ ಇರುತ್ತಾರೆ. ಅಂತೆಯೇ ಗೃಹಸ್ಥನೂ ಇತರ ಎಲ್ಲ ಆಶ್ರಮದಲ್ಲಿರುವ ಚೇತನರಿಗೂ ಆಶ್ರಯದಾತೃವಾಗಿರಬೇಕು. ತನಗೆ ಸಂಭವಿಸಿರುವ ವರ್ಣ ಮತ್ತು ಆಶ್ರಮ ಎರಡರ ಧರ್ಮಗಳನ್ನೂ ತಪ್ಪದೇ ಮಾಡಿ ಕೊಂಡು ಬರಬೇಕು.

ವರ್ಣಾಶ್ರಮ ಧರ್ಮಗಳಲ್ಲಿ ಮಾಡಲ್ಪಡುವ ನಿತ್ಯ ನೈಮಿತ್ತಿಕ ಕರ್ಮಗಳು, ಈ ಮೇಲೆ ತಿಳಿಸಿರುವಂತೆ ಚೇತನನಿಗೆ ಕೆಲ ಪಾಪಗಳನ್ನು ನಿವೃತ್ತಿ ಮಾಡುವುದರೊಡನೆ, ಸಮಾಜದ ಸುವ್ಯವಸ್ಥೆಗೂ ಕಾರಣ ವಾಗಿರುತ್ತವೆ. ಇವುಗಳನ್ನು ಅನುಷ್ಠಾನ ಮಾಡದಿದ್ದರೆ ವೈಯಕ್ತಿಕವಾಗಿ ಚೇತನನು ಪಾಪ ಭೂಯಿಷ್ಠನಾಗುವುದರೊಡನೆ, ಸಮಾಜದ ಅಳಿವಿಗೂ ಕಾರಣನಾಗುತ್ತಾನೆ. ಆದುದರಿಂದ ಪರಮಾತ್ಮನು ತನ್ನ ಆಜ್ಞಾರೂಪವಾದ ಶ್ರುತಿ ಸ್ಮೃತಿಗಳಲ್ಲಿ ವರ್ಣಾಶ್ರಮಧರ್ಮಗಳ ಅನುಷ್ಠಾನ ಮಾಡಿಯೇ ತೀರಬೇಕೆಂದೂ, ಅವುಗಳನ್ನು ಆಚರಿಸದೆ, ತನ್ನಲ್ಲಿ ಕೇವಲ ಭಕ್ತಿಯನ್ನು ಹೊಂದಿ, ತಾನು ಭಗವದ್ಭಕ್ತನೆಂದು ಹೇಳಿಕೊಂಡರೂ,ಅವನು (ತನ್ನ ಲೀಲಾ ವಿಭೂತಿಯ ಅಳಿವಿಗೆ ಕಾರಣವಾಗುವುದರಿಂದ) ದ್ರೋಹಿಯೇ ವಿನಹ ವಿಷ್ಣು ಭಕ್ತನಲ್ಲ ಎಂದು ಹೇಳಿರುತ್ತಾನೆ.

**ಶ್ರುತಿಸ್ಮೃತೀ ಮಮೈವಾಜ್ಞಾ ಯಸ್ತಾಮುಲ್ಲಂಘ್ಯ ವರ್ತತೇ ।**
**ಆಜ್ಞಾಚ್ಛೇದೀ ಮಮ ದ್ರೋಹೀ ಮದ್ಭಕ್ತೋಽಪಿ ನ ವೈಷ್ಣವಃ ॥**

ವರ್ಣಾಶ್ರಮ ಧರ್ಮಗಳಿಂದ ಮಾಡುವ ಕರ್ಮಗಳೆಲ್ಲವನ್ನೂ, ಅವು ಭಗವಂತನ ಆಜ್ಞೆ ಇವುಗಳನ್ನು ಆಚರಿಸುವುದರಿಂದ ಅವನು ಪ್ರೀತನಾಗಲೆಂದು ಸಂಕಲ್ಪಿಸಿ, ಭಗವದಾರಾಧನ ರೂಪದಿಂದ, ಅನುಷ್ಠಿಸಿದರೆ, ಅವು ಭಗವಂತನಿಗೆ ವಿಶೇಷವಾದ ಸಂತೋಷವನ್ನುಂಟು ಮಾಡುತ್ತದೆ.

**ವರ್ಣಾಶ್ರಮಾಚಾರವತಾ ಪುರುಷೇಣ ಪರಃ ಪುಮಾನ್ ।**
**ವಿಷ್ಣು ರಾರಾಧ್ಯತೇ ಪಂಥಾ ನಾನ್ಯತ್ತತ್ತೋಷಕಾರಕಃ ॥**
**ವಿಷ್ಣುಪುರಾಣ**

ಸಂತುಷ್ಟನಾದ ಪರಮಾತ್ಮನು ಕರ್ಮಾನುಷ್ಠಾನ ಪರನಾದ ಚೇತನನಿಗೆ ಮೇಲೆ ಮೇಲೆ ಶ್ರೇಯೋಭಿವೃದ್ಧಿಯನ್ನುಂಟು ಮಾಡುವ ಕರ್ಮಗಳಲ್ಲಿ ತೊಡಗುವಂತೆ ಬುದ್ಧಿಯನ್ನು ಕೊಟ್ಟು ಅನುಗ್ರಹಿಸುತ್ತಾನೆ.

## ಪ್ರಕಟನೆ

**ಚಂದಾದಾರರು ತಮ್ಮ ಬದಲಾದ ವಿಳಾಸವನ್ನು ಸಪ್ತಗಿರಿ ಕಾರ್ಯಾಲಯಕ್ಕೆ ಪತ್ರದ ಮುಖಾಂತರ ನಿಮ್ಮ ಬದಲಾದ ವಿಳಾಸವನ್ನು ಬರೆದು ಕಳುಹಿಸಿಕೊಡಬೇಕು. ಚಂದಾದಾರರಿಗೆ ನಿಗದಿತ ಸಮಯದೊಳಗೆ ಪುಸ್ತಕವನ್ನು ತಲುಪಿಸಲಾಗುತ್ತದೆ. ತಮ್ಮ ವಿಳಾಸವನ್ನು ಬದಲಿಸಲು ಈ ಕೆಳಗಿನ ಈ ಮೇಲ್ ಮುಖಾಂತರವು ತಿಳಿಸಬಹುದು. ನಮ್ಮ ಈ ಮೇಲ್ ಐಡಿ chiefeditortpt@gmil.com ಅನ್ನು ಸಂಪ್ರದಿಸಬಹುದು.**

**– ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ.,ಪ್ರೆಸ್, 2 ನೇ ಅಂತಸ್ತು, ಕೆ.ಟಿ.ರಸ್ತೆ. ತಿರುಪತಿ - 517 507**

# ರಾಯಚೂರು ಜಿಲ್ಲೆ ಕಸಬಾಲಿಂಗಸುಗೂರಿ
# ಶ್ರೀ 1008 ವರದೇಂದ್ರ ಸ್ವಾಮಿಗಳವರ ಚರಿತೆ


-ಬಿ. ಭೀಮಸೇನ
94820 11406


ಕನ್ನಡ ನಾಡಿನಲ್ಲಿ ಭಕ್ತಿ, ಸಾಹಿತ್ಯ ತುಂಬಾ ಬೆಳೆದಿದ್ದು ಅದರಲ್ಲಿ ದಾಸಸಾಹಿತ್ಯ ಹೇರಳವಾಗಿದೆ. ತುಂಗ ಭದ್ರಾ ಮತ್ತು ಕೃಷ್ಣಾ ನಡುವಿನ ಪ್ರದೇಶ ದಾಸರ ತವರೂರು. ರಾಯಚೂರು ಜಿಲ್ಲೆ ದಾಸರ ತೊಟ್ಟಿಲು ಎಂದು ಪ್ರಸಿದ್ಧ ವಾಗಿದೆ. ಇದಕ್ಕೆ ಹತ್ತಿರದಲ್ಲಿರುವ ಮಂತ್ರಾಲಯ ಶ್ರೀರಾಘವೇಂದ್ರ ಸ್ವಾಮಿ ಗಳು ದಾಸಸಾಹಿತ್ಯಕ್ಕೆ ಹೆಚ್ಚು ಮಹತ್ವ ವನ್ನು ಕೊಟ್ಟು ದಾಸಸಾಹಿತ್ಯ ವನ್ನು ಬೆಳೆಸಿದ್ದಾರೆ. **"ದೇವರೆಂದರೆ ತಿರುಪತಿ ವೆಂಕಪ್ಪ, ಗುರುಗಳೆಂದರೆ ಮಂತ್ರಾ ಲಯ ಶ್ರೀರಾಘಪ್ಪ"** ಎಂಬ ನಾಣ್ಣುಡಿ ಇದೆ. ಇಂತಹ ಪರಂಪರೆಯಲ್ಲಿ ಬಂದ ವರೇ ಕಸಬಾಲಿಂಗಸಗೂರಿನ ಶ್ರೀವರ ದೇಂದ್ರಸ್ವಾಮಿಗಳು.

ಕಸಬಾಲಿಂಗಸಗೂರ ಎಂಬುದು ಉತ್ತರ ಕರ್ನಾಟಕದ ಪುಣ್ಯ ನದಿಗಳಾದ ಕೃಷ್ಣೆ ಮತ್ತು ತುಂಗ ಭದ್ರೆಯ ನಡುವಿನ ಪ್ರದೇಶದಲ್ಲಿರುವ ಹರಿದಾಸ ಸಾಹಿತ್ಯದ ಆಡುಂಬೊಲ ವೆಂದು ಪ್ರಸಿದ್ಧವಾಗಿದೆ. ಈ ಊರಿ ನಲ್ಲಿಯೇ ಜನಮೇಜಯರಾಯ ಪ್ರತಿ ಷ್ಠಿತ ಮುಖ್ಯ ಪ್ರಾಣದೇವರ ಜಾಗೃತ ಸಾನಿಧ್ಯವಿದ್ದು ಅದು ಕುಪ್ಪೆಭೀಮ ರಾಯನ ಗುಡಿಯೆಂದು ಸುತ್ತಮುತ್ತಲ ಪ್ರದೇಶದಲ್ಲಿ ಸಾಕಷ್ಟು ಪ್ರಸಿದ್ಧಿಯನ್ನು ಪಡೆದಿದೆ. ಜಾತಿ, ಮತಗಳ ಭೇದಗಳಿ ಲ್ಲದೆ ಇಲ್ಲಿನ ಜನ ಕುಪ್ಪೇರಾಯನಿಗೆ ನಡೆದುಕೊಳ್ಳುತ್ತಾರೆ. ಕುಪ್ಪೇರಾಯ ನನ್ನು ಕುರಿತು ಹಲವಾರು ಹರಿದಾಸರು ಕೃತಿ, ಕೀರ್ತನೆಗಳನ್ನು ರಚಿಸಿ, ಆತನ ಮಹಿಮೆಗಳನ್ನು ಮುಕ್ತ ಕಂಠದಿಂದ ಕೊಂಡಾಡಿದ್ದಾರೆ.

ಅದ್ಭುತ ಮಹಿಮರಾದ ಶ್ರೀ ವಾದೀಂದ್ರತೀರ್ಥರು ಪೂರ್ವಾಶ್ರಮದ ತಮ್ಮಂದಿರಾದ ಪಾಷ್ಠಿಕುಲ ಭೂಷಣ ರಾದ ಶ್ರೀವೇಣುಗೋಪಾಲ ಆಚಾರ್ಯ ರಿಗೆ ಶ್ರೀಪುರುಷೋತ್ತಮಾಚಾರ್ಯ, ಶ್ರೀ ಬಲರಾಮಾಚಾರ್ಯ ಮತ್ತು ಶ್ರೀಲಕ್ಷ್ಮೀ ನಾರಾಯಣ ಆಚಾರ್ಯರೆಂಬ ಮೂವರು ಮಕ್ಕಳಿದ್ದರು.

ಮೂವರೂ ಸಹ ಒಬ್ಬರಿಗಿಂತ ಒಬ್ಬರು ಅಪೂರ್ವ ವಿದ್ವನ್ಮಣಿಗಳೇ ಆಗಿ ದ್ದವರು. ಅವರೆಲ್ಲರೂ ಸಹ ಕ್ರಮವಾಗಿ ಪೀಠಾಧಿಪತಿಗಳಾಗಿ ವೇದಾಂತ ಸಾಮ್ರಾಜ್ಯವನ್ನು ಪಾಲಿಸಿದರು. ಆ ಮೂವರು ಸಹೋದರರಲ್ಲಿ ಕ್ರಿ.ಶ. 1750 ರಿಂದ 1761 ರ ವರೆಗೆ ಮೊದಲನೆಯ ವರಾದ ಶ್ರೀಪುರುಷೋತ್ತಮಾ ಚಾರ್ಯರು ಶ್ರೀವಾದೀಂದ್ರರಿಂದ "ಶ್ರೀವಸುಧೇಂದ್ರತೀರ್ಥರು" ಎಂಬ ಅಭಿದಾನದಿಂದ ಯತ್ಯಾಶ್ರಮವನ್ನು ಸ್ವೀಕರಿಸಿ ಸುಮಾರು ಹನ್ನೊಂದು ವರ್ಷಗಳ ಕಾಲ ಪೀಠಾಧಿಪತಿಗಳಾ ಗಿದ್ದರು. ಎರಡನೆಯವರಾದ ಬಲ ರಾಮಚಾರ್ಯರೇ ಮುಂದೆ **"ಶ್ರೀವರ ದೇಂದ್ರತೀರ್ಥರು"**. ಇವರು ಕ್ರಿ.ಶ. 1761 ರಿಂದ 1785 ರ ವರೆಗೆ ಸುಮಾರು ಇಪ್ಪತ್ನಾಲ್ಕು ವರ್ಷಗಳ ಕಾಲ ವೇದಾಂತ ಸಾಮ್ರಾಜ್ಯದಲ್ಲಿ ವಿರಾಜಮಾನರಾಗಿದ್ದರು.

ಕ್ರಿ.ಶ. 1785 ರಿಂದ 1799 ರ ವರೆಗೆ ಕೊನೆಯ ಸಹೋದರರಾದ ಶ್ರೀಲಕ್ಷ್ಮೀನಾರಾಯಣಾಚಾರ್ಯರು ಶ್ರೀವರದೇಂದ್ರತೀರ್ಥರ ಕರಕಮಲ ಸಂಜಾತರಾಗಿ **ಶ್ರೀಭುವನೇಂದ್ರತೀರ್ಥರು** ಎಂಬ ನಾಮವನ್ನು ಪಡೆದು ಸುಮಾರು ಹದಿನಾಲ್ಕು ವರ್ಷಗಳ ಕಾಲ ಸರ್ವಜ್ಞಪೀಠದಲ್ಲಿ ವಿರಾಜ ಮಾನರಾಗಿದ್ದರು. ಶ್ರೀವಾದೀಂದ್ರ ತೀರ್ಥರ ಪೂರ್ವಾಶ್ರಮದ ಪುತ್ರರೂ ದಿಗ್ದಂತ ಪಂಡಿತರೂ ಆಗಿದ್ದ

ಶ್ರೀಜಯರಾಮಾಚಾರ್ಯರೂ ಸಹ ಪರಮ ವಿರಕ್ತರಾಗಿ ಕ್ರಿ.ಶ. 1785ರಲ್ಲಿ ಶ್ರೀಧೀರೇಂದ್ರತೀರ್ಥರು ಎಂಬ ಹೆಸರಿನಿಂದ ತುರ್ಯಾಶ್ರಮ ವನ್ನು ಸ್ವೀಕರಿಸಿ ಮಹತ್ಸಾಧನೆಗೈದು ಶ್ರೀಮಠದ ಕೀರ್ತಿಯನ್ನು ಉತ್ತುಂಗಕ್ಕೇರಿಸಿದರು.

ಇಂತಹ ಭವ್ಯ ಪರಂಪರೆಯಲ್ಲಿ ಶ್ರೀಮದಾಚಾರ್ಯರಿಂದ ಇಪ್ಪತ್ನಾಲ್ಕನೆಯವರೂ ಶ್ರೀರಾಘವೇಂದ್ರಸ್ವಾಮಿಗಳು. **"ಸಪ್ತಮೋ ಮತ್ಸಮೋ ಯೋಗಿ ವರದೇಂದ್ರೋ ಭವಿಷ್ಯತಿ"** ಎಂಬ ಶ್ರೀಮಂತ್ರಾಲಯ ಪ್ರಭುಗಳ ಭವಿಷ್ಯವಾಣಿಯಂತೆ ಇವರ ನಂತರದಲ್ಲಿ ಬಂದ ಯತಿವರೇಣ್ಯರಲ್ಲಿ ಏಳನೇಯವರೂ ಆಗಿ ವಿರಾಜಮಾನರಾದ ಶ್ರೀವರದೇಂದ್ರ ತೀರ್ಥರು.

ಇವರು ಪೂರ್ವಾಶ್ರಮದಲ್ಲಿ ತಮ್ಮ ಪ್ರಾರಂಭಿಕ ಹಂತದ ಶಾಸ್ತ್ರಾಭ್ಯಾಸವನ್ನು ಸ್ವತಃ ವಿದ್ವಾಂಸರಾದ ತಮ್ಮ ತಂದೆಯವರಲ್ಲಿ ಪಡೆದು, ನಂತರ ಪ್ರಕಾಂಡ ಪಂಡಿತರಾಗಿದ್ದ ಶ್ರೀವಾದೀಂದ್ರತೀರ್ಥರಲ್ಲಿ ವಿಶೇಷ ವಿದ್ಯಾರ್ಜನೆಯನ್ನು ಮಾಡಿದರು.

ಬಾಲ್ಯದಲ್ಲಿಯೇ ಅತ್ಯದ್ಭುತ ಪ್ರತಿಭಾ ಸಾಮರ್ಥ್ಯಗಳನ್ನು ಪಡೆದ ಇವರಿಗೆ ಶ್ರೀ ವಸುಧೇಂದ್ರತೀರ್ಥರಿಂದ ಶಾಸ್ತ್ರ ವ್ಯಾಸಂಗ ಹಾಗೂ ಸಾಧನ ಪಥದಲ್ಲಿ ಅತ್ಯಗತ್ಯ ಮಾರ್ಗದರ್ಶನ ಲಭ್ಯವಾಯಿತು. ಈ ಎಲ್ಲದರ ಫಲದಿಂದ ಕಾವ್ಯ, ತರ್ಕ ವ್ಯಾಕರಣ, ಅಲಂಕಾರ,ವೇದಾಂತ, ಮೀಮಾಂಸಾದಿ ಸಕಲ ಶಾಸ್ತ್ರಗಳಲ್ಲಿಯೂ ಅದ್ವಿತೀಯ ಪಾಂಡಿತ್ಯವನ್ನು ಸಂಪಾದಿಸಿಕೊಂಡು, ಆ ಕಾಲದ ಪ್ರಕಾಂಡ ಪಂಡಿತರ ಅಗ್ರಸಾಲಿನಲ್ಲಿ ವಿರಾಜಮಾನರಾಗಿದ್ದರು.

ಶ್ರೀವರದೇಂದ್ರತೀರ್ಥರು ಮಾನವಿ ಶ್ರೀಜಗನ್ನಾಥದಾಸರ ವಿದ್ಯಾ ಗುರುಗಳು. ಲಿಂಗಸುಗೂರಿನ ಅಪರೋಕ್ಷ ಜ್ಞಾನಿಗಳಾದ ಶ್ರೀಪ್ರಾಣೇಶದಾಸರು ಶ್ರೀಜಗನ್ನಾಥದಾಸರ ಪರಮ ಶಿಷ್ಯರು, ಶ್ರೀವರದೇಂದ್ರತೀರ್ಥರು ಕಸಬಾಲಿಂಗಸಗೂರಿಗೆ ಆಗಮಿಸಿ ಶ್ರೀಪ್ರಾಣೇಶದಾಸರಿಂದ ಬಣವಿದೊಡ್ಡಿಯನ್ನು ದಾನವಾಗಿ




ಪಡೆದು ಇದರ ಮಹತ್ವ ಮುಂದೆ ತಿಳಿಯುತ್ತದೆ ಎಂದು ಹೇಳಿ ದರು. ಕೆಲವು ಕಾಲದ ನಂತರ ಶ್ರೀವರದೇಂದ್ರ ತೀರ್ಥರು ಕ್ರಿ.ಶ.1785 ರ ಆಷಾಢ ಶುದ್ಧ ಷಷ್ಠಿ ಮಂಗಳವಾರ ಉತ್ತರಾ ನಕ್ಷತ್ರದ ಶುಭದಿನದಂದು ಪುಣ್ಯ ಪಟ್ಟಣದಲ್ಲಿ ವೃಂದಾವನಸ್ಥರಾದರು. ನಂತರ ದಾಸರ ಸ್ವಪ್ನದಲ್ಲಿ ಕಾಣಿಸಿಕೊಂಡು ದಾನವಾಗಿ ಪಡೆದ ಬಣವಿ ದೊಡ್ಡಿಯಲ್ಲಿ ಪುರುಷ ಪ್ರಮಾಣದ ತುಳಸಿವೃಕ್ಷದ ರೂಪದಲ್ಲಿ ಬಂದಿರುವುದಾಗಿ ಹೇಳಿದರು. ಮರುದಿನ ದಾಸರು ಬಣವಿ ದೊಡ್ಡಿಯಲ್ಲಿ ತುಳಸಿ ವೃಕ್ಷವನ್ನು ಕಂಡು ಬಂಧು-ಬಾಂಧವರೊಡನೆ ಸೇರಿ ಪೂಜಿಸಿದರು. ಮುಂದೆ ತುಳಸಿ ವೃಕ್ಷ ಸ್ಥಳದಲ್ಲಿ ವೃಂದಾವನ ಪ್ರತಿಷ್ಠಾಪನೆಯಾಯಿತು. ಈ ಸನ್ನಿಧಾನದಲ್ಲಿ ಶ್ರೀಜಗನ್ನಾಥದಾಸರು, ಶ್ರೀಪ್ರಾಣೇಶದಾಸರಾದಿ ಹರಿದಾಸರು ದಾಸಸಾಹಿತ್ಯವನ್ನು ಬೆಳೆಸಿದರು.

ಹರಿದಾಸರು ಕಂಡ ಶ್ರೀವರದೇಂದ್ರರು, ಸಮಕಾಲೀನರಾದ ಶ್ರೀಜಗನ್ನಾಥದಾಸರು **"ವರದೇಂದ್ರ ಯತಿ ಚಕ್ರವರ್ತಿರ ನಿರಂತರ ವರಣಿಸುವೆ ನಿಮ್ಮ ಕೀರ್ತಿ"** ಮತ್ತು **"ವರದೇಂದ್ರ ಮುನಿಪ ದಿಕ್ಪತಿಗಳಂತೆ ಪರಮ ಸಂಭ್ರಮದಿ ರಾಜಿಸುವ ನೋಳ್ಪರಿಗೆ''** ಎಂಬ ಎರಡು ಕೀರ್ತನೆಗಳನ್ನು ರಚಿಸಿದ್ದಾರೆ. ಪ್ರಾಣೇಶದಾಸರ ವರದೇಂದ್ರ ಸ್ತವನಗಳು ಗಮನ ಸೆಳೆಯುತ್ತವೆ. **"ಹಿಂದಿನ ಸುಕರ್ಮವೇನು ಬಂದೊದಗಿದವೋ ವರದೇಂದ್ರರಾಯ ಬಂದ ನಮ್ಮ ಮಂದಿರಕಿಂದು''** ಹಾಗೂ **''ಪಾಲಿಸೋ ಪಾಲಿಸೋ, ಗುರುವೇ ಶ್ರೀ ವಸುದೇಂದ್ರ ಕರಜಾತ, ಗುರು ವರದೇಂದ್ರ ದಯಾಂಬುಧೇ, ಶರಣು ನಿತ್ಯಾನಂದ, ವಂದನೆ ಮಾಡಿರ್ಪೆ, ಗುರುರಾಯ ಗುರುರಾಯಾ"** ಎಂಬ ಕೀರ್ತನೆಯನ್ನು ರಚಿಸಿದರು ಹಾಗೂ **"ಜಯ ಮಂಗಳಂ, ನಿತ್ಯ ಶುಭ ಮಂಗಳಂ"** ಎಂಬ ಮಂಗಳ ಹಾಡಿರುವ ದಾಸರಿಗೆ ವರದೇಂದ್ರರ ಗುಣಮಹಿಮೆಗಳನ್ನು ಸಂಪೂರ್ಣವಾಗಿ ವರ್ಣಿಸಲಾಗದೆಂಬ ಮನವರಿಕೆ

ಇತ್ತು. ಕೌತಾಳದ ಶ್ರೀಗುರುಜಗನ್ನಾಥ ದಾಸರು ರಚಿಸಿರುವ **"ರಥವನೇರಿದ ಯತಿಕುಲನಾಥ"** ಎಂಬ ಕೀರ್ತನೆಯನ್ನು ಶ್ರೀವರದೇಂದ್ರ ಸ್ವಾಮಿಗಳ ರಥೋತ್ಸವದ ಸಂದರ್ಭದಲ್ಲಿ ಹಾಡಿದ ಆಶುಕವಿತೆಯಾಗಿದೆ.

ಶ್ರೀಗುರುಜಗನ್ನಾಥದಾಸರ ಶಿಷ್ಯ ವೃಂದಕ್ಕೆ ಸೇರಿದ ಶ್ರೀವರದೇಶ ವಿಠಲರು **"ಸ್ವಪ್ನ ವೃಂದಾವನಾಖ್ಯಾನ"** ಎಂಬ ಪ್ರಸಿದ್ಧವಾದ ಕೃತಿಯನ್ನು ರಚಿಸಿದರು. ಶ್ರೀಪ್ರಸನ್ನ ಶ್ರೀನಿವಾಸ ದಾಸರು ರಚಿಸಿದ **"ಶ್ರೀವರದೇಂದ್ರ ವಿಜಯ"** ಎಂಬ ಹೆಸರಿನ 23 ನುಡಿಗಳ ಮತ್ತೊಂದು ದೀರ್ಘ ಕೃತಿಯೊಂದು ಶ್ರೀಗಳವರನ್ನು ಕುರಿತಂತೆ ಕಂಡು ಬರುತ್ತದೆ.

ಶ್ರೀವರದೇಂದ್ರವಿಟ್ಠಲರ ಘನಾಧ್ಯಕ್ಷತೆಯಲ್ಲಿ ಮಹಾರಥ ಶಿಲ್ಪಿಯಾದ ಶ್ರೀ ಈರಪ್ಪ ಬಡಿಗೇರ ಅವರು ತಯಾರಿಸಿದ ಇಂದಿಗೂ ಇಲ್ಲಿ ಕಾಣುವ ಈ ರಥವು ಆಷಾಢ ಶುದ್ಧ ಸಪ್ತಮಿಯಂದು ಮಹಾರಥೋತ್ಸವ ಜರಗುತ್ತದೆ. ಹೀಗೆ ಶ್ರೀವರದೇಂದ್ರ ಸ್ವಾಮಿಗಳು ಶ್ರೀಪ್ರಾಣೇಶ ದಾಸರ ಭಕ್ತಿಗೆ ಒಲಿದು ಲಿಂಗಸುಗೂರಿನಲ್ಲಿ ನೆಲೆಸಿ ಇಂದಿಗೂ ಭಕ್ತರ ಮನೋಭೀಷ್ಟಗಳನ್ನು ಪೂರೈಸುತ್ತಿರುವುದು ಇಂದಿಗೂ ಸಾಕ್ಷಿಯಾಗಿವೆ.

ಗುರುಗಳ ಆಗಮನದಿಂದ ಅಲ್ಲಿ ಹರಿದಾಸ ಸಾಹಿತ್ಯದ ಹೆಬ್ಬಾಗಿಲೇ ತೆರೆದಂತಾಯಿತು. ಶ್ರೀವರದೇಂದ್ರ ತೀರ್ಥರ ಸನ್ನಿಧಾನದ ವಿಶೇಷದಿಂದಾಗಿ ದಾಸ ಸಾಹಿತ್ಯ ಸಂಗ್ರಹ ಹಾಗೂ ಸಂಶೋಧನೆಗೆ ಸುಭದ್ರವಾದ ಸೋಪಾನವೊಂದು ಲಿಂಗಸುಗೂರಿನಲ್ಲಿ ನಿರ್ಮಾಣವಾಯಿತು.

ಮುಂದೆ ದಾಸರ ಪೀಳಿಗೆಯಲ್ಲಿಯೇ ಬಂದ ಶ್ರೀಸುಂದರವಿಠಲಾಂಕಿತರಾದ ಗೊರೇಬಾಳ ಶ್ರೀ ಹನುಮಂತರಾಯರು ಸ್ವಇಚ್ಛೆಯಿಂದ ಶ್ರೀವರದೇಂದ್ರ ಹರಿದಾಸ ಸಾಹಿತ್ಯ ಮಂಡಲವನ್ನು 1944 ರಲ್ಲಿ ಸ್ಥಾಪಿಸಿ ಅದರ ಮೂಲಕ ನೂರಾರು ಹರಿದಾಸರ ಅಮೂಲ್ಯ ಹಸ್ತ ಪ್ರತಿಗಳನ್ನು ವ್ಯವಸ್ಥಿತವಾಗಿ ಸಂಗ್ರಹಿಸಿ, ಸಂಶೋಧಿಸಿ ಪ್ರಕಟಿಸಿದರು.

ಈ ಹೊತ್ತಿಗೂ ಶ್ರೀ ಪ್ರಾಣೇಶ ದಾಸರ ಪುಣ್ಯಕ್ಕೆ ಸಾಕ್ಷಿ ಎಂಬಂತೆ **"ಶ್ರೀ ವರದೇಂದ್ರ ಗುರುವರ್ಯರ ವೃಂದಾವನ"** ಮತ್ತು **"ಶ್ರೀ ವರದೇಂದ್ರ ಹರಿದಾಸ ಸಾಹಿತ್ಯ ಮಂಡಲಿ"** ಲಿಂಗಸುಗೂರಿನಲ್ಲಿರುವುದನ್ನು ನೋಡಬಹುದು. ಅಂದಿನಿಂದ ಇಲ್ಲಿಯವರೆಗೆ ಶ್ರೀಪ್ರಾಣೇಶದಾಸರ ವಂಶಜರು ಪೂಜ್ಯ ಹಾಗೂ ಆರಾಧನೆ ಉತ್ಸವಾದಿಗಳನ್ನು ನಿರಂತರವಾಗಿ ನಡೆಸುತ್ತಾ ಬಂದಿರುತ್ತಾರೆ. ಈ ಸಲ 239 ನೇ ಆರಾಧನಾ ಕಾರ್ಯಕ್ರಮ ಜೂನ್-30 ಜುಲೈ - 1,2 ರಂದು ನಡೆಯಲಿದೆ.

# ತಿರುಮಲೆಯಲ್ಲಿ ಪ್ಲಾಸ್ಟಿಕ್ ನಿಷೇಧ

**ತಿರುಮಲೆಯ ಪರ್ಯಾವರಣ ಪರಿರಕ್ಷಣೆಯ ದೃಷ್ಟ್ಯಾ, ಪ್ಲಾಸ್ಟಿಕ್ ವಸ್ತುಗಳನ್ನು ನಿಷೇಧಗೊಳಿಸಲಾಗಿದೆ. ಹಾಗಾಗಿ ಕೆಳಗಿನ ಹಲವು ಸೂಚನೆಗಳನ್ನು ತಪ್ಪದೆ ಪಾಲಿಸಬೇಕೆಂದು ಸೂಚಿಸಲಾಗಿದೆ. ಪ್ಲಾಸ್ಟಿಕ್ ವಸ್ತುಗಳನ್ನು ಮುಖ್ಯವಾಗಿ ಪ್ಲಾಸ್ಟಿಕ್ ಬ್ಯಾಗ್‌ಗಳನ್ನು (ಪಾಲಿಥಿನ್ ಚೀಲಗಳು) ಬಿಸಾಡುವಾಗ ಅವುಗಳಿಗಾಗಿ ಅಲ್ಲಲ್ಲಿ ಇಡಲಾಗಿರುವ ಕಸದ ಬುಟ್ಟಿಗಳಲ್ಲಿ ಮಾತ್ರವೇ ಹಾಕಬೇಕು. ಎಲ್ಲೆಂದರಲ್ಲಿ ಬಿಸಾಡಬಾರದು.ಪಾದಚಾರಿಗಳು ಮೆಟ್ಟಿಲದಾರಿಯಲ್ಲಿ ಬರುವಾಗ ಪ್ಲಾಸ್ಟಿಕ್ ನೀರಿನ ಬಾಟಲುಗಳನ್ನು, ಪ್ಲಾಸ್ಟಿಕ್ ಬ್ಯಾಗ್‌ಗಳನ್ನು, ಪ್ಲಾಸ್ಟಿಕ್‌ನ ವ್ಯರ್ಥ ಪದಾರ್ಥಗಳನ್ನು ಅವುಗಳಿಗಾಗಿ ಅಲ್ಲಲ್ಲಿ ಇಟ್ಟಿರುವ ಕಸದ ಬುಟ್ಟಿಗಳಲ್ಲಿಯೇ ಹಾಕಬೇಕು. ದಾರಿಯಲ್ಲಿ ಬಿಸಾಡಬಾರದು. ತಿರುಮಲೆಯಲ್ಲಿ ವ್ಯಾಪಾರಿಗಳು, ಹೋಟೆಲ್‌ನವರು, ಪುರಪ್ರಜೆಗಳು, ನಲವತ್ತೇಳು ಮೈಕ್ರಾನುಗಳಿಗಿಂತ ಕಡಿಮೆ ಗೇಜಿನ ಪ್ಲಾಸ್ಟಿಕ್ ವಸ್ತುಗಳನ್ನು, ಚೀಲಗಳನ್ನು, ಪ್ಲಾಸ್ಟಿಕ್ ಪೇಪರನ್ನು ಬಳಸಬಾರದು. ಟೀ-ಕಾಫಿಗಳಿಗಾಗಿ ಪ್ಲಾಸ್ಟಿಕ್ ಕಪ್‌ಗಳನ್ನು ಬಳಸಬಾರದು. ಮುಖ್ಯವಾಗಿ ಹೋಟೆಲಿನ ಯಜಮಾನರು ಅಂತಹ ವಸ್ತುಗಳನ್ನು ಬಳಸಿದರೆ ಶಿಕ್ಷಾರ್ಹರಾಗುತ್ತಾರೆ. ತಿರುಮಲೆಯಲ್ಲಿ ಪ್ಲಾಸ್ಟಿಕ್ ವಸ್ತುಗಳ ಬಳಕೆಯನ್ನು ನಿಲ್ಲಿಸಿರಿ. ತಿರುಮಲೆಯ ಪಾವಿತ್ರ್ಯವನ್ನೂ, ಪರಿಶುಭ್ರತೆಯನ್ನೂ ಕಾಪಾಡಿರಿ.**

# ಧೈರ್ಯಶಾಲಿನಿ ಸತಿ ಸಾವಿತ್ರಿ

– ಹನುಮಂತ ಮ. ದೇಶಕುಲಕರ್ಣಿ
94803 64915



ಸತ್ಯವಾನ-ಸಾವಿತ್ರಿಯರ ಈ ಕಥೆಯು ವ್ಯಾಸ ಮಹಾಭಾರತದ ವನಪರ್ವದ ದ್ರೌಪದೀಹರಣ ಪರ್ವ (ಅಧ್ಯಾಯ 277-283) ದಲ್ಲಿ ಬರುತ್ತದೆ. ಈ ಕಥೆಯನ್ನು ಋಷಿ ಮಾರ್ಕಂಡೇಯನು ಯುಧಿಷ್ಠಿರನಿಗೆ ಹೇಳಿದನು.

ಮಧ್ಯದೇಶದ ಅಧಿಪತಿ ಅಶ್ವಪತಿಯ ಮಗಳು ಇವಳು. ಸಕಲ ವಿದ್ಯಾ ಸಂಪನ್ನೆ. ರೂಪಯೌವನಗಳು ಅನರ್ಥಕಾರಿಗಳಾಗದಂತೆ ವಿದ್ಯೆಯು ಇವಳಿಗೆ ವಿನಯವನ್ನಿತ್ತಿತ್ತು. ಅವಳಿಗೆ ತಕ್ಕನಾದ ವರನನ್ನು ಹುಡುಕುವುದು ಅಶ್ವಪತಿಗೆ ಸಮಸ್ಯೆಯಾಗಿತ್ತು. ತಂದೆಯ ಅನುಜ್ಞೆಯಂತೆ ವರಾನ್ವೇಷಣೆಗೆ ಹೊರಟ ಸಾವಿತ್ರಿ ಅನೇಕ ರಾಜರ್ಷಿಗಳನ್ನು ತನ್ನ ಒರೆಗಲ್ಲಿಗೆ ಹಚ್ಚಿದಳು.

ದಟ್ಟ ಅರಣ್ಯಕ್ಕೆ ಹೋಗಿ ನೃಪನು ಕಾಲ್ನಡುಗೆಯಲ್ಲಿಯೇ ದ್ವಿಜರೊಡಗೂಡಿ ರಾಜರ್ಷಿ ದ್ಯುಮತ್ಸೇನನ ಆಶ್ರಮಕ್ಕೆ ಬಂದನು. ಅಲ್ಲಿ ಶಾಲವೃಕ್ಷ ದಡಿಯಲ್ಲಿ ಕುಶದ ಚಾಪೆಯ ಮೇಲೆ ಕುಳಿತಿದ್ದ ಕುರುಡ ನೃಪನನ್ನು ನೋಡಿದನು. ರಾಜನು ಆ ರಾಜರ್ಷಿಯನ್ನು ಯಥಾರ್ಹವಾಗಿ ಪೂಜಿಸಿ ಸುನಿಯತ ಮಾತುಗಳಿಂದ ತನ್ನ ಪರಿಚಯವನ್ನು ಹೇಳಿಕೊಂಡನು.

ದ್ಯುಮತ್ಸೇನನು ರಾಜನಿಗೆ ಅರ್ಘ್ಯ, ಆಸನ ಮತ್ತು ಗೋವುಗಳನ್ನು ಧರ್ಮದಂತೆ ನೀಡಿ ಬಂದಿರುವ ಕಾರಣವನ್ನು ಕೇಳಿದನು. ಆಗ ಅಶ್ವಪತಿಯು ತನ್ನ ಮತ್ತು ಎಲ್ಲರ ಅಭಿಪ್ರಾಯವನ್ನೂ, ಯಾವ ಕಾರ್ಯಕ್ಕಾಗಿ ತಾನು ಬಂದಿದ್ದೇನೆನ್ನುವುದನ್ನೂ, ಸತ್ಯವಾನನ ಕುರಿತು ಎಲ್ಲವನ್ನೂ ಅವನಿಗೆ ನಿವೇದಿಸಿದನು.

ಅವಳ ಮನಸ್ಸನ್ನು ಗೆದ್ದ ಯುವಕ ಶಾಲ್ವದೇಶದ ದ್ಯುಮತ್ಸೇನನ ಮಗನಾಗಿದ್ದ ಸತ್ಯವಾನ. ಅವನು ಸಣ್ಣವನಾಗಿದ್ದಾಗಲೇ ರಾಜನ ವಯೋಸಹಜ ದೃಷ್ಟಿಹೀನತೆಯ ಲಾಭ ಪಡೆದಿದ್ದ ಶತ್ರುಗಳು ರಾಜ್ಯವನ್ನು ಅಪಹರಿಸಿದ್ದರು. ಸಾವಿತ್ರಿಗೆ ಅವನ ರಾಜ್ಯಹೀನತೆಯಾಗಲೀ,ಬಡತನವಾಗಲೀ ಅವನನ್ನು ವರನನ್ನಾಗಿ ಆರಿಸುವಲ್ಲಿ ಪ್ರತಿಬಂಧಕಗಳಾಗಲಿಲ್ಲ. ಸತ್ಯವಾನನ ಗುಣಶೀಲ, ವಿದ್ಯಾ, ವಿನಯತೆಗೆ ತಲೆ ಬಾಗಿದಳು.

ರಾಜನು ಸಾವಿತ್ರಿಗೆ, ಮಗೂ ಸಾವಿತ್ರಿ ! ಇಲ್ಲಿ ಬಾ! ಹೋಗಿ ಬೇರೆ ಯಾರನ್ನಾದರೂ ವರಿಸು! ಅವನಲ್ಲಿ ರುವ ಈ ಮಹಾದೋಷವೊಂದೇ ಅವನ ಎಲ್ಲ ಗುಣಗಳನ್ನೂ ಮೀರಿ ನಿಂತಿದೆ. ದೇವರ್ಷಿ ನಾರದರು ಹೇಳಿದಂತೆ ಒಂದು ವರ್ಷದಲ್ಲಿ ಆ ಅಲ್ಪಾಯುವು ದೇಹತ್ಯಾಗ ಮಾಡುತ್ತಾನೆ ಎಂದ. ಆಗ ಸಾವಿತ್ರಿಯು, ಆಸ್ತಿಯನ್ನು ಒಂದೇ ಬಾರಿ ವಿಂಗಡಿಸುತ್ತಾರೆ. ಕನ್ಯೆಯನ್ನು ಒಂದೇ ಬಾರಿ ಕೊಡುತ್ತಾರೆ. ದಾನವನ್ನು ಒಂದೇ ಬಾರಿ ನೀಡಲಾಗುತ್ತದೆ. ಈ ಮೂರನ್ನೂ ಒಂದೊಂದು ಬಾರಿಯೇ ಮಾಡಲಾಗುತ್ತದೆ. ದೀರ್ಘಾಯುವಾಗಿರಲಿ ಅಥವಾ ಅಲ್ಪಾಯುವಾಗಿರಲಿ ಸುಗುಣನಾಗಿರಲಿ ಅಥವಾ ನಿರ್ಗುಣನಾಗಿರಲಿ, ನಾನು ಅವನನ್ನು ನನ್ನ ಪತಿಯನ್ನಾಗಿ ವರಿಸಿದ್ದೇನೆ. ಎರಡನೇ ಬಾರಿ ನಾನು ವರಿಸುವುದಿಲ್ಲ! ಮನಸ್ಸಿನಲ್ಲಿ ನಿರ್ಧರಿಸಿದ ನಂತರ ಅದು ಮಾತಿನಲ್ಲಿ ಹೊರಬರುತ್ತದೆ ಮತ್ತು ನಂತರವೇ ಅದನ್ನು ಕ್ರಿಯಾರೂಪದಲ್ಲಿ ಮಾಡಲಾಗುತ್ತದೆ. ಆ ಮನಸ್ಸಿಗೆ ನಾನೇ ಪ್ರಮಾಣ ಎಂದಳು.

ಅಶ್ವಪತಿ ಅವಳ ಮಾತಿಗೆ ವಿರೋಧಿಸಲಿಲ್ಲ. ಸಕೃತ್ ಕನ್ಯಾ ಪ್ರದೀಯತೇ ಎಂಬ ವಚನವನ್ನು ಮುಂದಿಟ್ಟುಕೊಂಡು ಸಾವಿತ್ರಿ

ತನ್ನ ನಿರ್ಧಾರವನ್ನು ಬದಲಿಸಲಿಲ್ಲ, ಮದುವೆಯಾಯಿತು, ತಂದೆಯು ಹೊರಟುಹೋದ. ನಂತರ ಸಾವಿತ್ರಿಯು ತನ್ನ ಎಲ್ಲ ಆಭರಣಗಳನ್ನೂ ಎತ್ತಿಟ್ಟು, ವಲ್ಕಲ- ಕಾಷಾಯ ವಸ್ತ್ರಗಳನ್ನು ಧರಿಸಿದಳು. ಸದ್ಗುಣ, ಪರಿಶ್ರಮ ಮತ್ತು ತಾಳ್ಮೆಗಳಿಂದ ಎಲ್ಲರ ಇಷ್ಟಗಳನ್ನು ನೆರವೇರಿಸುತ್ತಾ ಸರ್ವರನ್ನೂ ಸಂತೃಪ್ತಗೊಳಿಸಿದಳು. ಅತ್ತೆಯ ದೇಹ ಸತ್ಕಾರಗಳನ್ನು ಮಾಡಿದಳು ಮತ್ತು ಎಲ್ಲರ ಬಟ್ಟೆಗಳನ್ನು ನೋಡಿಕೊಳ್ಳುತ್ತಿದ್ದಳು. ಮಾವನ ದೇವ ಕಾರ್ಯಗಳಲ್ಲಿ ಸಹಾಯ ಮಾಡುತ್ತಿದ್ದಳು ಮತ್ತು ಸಂಯಮದಿಂದ ಮಾತನಾಡಿಕೊಂಡಿದ್ದಳು. ಸಾವಿತ್ರಿಯಾದರೋ ಮಲಗಿರುವಾಗ ಮತ್ತು ಎದ್ದಿರುವಾಗ, ಹಗಲು ಮತ್ತು ರಾತ್ರಿ ಪ್ರತಿಕ್ಷಣದಲ್ಲಿಯೂ ನಾರದನು ಹೇಳಿದ ಮಾತನ್ನೇ ಮನಸ್ಸಿನಲ್ಲಿ ಚಿಂತಿಸುತ್ತಿದ್ದಳು. ದಂಪತಿಗಳು ಕಷ್ಟ-ಸುಖಗಳನ್ನು ಹಂಚಿಕೊಂಡು ಒಂದು ವರ್ಷ ಕಳೆದರು. ಸಾವಿತ್ರಿಯು ನಾರದನು ಹೇಳಿದ ಆ ವಾಕ್ಯವನ್ನು ನಿತ್ಯವೂ ಹೃದಯದಲ್ಲಿಟ್ಟುಕೊಂಡು ಕಳೆದುಹೋದ ಪ್ರತಿ ದಿನವನ್ನೂ ಲೆಕ್ಕಮಾಡಿಕೊಂಡಿದ್ದಳು.

ನಾಲ್ಕನೆಯ ದಿನದಲ್ಲಿ ಸಾಯುತ್ತಾನೆಂದು ಯೋಚಿಸಿದ ಸಾವಿತ್ರಿಯು ಮೂರು ರಾತ್ರಿಗಳ ವ್ರತವನ್ನು ಆಚರಿಸಲು ಹಗಲು, ರಾತ್ರಿ ಒಂದೇ ಸ್ಥಳದಲ್ಲಿ ನಿಶ್ಚಲವಾಗಿ ನಿಂತಳು. ತನ್ನ ಸೊಸೆಯು ಈ ರೀತಿಯ ಕಠಿಣ ವ್ರತವನ್ನು ಕೈಗೊಂಡಿದ್ದಾಳೆಂದು ಕೇಳಿದ ನೃಪ ದ್ಯುಮತ್ಸೇನನು ದುಃಖಾನ್ವಿತನಾಗಿ ಮೇಲೆದ್ದು ಸಾವಿತ್ರಿಯನ್ನು ಸಂತೈಸುತ್ತಾ ಹೀಗೆಂದನು. **"ರಾಜಕುಮಾರಿ! ನೀನು ಕೈಗೊಂಡಿರುವ ಈ ವ್ರತವು ಅತಿ ತೀವ್ರವೂ, ಕಠಿಣವೂ ಆದದ್ದು, ಈ ರೀತಿ ಒಂದೇ ಸ್ಥಾನದಲ್ಲಿ ನಿಂತು ಕೊಂಡಿರುವುದು ಪರಮ ದುಷ್ಕರ"** ಎಂದರು.

ಅದಕ್ಕೆ ಸಾವಿತ್ರಿಯು, ತಂದೇ! ಈ ಕಾರ್ಯದಿಂದಾಗಿ ಸಂತಾಪ ಹೊಂದದಿರಿ. ನಾನು ಈ ವ್ರತವನ್ನು ನೆರವೇರಿಸಬಲ್ಲೆ. ಗಟ್ಟಿ ಮನಸ್ಸೇ ಇದನ್ನು ಯಶಸ್ವಿಗೊಳಿಸಬಲ್ಲದು ಮತ್ತು ನಾನು ಆ ಗಟ್ಟಿ ಮನಸ್ಸಿನಿಂದಲೇ ಇದನ್ನು ಪ್ರಾರಂಭಿಸಿದ್ದೇನೆ. ಆಗ ದ್ಯುಮತ್ಸೇನನು ಪುನಃ ಹೇಳಿದನು. ವ್ರತವನ್ನು ಮುರಿ ಎಂದು ನಾನು ನಿನಗೆ ಹೇಳುವುದು ಹೇಗೆ ತಾನೇ ಸರಿಯಾಗುತ್ತದೆ? ನನ್ನ ಪರಿಸ್ಥಿತಿಯಲ್ಲಿರುವವನು ನೀನು ಇದನ್ನು ಪೂರೈಸಬಲ್ಲೆ ಎಂದು ಮಾತ್ರ ಬಯಸಬಲ್ಲ ! ಎಂದನು.

ನಾಳೆ ಗಂಡನು ಸಾಯುತ್ತಾನೆ ಎಂದು ದುಃಖಿಸುತ್ತಾ ಸಾವಿತ್ರಿಯು ರಾತ್ರಿಗಳು ಕಳೆದಂತೆ ಕೊನೆಯ ರಾತ್ರಿಯೂ ಮುಗಿಯುವವರೆಗೆ ನಿಂತುಕೊಂಡೇ ಇದ್ದಳು. ಆ ದಿವಸವಾದ ಇಂದೂ ಸೂರ್ಯೋದಯದೊಂದಿಗೆ ಪೂರ್ವಾಹ್ಣಿಕ ಕ್ರಿಯೆಗಳನ್ನು ಪೂರೈಸಿ ಅಗ್ನಿಯನ್ನು ಉರಿಸಿ ಅಹುತಿಗಳನ್ನಿತ್ತಳು, ಅನಂತರ ಎಲ್ಲ ದ್ವಿಜರಿಗೂ ವೃದ್ಧ ಅತ್ತೆ-ಮಾವಂದಿರಿಗೂ ನಮಸ್ಕರಿಸಿ ಅಂಜಲೀ ಬದ್ಧಳಾಗಿ, ಅವರ ಎದಿರು ನಿಯತಳಾಗಿ ನಿಂತು ಕೊಂಡಳು. ತಪೋವನದಲ್ಲಿ ವಾಸಿಸುತ್ತಿದ್ದ ಎಲ್ಲ ತಪಸ್ವಿಗಳೂ ಶುಭೆ ಸಾವಿತ್ರಿಗೆ ಅವೈಧವ್ಯತ್ವವನ್ನು ಆಶೀರ್ವಾದವಾಗಿ ಹೇಳಿದರು. ಧ್ಯಾನಯೋಗ ಪರಾಯಣಳಾಗಿ ಸಾವಿತ್ರಿಯು ಹಾಗೆಯೇ ಆಗಲೆಂದು ಹೇಳಿ ಆ ತಪಸ್ವಿಗಳೆಲ್ಲರ ಮಾತುಗಳನ್ನೂ ಮನಸ್ಸಿನಲ್ಲಿಯೇ ಪುನರುಚ್ಚರಿಸಿದಳು.

ಏಕಾಂತದಲ್ಲಿ ಕುಳಿತಿದ್ದ ಸಾವಿತ್ರಿಗೆ ಅತ್ತೆ -ಮಾವಂದಿರು ಪ್ರೀತಿಯಿಂದ ವ್ರತದ ಕಠಿಣ ನಿಯಮಗಳನ್ನು ಯಥಾವತ್ತಾಗಿ ಪಾಲಿಸಿ ಸಮಾಪ್ತಿಗೊಳಿಸಿದ್ದೀಯೆ. ಈಗ ನೀನು ಆಹಾರವನ್ನು ಸೇವಿಸುವ ಸಮಯವು ಬಂದಿದೆ. ಭೋಜನವನ್ನು ಸ್ವೀಕರಿಸು ಎಂದಾಗ, ಸಾವಿತ್ರಿಯು ಸೂರ್ಯಾಸ್ತ ಮತ್ತು ನನ್ನ ಆಸೆಯು ಪೂರೈಸಿದ ನಂತರವೇ ನಾನು ಆಹಾರ ಸೇವಿಸುತ್ತೇನೆ ಎಂದು ನನ್ನ ಹೃದಯದಲ್ಲಿ ಸಂಕಲ್ಪಿಸಿಕೊಂಡಿದ್ದೇನೆ. ಅಂದರಂತೆಯೇ ನಡೆದುಕೊಳ್ಳುತ್ತೇನೆ ಎಂದಳು.

ಸತ್ಯವಾನನು ಹೆಗಲಮೇಲೆ ಕೊಡಲಿಯನ್ನಿಟ್ಟು ಕಾಡಿಗೆ ಹೊರಟನು. ಸಾವಿತ್ರಿಯು ಗಂಡನನ್ನು ತಡೆದು ನೀನೊಬ್ಬನೇ ಹೋಗಕೂಡದು. ನಾನೂ ನಿನ್ನೊಡನೆ ಬರುತ್ತೇನೆ. ನೀನೊಬ್ಬನನ್ನೇ ಬಿಡಬಾರದು! ಎಂದಳು. ಆಗ ಸತ್ಯವಾನನು, ಈ ಮೊದಲು ನೀನು ಕಾಡಿಗೆ ಹೋಗಿಲ್ಲ ಮತ್ತು ಅಲ್ಲಿಯ ದಾರಿಯು ದುಃಖತರವಾದುದು. ಮೇಲಾಗಿ ವ್ರತೋಪವಾಸಗಳಿಂದ ನೀನು ಬಳಲಿದ್ದೀಯೆ. ಕಾಲ್ನಡುಗೆಯಲ್ಲಿಯೇ ಹೇಗೆ ಹೋಗಬಲ್ಲೆ? ಎಂದ.

ಸಾವಿತ್ರಿಯು, ಈ ಉಪವಾಸದಿಂದ ಬಳಲಿಲ್ಲ ಮತ್ತು ಬಲಹೀನಳೂ ಆಗಿಲ್ಲ. ನಿನ್ನೊಡನೆ ಬರುತ್ತಿದ್ದೇನಲ್ಲಾ ಎಂದು ಉತ್ಸಾಹವಿದೆ. ನನ್ನ ಈ ಬಯಕೆಯನ್ನು ನಿರಾಕರಿಸದಿರು. ಸತ್ಯವಾನನು ಬರಲು ಅಷ್ಟೊಂದು ಉತ್ಸಾಹವಿದ್ದರೆ ನಿನಗಿಷ್ಟವಾದಂತೆ ಮಾಡುತ್ತೇನೆ. ನಾನು ನಿನ್ನನ್ನು ಬರಲು ಹೇಳಿಲ್ಲ. ಆದುದರಿಂದ ಹಿರಿಯರ ಅಪ್ಪಣೆಯನ್ನು ಪಡೆದು ಬಾ.

ಆಗ ಆ ಮಹಾವ್ರತೆಯು ತನ್ನ ಅತ್ತೆ -ಮಾವಂದಿರ ಬಳಿ ಹೋಗಿ ನನ್ನ ಪತಿಯು ಹಣ್ಣುಗಳನ್ನು ಮತ್ತು ಅಗ್ನಿಹೋತ್ರಕ್ಕಾಗಿ ಸಮಿತ್ತುಗಳನ್ನು ತರಲು ಕಾಡಿಗೆ ಹೋಗುತ್ತಿದ್ದಾನೆ. ನೀವು ನನಗೆ ಅನುಜ್ಞೆಯನ್ನಿತ್ತರೆ ನಾನೂ ಕೂಡ ಅವನೊಂದಿಗೆ ಹೋಗಲು ಬಯಸುತ್ತೇನೆ. ಒಂದು ಕ್ಷಣವೂ ಅವನ ವಿರಹವನ್ನು ಸಹಿಸಲಾರೆ. ಅಲ್ಲದೇ ಸುಮಾರು ಒಂದು ವರ್ಷಗಳಾಗುತ್ತಾ

ಬಂದಿದೆ ನಾನು ಈ ಆಶ್ರಮದ ಹೊರಗೇ ಹೋಗಿಲ್ಲ.

ದ್ಯುಮತ್ಸೇನನು, ಸಾವಿತ್ರೀ! ನಿನ್ನ ತಂದೆಯು ನಿನ್ನನ್ನು ನನಗೆ ಸೊಸೆಯಾಗಿ ಕೊಟ್ಟಾಗಿನಿಂದ ಇದೂವರೆಗೆ ನೀನು ನನ್ನಲ್ಲಿ ಏನನ್ನಾದರೂ ಕೇಳಿದ್ದುದಿಲ್ಲ. ಆದುದರಿಂದ ನೀನು ಬಯಸಿದುದನ್ನು ಪಡೆ. ಪುತ್ರಿ! ಸತ್ಯವಾನನೊಂದಿಗೆ ದಾರಿಯಲ್ಲಿ ಎಚ್ಚರಿಕೆಯಿಂದ ಹೋಗು! ಅವರಿಬ್ಬರಿಂದಲೂ ಅಪ್ಪಣೆ ಪಡೆದು ಸಾವಿತ್ರಿಯು ಗಂಡನೊಂದಿಗೆ ಹೊರಟಳು.

ಕಾಡಿಗೆ ಕಟ್ಟಿಗೆ ತರಲು ಹೊರಟ ಅವನನ್ನು ತಾನೂ ಅನುಸರಿಸಿದಳು. ಸತ್ಯವಾನನು ಪತ್ನಿಯ ಸಹಾಯದಿಂದ ಹಣ್ಣುಗಳನ್ನು ಕಿತ್ತು ಬುಟ್ಟಿಯಲ್ಲಿ ತುಂಬಿಸಿ ಕಟ್ಟಿಗೆ ಕಡಿಯಲು ಪ್ರಾರಂಭಿಸಿದನು. ಅವನು ಕಟ್ಟಿಗೆ ಕಡಿಯುತ್ತಿರಲು ಶ್ರಮದಿಂದ ಬೆವರಿಳಿದು ಅವನಿಗೆ ತಲೆನೋಯ ತೊಡಗಿತು. ಆಯಾಸಗೊಂಡ ಅವನು ಪ್ರಿಯ ಪತ್ನಿಯ ಬಳಿ ಬಂದು ಈ ಶ್ರಮದಿಂದ ನನ್ನ ತಲೆಯು ನೋಯುತ್ತಿದೆ. ಅಂಗಾಂಗಗಳೂ ಹೃದಯವೂ ನೋಯುತ್ತಿವೆ. ನಾನು ಅಸ್ವಸ್ಥನಾಗಿದ್ದೇನೆಂದು ತೋರುತ್ತಿದೆ. ಶೂಲಗಳು ನನ್ನ ತಲೆಯನ್ನು ತಿವಿಯುತ್ತಿರುವಂತೆ ಅನಿಸುತ್ತಿದೆ. ಮಲಗಲು ಬಯಸುತ್ತೇನೆ. ನಿಂತುಕೊಂಡಿರಲು ನನ್ನಲ್ಲಿ ಶಕ್ತಿಯಿಲ್ಲ ಎಂದನು. ತಕ್ಷಣವೇ ಸಾವಿತ್ರಿಯು ನೆಲದ ಮೇಲೆ ಕುಳಿತುಕೊಂಡು ಅವನ ತಲೆಯನ್ನು ತನ್ನ ತೊಡೆಯ ಮೇಲಿರಿಸಿಕೊಂಡಳು .

ಆ ಕ್ಷಣವೂ ಬಂದೇ ಬಿಟ್ಟಿತ್ತು. ಪಾಶಾಂಕುಶನಾಗಿ ಬಂದ ಯಮದೇವನನ್ನು ಸಾವಿತ್ರಿಯು ಪ್ರಶ್ನಿಸಿದಾಗ ಯಮದೇವನು ನೀನು ಪತಿವ್ರತೆ ಮತ್ತು ತಪೋನ್ವಿತೆಯಾಗಿರುವುದರಿಂದ ನಾನು ನಿನ್ನೊಡನೆ ಮಾತನಾಡಬಲ್ಲೆ. ನಾನು ಯಮನೆಂದು ತಿಳಿ. ಈ ನಿನ್ನ ಪತಿ ರಾಜಕುಮಾರ ಸತ್ಯವಾನನು ಕ್ಷೀಣಾ ಯುವು. ಇವನನ್ನು ಬಂಧಿಸಿ ನನ್ನೊಡನೆ ಕರೆದು ಕೊಂಡು ಹೋಗಲು ಬಯಸಿ ಬಂದಿದ್ದೇನೆ. ಹೀಗೆ ಹೇಳಿ ಭಗವಾನ್ ಪಿತೃರಾಜನು ಅವಳನು ಸಂತೋಷಗೊಳಿಸಲು ತನ್ನ ಮಾತನ್ನು ಮುಂದುವರೆಸಿ ಇವನು ಧರ್ಮಸಂಯುಕ್ತನೂ, ರೂಪವಂತನೂ,ಗುಣಸಾಗರನು ಆಗಿದ್ದಾನಾದುದರಿಂದ ನನ್ನ ಪುರುಷರು ಇವನನ್ನು ಎಳೆದು ಕೊಂಡು ಹೋಗಲು ಅರ್ಹರಲ್ಲವೆಂದು ನಾನೇ ಇಲ್ಲಿಗೆ ಬಂದಿದ್ದೇನೆ ಎಂದನು. ಹೀಗೆ ಹೇಳಿ ಯಮನು ಬಲವನ್ನುಪಯೋಗಿಸಿ ಸತ್ಯವಾನನ ದೇಹದಿಂದ ಅಂಗುಷ್ಠ ಗಾತ್ರದ ಪುರುಷನನ್ನು ಪಾಶಕ್ಕೆ ಕಟ್ಟಿ ಎಳೆದು ಹೊರತೆಗೆದನು. ಪ್ರಾಣವು ಹೊರಟುಹೋಗಲು ಸತ್ಯವಾನನ ಶ್ವಾಸವು ನಿಂತಿತು, ಕಳೆಯು ಕುಂದಿತು ಮತ್ತು ನಿರ್ವಿಚೇಷ್ಟವಾದ ಆ ಶರೀರವು ನೋಡಲು ಅಪ್ರಿಯವಾಗಿ ತೋರಿತು. ಅವನನ್ನು ಬಂಧಿಸಿ ಯಮನು ದಕ್ಷಿಣಾಭಿಮುಖವಾಗಿ ಹೊರಟನು. ನಿಯಮ-ವ್ರತಗಳಿಂದ ಸಂಸಿದ್ಧಳಾಗಿದ್ದ ಆ ಪತಿವ್ರತೆ ಸಾವಿತ್ರಿಯೂ ಕೂಡ ದುಃಖಾರ್ತಳಾಗಿ ಯಮನನ್ನು ಹಿಂಬಾಲಿಸಿದಳು. ಸಾವಿತ್ರಿ ಅವನನ್ನು ಹಿಂಬಾಲಿಸಿದಾಗ ಯಮನಿಗೆ ಕರುಣೆ ಬಂದು ಅವಳ ಜೊತೆ ಸಂವಹನ ನಡೆಸಿದಾಗ ಅವಳ ಯುಕ್ತಿ ಯುಕ್ತ ಮಾತಿಗೆ ಮರುಳಾಗಿ ಸತ್ಯವಾನನ ಜೀವವೊಂದನ್ನು ಬಿಟ್ಟು ಮತ್ಯಾವುದೇ ವರ ಬೇಡು ಅಂದ. ಬುದ್ಧಿವಂತಳಾದ ಸಾವಿತ್ರಿ ಅಂತಹ ಸಮಯದಲ್ಲೂ ಅಧೀರಳಾಗದೇ ತನ್ನ ವಾಕ್ಚಾತುರ್ಯದಿಂದ ಯಮನನ್ನು ಸಂಪ್ರೀತಗೊಳಿಸಿ ನಾಲ್ಕು ವರಗಳನ್ನು ಪಡೆದಳು. ಮಾವನಿಗೆ ದೃಷ್ಟಿ ಮತ್ತು ರಾಜ್ಯವನ್ನು ಮೊದಲೆರಡು ವರಗಳಿಂದಲೂ, ತಂದೆಗೆ ನೂರು ಗಂಡು ಮಕ್ಕಳನ್ನು ಮೂರನೆಯ ವರದಿಂದಲೂ ದೊರಕಿಸಿದ ಸಾವಿತ್ರಿ ನಾಲ್ಕನೆಯ ವರದಿಂದ ತನಗೆ ನೂರು ಮಕ್ಕಳು ಹುಟ್ಟುವಂತೆ ವರ ಪಡೆದಳು. ಈ ವರವನ್ನು ದಯಪಾಲಿಸಿ ಯಮ ತನ್ನ ಮಾತಿ ನಿಂದಲೇ ಬದ್ಧನಾದ.

ಪತಿಯಿಲ್ಲದೆ ಪತಿವ್ರತೆಗೆ ಸಂತಾನವಾಗಲು ಸಾಧ್ಯವೆ? ಸಂತಾನ ಪಡೆಯುವ ಪರ್ಯಾಯ ಮಾರ್ಗವನ್ನು ಸೂಚಿಸುವ ದುಸ್ಸಾಹಸವನ್ನು ಯಮ ಮಾಡಲಿಲ್ಲ. ಸತ್ಯವಾನನ ಜೀವವನ್ನು ಹಿಂತಿರುಗಿಸಿದ. ಪತಿಯನ್ನು ಉಳಿಸಿಕೊಂಡದ್ದಲ್ಲದೆ ಸೇರಿದ ಮನೆಗೂ,ತವರು ಮನೆಗೂ ಶ್ರೇಯಸ್ಸನ್ನುಂಟು ಮಾಡಿದ ಸಾವಿತ್ರಿ ಲೋಕವಿಖ್ಯಾತವಾದಳು.

ಸಾವಿತ್ರಿಯು ತನ್ನ ಪತಿಯ ಕಳೆದು ಹೋದ ಜೀವನವನ್ನು ಯಮಧರ್ಮನೊಂದಿಗೆ ಮೂರು ದಿನ ಶಾಸ್ತ್ರಚರ್ಚೆಯನ್ನು ವಟವೃಕ್ಷದ ಕೆಳಗೆ ಮಾಡಿದಳು. ಆ ವಟವೃಕ್ಷದ ಕೆಳಗೆ ಯಮಧರ್ಮನು ಪ್ರಸನ್ನನಾಗಿ ಸತ್ಯವಾನನಿಗೆ ಮರು ಜೀವವ ನೀಡಿದನು ಆದುದರಿಂದ ವಟವೃಕ್ಷದೊಂದಿಗೆ ಸಾವಿತ್ರಿಯ ಹೆಸರನ್ನು ಜೋಡಿಸಲಾಯಿತು.

ವಟವೃಕ್ಷ, ಅಶ್ವತ್ಥವೃಕ್ಷ, ಶಮಿ/ಬನ್ನಿ ವೃಕ್ಷ ಇವು ಪವಿತ್ರ ಮತ್ತು ಯಜ್ಞ ವೃಕ್ಷಗಳಾಗಿವೆ. ಇವೆಲ್ಲ ವೃಕ್ಷಗಳಲ್ಲಿ ವಟವೃಕ್ಷದ ಆಯುಷ್ಯವು ಅತ್ಯಧಿಕವಾಗಿದ್ದು ಅದರಂತೇ ಸತ್ಯವಾನನ ಆಯಸ್ಸು ಅಧಿಕವಾಗಿದೆ.

ಈ ವ್ರತದ ನಿಯಮಾನುಸಾರ ಜ್ಯೇಷ್ಠ ಶುದ್ಧ ದ್ವಾದಶಿ ದಿನ ಲಘು ಭೋಜನ ಮಾಡಿ, ತ್ರಯೋದಶಿಯಿಂದ ಹುಣ್ಣಿಮೆಯ ತನಕ ಉಪವಾಸವಿರಬೇಕು. ಹುಣ್ಣಿಮೆಯ ದಿನ ಚಂದ್ರಾರ್ಘ್ಯ, ಸುವಾಸಿನಿ ಪೂಜೆ, ದಂಪತಿ ಪೂಜೆ ಮಾಡಬೇಕು.

ಕರ್ನಾಟಕ ವೈಷ್ಣವ ದೇವಾಲಯಗಳು

56

# ಪಾಳ್ಯದ ಲಕ್ಷ್ಮೀ ಜನಾರ್ದನ ದೇವಾಲಯ

- ಕೆಂಗೇರಿ ಚಕ್ರಪಾಣಿ
94483 86886

ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನಲ್ಲಿರುವ ಪಾಳ್ಯದಲ್ಲಿ ಲಕ್ಷ್ಮೀಜನಾರ್ದನ ದೇವಾಲಯವಿದೆ. ಪಾಳ್ಯಗ್ರಾಮವನ್ನು ಪ್ರವೇಶಿಸುವ ಆರಂಭದಲ್ಲಿಯೇ ಭವ್ಯವಾದ ದೇವಾಲಯವು ಗೋಚರಿಸುತ್ತದೆ. ಪ್ರಸ್ತುತ ಪ್ರದೇಶವನ್ನು ಹಳೇ ಪಾಳ್ಯವೆಂದು ಕರೆಯುವರು. ಶಾಸನಗಳಲ್ಲಿ ಶೆಟ್ಟಿಗಾನಪಾಳ್ಯ, ಸೆರಗಿಪಾಳ್ಯ ಎಂದು ಕರೆದಿರುವ ಪಾಳ್ಯವು ವಿಜಯ ನಗರದ ಅರಸರ ಕಾಲದಲ್ಲಿ ಪಾಳ್ಯ ಸೀಮೆ ಎಂಬ ಆಡಳಿತ ಪ್ರದೇಶದ ಕೇಂದ್ರ ಸ್ಥಾನವಾಗಿತ್ತು.

## ಲಕ್ಷ್ಮೀಜನಾರ್ದನ ದೇವಾಲಯ

ಪಾಳ್ಯದ ಲಕ್ಷ್ಮೀಜನಾರ್ದನ ದೇವಾಲಯವು ಪೂರ್ವಾಭಿ ಮುಖವಾಗಿದ್ದು, ಪ್ರವೇಶಮಂಟಪ, ರಂಗಮಂಟಪ, ನವರಂಗ, ಅಂತರಾಳ, ಗರ್ಭಗೃಹಗಳನ್ನು ಹೊಂದಿರುವ ಬೃಹತ್ ರಚನೆಯಾಗಿದೆ. ಈ ದೇವಾಲಯದ ಸುತ್ತಲೂ ರಕ್ಷಣಾ ಗೋಡೆಯಿದೆ. ದೇವಾಲಯದ ಹೊರಗೆ ಈಶಾನ್ಯ ದಿಕ್ಕಿನಲ್ಲಿ ಎತ್ತರವಾದ ಉತ್ಸವ ಮಂಟಪ ಇದೆ. ರಂಗಮಂಟಪ ವಿಶಾಲವಾಗಿದ್ದು ಹಲವಾರು ಕಂಬಗಳನ್ನು ಹೊಂದಿವೆ. ರಂಗಮಂಟಪದಿಂದ ನವರಂಗಕ್ಕೆ ಪ್ರವೇಶದ ಇಕ್ಕೆಲಗಳಲ್ಲಿ ಹೊಯ್ಸಳ ಶೈಲಿಯನ್ನು ಅನುಸರಿಸಿರುವ ಅಳೆತ್ತರದ ದ್ವಾರಪಾಲಕರ ಸುಂದರ ಮೂರ್ತಿಗಳಿವೆ. ದ್ವಾರಪಾಲಕರ ಪೀಠದ ಮೇಲಿನ ಶಾಸನದಲ್ಲಿ ರಂಗಣ್ಣನೆಂಬ ಭಕ್ತನೊಬ್ಬನು ಮಾಡಿಸಿ ಕೊಟ್ಟಿರುವ ಉಲ್ಲೇಖವಿದೆ.


## ಶ್ರೀ ಲಕ್ಷ್ಮೀ ಜನಾರ್ದನ ಸ್ವಾಮಿಯ ಭವ್ಯ ಮೂರ್ತಿ

ಏಕ ಕೂಟ ದೇವಾಲಯದ ಗರ್ಭಗುಡಿಯಲ್ಲಿರುವ ಲಕ್ಷ್ಮೀ ಜನಾರ್ದನ ಸ್ವಾಮಿಯ ವಿಗ್ರಹ ಬಹಳ ಆಕರ್ಷಕವಾಗಿದೆ. ಸುಮಾರು ಏಳು ಅಡಿ ಎತ್ತರವಿರುವ ಜನಾರ್ದನ ಸ್ವಾಮಿಯು ಚತುರ್ಭುಜನಾಗಿದ್ದು ಮೇಲಿನ ಕೈಗಳಲ್ಲಿ ಚಕ್ರ, ಶಂಖಗಳನ್ನು ಧರಿಸಿದ್ದು ಕೆಳಬಲಗೈ ಅಭಯ ಹಸ್ತ ಮತ್ತು ಕೆಳ ಎಡಗೈ ಕಟಿಹಸ್ತದಲ್ಲಿದೆ. ದೇವನು ಹಿಡಿದಿರುವ ಚಕ್ರವೂ ಪ್ರಯೋಗ ಚಕ್ರವಾಗಿದ್ದು ಕ್ರಿ.ಶ.10 ನೆಯ ಶತಮಾನದ ವಿಗ್ರಹದ ಲಕ್ಷಣವನ್ನು ಹೊಂದಿದೆ. ಇದೇ ಅಭಿಪ್ರಾಯವನ್ನು ಕ್ರಿಸ್ತಶಕ 1926 ರ ಮೈಸೂರ್ ಆರ್ಕಿಯಾಲಜಿಕಲ್ ರಿಪೋರ್ಟ್‌ನ ಸಂಪಾದಕರು ಹೊಂದಿದ್ದಾರೆ. ಕಿರೀಟ ಮಕುಟವನ್ನು ದೇವನು ಧರಿಸಿದ್ದು ಹಸನ್ಮುಖಿಯಾಗಿರುವನು. ಕೊರಳಿಗೆ ಕಂಠಿಹಾರ, ವೈಜಯಂತಿಮಾಲೆ, ದೇಹಕ್ಕೆ ಧರಿಸಿರುವ ಯಜ್ಞೋಪವೀತ, ತೋಳುಗಳಿಗೆ ತೋಳ ಬಂದಿ ಕೈಗಡಗ ಸೊಗಸಾಗಿ ಮೂಡಿ ಬಂದಿವೆ.




ಪಾಳ್ಯದ ಜನಾರ್ದನ ದೇವಾಲಯದ ಕಾಲವು ಕ್ರಿ.ಶ. 13-14 ನೆಯ ಶತಮಾನಕ್ಕೆ ಸೇರಿದ್ದರೂ ಇಲ್ಲಿರುವ ಪ್ರಧಾನ ದೇವತೆ 10ನೆಯ ಶತಮಾನಕ್ಕೆ ಸೇರುವ ಪುರಾತನ ಮೂರ್ತಿ ಆಗಿರುವುದು ಈ ದೇವಾಲಯದ ವಿಶೇಷತೆ. ಪಾಳ್ಯ ಗ್ರಾಮದ ಸ್ಥಳ ಪುರಾಣದ ಪ್ರಕಾರ ಜಮದಗ್ನಿ ಮಹರ್ಷಿಯ ಪ್ರಾರ್ಥನೆಯ ಮೇರೆಗೆ ಜನಾರ್ದನ ಸ್ವಾಮಿಯ ಇಲ್ಲಿ ನೆಲೆಸಿದನೆಂದು ತಿಳಿದು ಬಂದಿದೆ.

ನವರಂಗದಲ್ಲಿ ಜನಾರ್ದನ ಸ್ವಾಮಿಯ ಬಲಭಾಗದಲ್ಲಿ ವಿಶ್ವಕ್ಸೇನರ ಮೂರ್ತಿಯಿದ್ದರೆ ಎಡಭಾಗದಲ್ಲಿ ಇತ್ತೀಚೆಗೆ ಪ್ರತಿಷ್ಠಾಪನೆಯಾದ ಪಂಚಮುಖಿ ವಿನಾಯಕನ ಮೂರ್ತಿಯಿದೆ.








ದೇವಾಲಯದ ಪ್ರಾಕಾರದಲ್ಲಿ ಕಿರು ಗುಡಿಗಳಿವೆ. ಒಂದು ಗುಡಿಯಲ್ಲಿ ಲಕ್ಷ್ಮೀನಾರಾಯಣ ಸ್ವಾಮಿಯ ವಿಗ್ರಹದ ಜೊತೆ ಆಳ್ವಾರುಗಳ ವಿಗ್ರಹಗಳು ಇವೆ. ಪೆರಿಯಾಳ್ವಾರರು, ಕುಲಶೇಖರ್‌ಆಳ್ವಾರ್ ಮುಂತಾದ ವಿಷ್ಣು ಪಾರಮ್ಯವನ್ನು ಲೋಕಕ್ಕೆ ಸಾರಿದ ಮೂರ್ತಿಗಳಿವೆ. ದೇವಾಲಯದ ನೈರುತ್ಯ ದಿಕ್ಕಿನಲ್ಲಿ ವಿಷ್ಣು ಪತ್ನಿ ಪದ್ಮಾವತಿ ದೇವಿಯ ಗುಡಿ ಇದೆ. ಚತುರ್ಭಜಳಾದ ದೇವಿಯು ಮೇಲಿನ ಕೈಗಳಲ್ಲಿ ಕಮಲಗಳನ್ನು ಹಿಡಿದಿದ್ದು  ಕೆಳಗಿನ ಕೈಗಳು ಅಭಯವರದ ಹಸ್ತದಲ್ಲಿದೆ. ದೇವಿಯ ಗುಡಿಯ ಬದಿಯಲ್ಲಿ ವೇಣುಗೋಪಾಲಕೃಷ್ಣನ ಮೂರ್ತಿ ಇದೆ.

ಗೋಮಾತೆಯನ್ನು ಒರಗಿಕೊಂಡು ಕೃಷ್ಣನು ಕೊಳಲು ನುಡಿಸುತ್ತಿರುವನು. ಪದ್ಮಾವತಿ ಅಮ್ಮನವರ ಎಡಬದಿಯಲ್ಲಿ ಗಣಪತಿಯ ಗುಡಿಯಿದೆ. ದೇವಾಲಯದ ಹೊರಭಿತ್ತಿಯಲ್ಲಿರುವ ದೇವಕೋಷ್ಟಗಳ ಮೇಲ್ಭಾಗದಲ್ಲಿ ನಾಟ್ಯ, ಗಣಪತಿ, ವೇಣುಗೋಪಾಲ,ಮಾರುತಿ, ಯೋಗಾನರಸಿಂಹ, ಶ್ರೀಭೂನೀಳಾ ಸಮೇತನಾದ ನಾರಾಯಣ ಮುಂತಾದ ಮೂರ್ತಿಗಳಿವೆ. ಈ ದೇವಾಲಯದ ಉತ್ತರ ಭಾಗದಲ್ಲಿರುವ ಗುಡಿಯಲ್ಲಿ ಮಾರುತಿಯ ವಿಗ್ರಹವಿದೆ. ಮಾರುತಿಯು ಎತ್ತಿದ ಬಲಗೈ ಅಭಯಹಸ್ತದಲ್ಲಿದ್ದು ಎಡಗೈಯಲ್ಲಿ ಮಾವಿನ ಗೊಂಚಲನ್ನು ಹಿಡಿದಿರುವನು.

ಮಾರುತಿಯು ರಾವಣನ ಕುಮಾರನಾದ ಅಕ್ಷಯ ಕುಮಾರನನ್ನು ಮೆಟ್ಟಿನಿಂತಿರುವನು. ಪಾಶ್ವಕ್ಕೆ ತಿರುಗಿರುವ ಮಾರುತಿಯ ಬಾಲವು ದೇಹವನ್ನು ಸುತ್ತುವರೆದಿದೆ ಹಾಗೂ ಬಾಲದ ತುದಿಯಲ್ಲಿ ಗಂಟೆ ಇದೆ. ಮಾರುತಿಯ ಹಿಂಭಾಗದಲ್ಲಿರುವ ಗೋಡೆಯಲ್ಲಿ ಸುಂದರಕಾಂಡದ ಕೆಲವು ದೃಶ್ಯಗಳನ್ನು ನಿರೂಪಣಾತ್ಮಕವಾಗಿ ಚಿತ್ರಿಸಲಾಗಿದೆ. ಅಶೋಕ ವನದಲ್ಲಿ ಮಾರುತಿಯು ಸೀತಾಮಾತೆಯನ್ನು ಭೇಟಿಯಾಗಿರುವ ಮುಂತಾದ ಚಿತ್ರಣಗಳಿವೆ.

ಪಾಳ್ಯದ ಜನಾರ್ದನ ದೇವಾಲಯದ ಇತಿಹಾಸ ಕಟ್ಟಿ ಕೊಡುವುದರಲ್ಲಿ ಇಲ್ಲಿ ಅನೇಕ ಶಾಸನಗಳು ನೆರವಿಗೆ ಬರುತ್ತವೆ. ಇಲ್ಲಿ ದೊರೆತಿರುವ ಪ್ರಾಚೀನ ಶಾಸನ ಕ್ರಿ.ಶ. 1360 ಕಾಲದಾಗಿದ್ದು ವಿಜಯನಗರದ ದೊರೆ ಬುಕ್ಕರಾಯನ ಕಾಲದಲ್ಲಿ ಈಶ್ವರ ಒಡೆಯ ಮತ್ತು ಮೀರಾದೇವಿಯ ಪುತ್ರ ತೆಪ್ಪದ ನಾಗಣ್ಣ ಎಂಬ ದಂಡನಾಯಕನು ಜನಾರ್ದನ ದೇವರ ಬೆಳಗಿನ ನೈವೇದ್ಯಕ್ಕೆ ಎರಡು ಹೊತ್ತಿನ ಅಕ್ಕಿಗೆ, ತೆಂಗಿನಕಾಯಿ, ವೀಳೆಯದೆಲೆ, ಭಾನುವಾರದ ಸೊಡೂರು ತುಪ್ಪದ ನಂದಾದೀಪಕ್ಕೆ ದೀವಿಗೆ ಎಣ್ಣೆಗೆ, ಪಂಚಪರ್ವ, ವಿಶೇಷ ಸೇವೆಗೆ ಸಮೀಪದ ಚಂಡನ ಹಳ್ಳಿ ಮತ್ತು ಹರದೂರಪುರ ಎಂಬ ಗ್ರಾಮಗಳ  ಆದಾಯವನ್ನು ವಿನಿಯೋಗಿಸಲು ವ್ಯವಸ್ಥೆ ಮಾಡಿದನು. 16 ನೇ ಶತಮಾನದಲ್ಲಿ ಎರೆಯಪ್ಪನ ಮಗ ಕೃಷ್ಣಪ್ಪ ನಾಯಕನು 140 ವರಹಗಳನ್ನು ತೆಪ್ಪದ ಸೇವೆಗೆ ಅರ್ಪಿಸಿರುವನು. ವಿಜಯನಗರದ ಅರಸು ಅಚ್ಯುತರಾಯನ ಕಾಲದಲ್ಲಿ ತಿರುಮಲರಾಜ ಮಹಾರಾಜನ ಮೈದುನ ರಘುಪತಿರಾಯನು ಮತ್ತು ಕೆಂಪಸಿಂಗಯ್ಯರು ದೇವರ ಏಕಾಂತ ಸೇವೆಗೆ ನಿತ್ಯ ಭೋಗಕ್ಕೆ, ಚಿಗಲೂರು ಎಂಬ ಗ್ರಾಮವನ್ನು ದಟ್ಟಿ ಬಿಟ್ಟಿರುವ ಮಾಹಿತಿ ಶಾಸನದಲ್ಲಿದೆ.











ಇದೇ ಕಾಲಘಟ್ಟದಲ್ಲಿ ಹೆಗ್ಗಪ್ಪನ ಮಗ ಮಲ್ಲರಸನು ಜನಾರ್ದನ ದೇವರಿಗೆ ಚಿನ್ನದ ಹಿಡಿ ಇರುವ ಶ್ವೇತ ವರ್ಣದ ಶಂಖವನ್ನು ಅರ್ಪಿಸಿದ್ದನು.ಈ ದೇವಾಲಯದಲ್ಲಿ ಸಿಬ್ಬಂದಿ ವರ್ಗದ ವಿವರವು ಶಾಸನದಲ್ಲಿ ದೊರೆಯುತ್ತದೆ. ಇಲ್ಲಿ ಅರ್ಚಕರಲ್ಲದೆ ಒಬ್ಬರು ಪರಿಚಾರಕರು, ಇಬ್ಬರು ಮಾಲೆಕಾರರು, ಓಲಗ ಮತ್ತು ಡೋಲು ಬಾರಿಸುವವರು ತಲಾ ಒಬ್ಬರು ಮತ್ತು ಒಬ್ಬರು ಉಳಿಗದವರ ಜೀವಿತಕ್ಕೆ ತೆಪ್ಪದನಾಗಣ್ಣನು ವ್ಯವಸ್ಥೆ ಮಾಡಿದ್ದನು.

### ಸ್ಥಳ ಪುರಾಣ

ಈ ಸ್ಥಳವು ಪದ್ಮಾವತಿ ಅಮ್ಮನವರ ತಪೋ ಭೂಮಿಯಾಗಿದ್ದರಿಂದ ಪದ್ಮಾವತಿ ಪುರಿ ಎಂದು ಪ್ರಸಿದ್ದಿಯಾಗಿತ್ತು ಇಲ್ಲಿ ಇಂದ್ರನ ಬ್ರಹ್ಮಹತ್ಯಾ ದೋಷ ನಿವಾರಣೆಯಾಗಿದ್ದರಿಂದ ಇಂದ್ರಪ್ರಸ್ಥಪುರಿ ಎಂದು, ಪಾಳೆಯಗಾರರು ಆಳ್ವಿಕೆ ನಡೆಸಿದ್ದರಿಂದ ಪಾಳ್ಯ ಎಂದೂ ಹೆಸರೂ ಬಂದಿದೆ. ವಿತಂಕ ಎಂಬ ರಾಕ್ಷಸನು ಪರಶಿವನಿಂದ ವರವನ್ನು ಪಡೆದು ಲೋಕಕಂಟಕನಾಗಿರುತ್ತಾನೆ.

ಆಗ ಪದ್ಮಾವತಿ ಅಮ್ಮನವರು ಮಹಾವಿಷ್ಣುವನ್ನು ಕುರಿತು ತಪಸ್ಸು ಮಾಡಲು ಬ್ರಹ್ಮ ವಿಷ್ಣು ಮಹೇಶ್ವರರು ಏಕೀಭವಿಸಿ ರಕ್ಕಸನನ್ನು ಸಂಹರಿಸಿದರೆಂದು ಸ್ಥಳ ಪುರಾಣವಿದೆ. ಹಾಗಾಗಿ ದೇವನ ವಿಗ್ರಹವು ತ್ರಿಮೂರ್ತಿ ರೂಪದಲ್ಲಿದ್ದು ಕೌಪೀನ ಯಜ್ಞೋಪವೀತ ಧರಿಸುವುದರಿಂದ ಬ್ರಹ್ಮನೆಂತಲೂ ಶಂಖ, ಚಕ್ರ, ಅಭಯ ಹಸ್ತ ದಲ್ಲಿರು ವುದರಿಂದ ವಿಷ್ಣುಮೂರ್ತಿ ಎಂತಲೂ ಮತ್ತು ಹಿಂದೆ ಜಟೆಯಿರುವುದರಿಂದ ಶಿವನ ರೂಪೀ ಎಂದು ತ್ರಿಮೂರ್ತಿ ರೂಪದಲ್ಲಿ ದೇವನಿರುವನೆಂಬ ಅಭಿಪ್ರಾಯವಿದೆ. ಇದಕ್ಕೆ ಪೂರಕವಾಗಿ ಸ್ವಾಮಿಯು ಪ್ರಯೋಗ ಚಕ್ರ ವನ್ನು ಹಿಡಿ ದಿರುವುದು ಗಮನಿಸಬಹುದು. ಪಾಳ್ಯಗ್ರಾಮದಲ್ಲಿ ಎರಡು ನದಿಗಳು ಹರಿಯುತ್ತವೆ. ಜನಾರ್ದನ ಸ್ವಾಮಿಯ ಬಲಕ್ಕೆ ಚಕ್ರದ ಕಡೆ ಚಕ್ರತೀರ್ಥ ಅಂತಲೂ ಶಂಖುವಿನ ಕಡೆ ಇರುವ ತೀರ್ಥಕ್ಕೆ ಶಂಖ ತೀರ್ಥ ಎಂತಲೂ ಹೆಸರಿದೆ. ಸಂಪೂರ್ಣ ಶಿಥಿಲ ಹಂತವನ್ನು ತಲುಪಿದ್ದ ಈ ದೇವಾಲಯದ ಜೀರ್ಣೋದ್ಧಾರ ಕಾರ್ಯವು ಸ್ಥಳೀಯರ ನೆರ ವಿನಿಂದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ ವತಿಯಿಂದ ನೆರವೇರಿದೆ.

ಲಕ್ಷ್ಮೀಜನಾರ್ದನ ದೇವಾಲಯದ ಅನತಿ ದೂರದಲ್ಲಿ ಹಿಂದೆ ಸ್ವಾಮಿಯ ಸೇವಾಕೈಂಕರ್ಯಕ್ಕಾಗಿ ಬಳಸುತ್ತಿದ್ದ ಕಲ್ಯಾಣಿಯು ಹೂಳುತುಂಬಿ ಹಾಳಾಗಿತ್ತು. ರಾಜ್ಯ ಸರ್ಕಾರದ ವತಿಯಿಂದ ಕಲ್ಯಾಣಿಯನ್ನು ಸ್ವಚ್ಛಗೊಳಿಸಲಾಗಿದೆ. ಪಾಳ್ಯದ ಲಕ್ಷ್ಮೀಜನಾರ್ದನ ಸ್ವಾಮಿಯ ಬ್ರಹ್ಮರಥೋತ್ಸವವು ಪ್ರತಿವರ್ಷ ಚೈತ್ರ ಮಾಸದ ಶುದ್ಧ ಪೌರ್ಣಮಿಯಂದು ಅದ್ದೂರಿಯಾಗಿ ಬಹು ವೈಭವದಿಂದ ನೆರವೇರುತ್ತದೆ. ರಥೋತ್ಸವದ ಅಂಗವಾಗಿ ಸ್ವಾಮಿಗೆ ಕಲ್ಯಾಣೋತ್ಸವ, ಗಜ ವಾಹನೋತ್ಸವ, ಪುಷ್ಪಾಲಂಕಾರ, ಸೂರ್ಯಮಂಡಲ ಉತ್ಸವ, ತಿರುಪ್ಪಾವೈ ಮುಂತಾದ ಧಾರ್ಮಿಕ ಆಚರಣೆಗಳು ಬಹುಪಾಂಗಿತವಾಗಿ ಸಹಸ್ರಾರು ಜನರ ಸಮ್ಮುಖದಲ್ಲಿ ನೆರವೇರುತ್ತದೆ. ಶ್ರಾವಣ ಮಾಸದ ಕೊನೆಯ ಶನಿವಾರದಲ್ಲಿ ಸ್ವಾಮಿಗೆ ವಿಶೇಷ ಸೇವಾ ಉತ್ಸವಗಳು ಜರಗುವುದು. ಪಾಳ್ಯದ ಲಕ್ಷ್ಮೀಜನಾರ್ದನ ಸ್ವಾಮಿಯು ಅನೇಕ ಭಕ್ತರಿಗೆ ಕುಲದೈವವಾಗಿದ್ದು ಅಪಾರ ಸಂಖ್ಯೆಯ ಭಕ್ತವೃಂದವನ್ನು ಹೊಂದಿರುವನು.

### ಹೀಗೆ ಬನ್ನಿ :

ಹಾಸನ ಜಿಲ್ಲೆಯ, ಆಲೂರು ತಾಲೂಕಿನ ಪಾಳ್ಯ ಗ್ರಾಮವು ಹಾಸನದಿಂದ ಸುಮಾರು 21 ಕಿ.ಮೀ. ದೂರದಲ್ಲಿ ಹಾಗೂ ತಾಲೂಕು ಕೇಂದ್ರ ಆಲೂರಿನಿಂದ 8 ಕಿಲೋ.ಮೀಟರ್ ದೂರದಲ್ಲಿದೆ ಬೆಂಗಳೂರು, ಮಂಗಳೂರು ರಸ್ತೆಯಲ್ಲಿ ಹಾಸನದಿಂದ 21 ಕಿ.ಮೀ. ಕ್ರಮಿಸಿ ಸಿಗುವ ಕಣದ ಹಳ್ಳಿಯಲ್ಲಿ ಎಡಕ್ಕೆ ತಿರುಗಿ ಅರ್ಧ ಕಿಲೋಮೀಟರ್ ಸಾಗಿ ಪಾಳ್ಯವನ್ನು ಸೇರಬಹುದು.

ಬೆಂಗಳೂರು-ಮಂಗಳೂರು ರಸ್ತೆಯಲ್ಲಿ ಧರ್ಮಸ್ಥಳ, ಕುಕ್ಕೇ ಸುಬ್ರಹ್ಮಣ್ಯ ಮುಂತಾದ ಪುಣ್ಯ ಕ್ಷೇತ್ರಗಳಿಗೆ ಪಯಣಿಸುವವರು ಸಕಲೇಶಪುರಕ್ಕೆ ಅತೀ ಸಮೀಪದಲ್ಲಿರುವ ಪಾಳ್ಯದ ಲಕ್ಷ್ಮೀಜನಾರ್ದನ ಸ್ವಾಮಿಯ ದಿವ್ಯ ದರ್ಶನವನ್ನು ಪಡೆದು ಮುಂದೆ ಪಯಣಿಸಬಹುದು.

# ತಿರುಪತಿ, ಶ್ರೀ ಕಪಿಲೇಶ್ವರ ಸ್ವಾಮಿಯವರ ಪವಿತ್ರೋತ್ಸವಗಳು

| ದಿನಾಂಕ | ವಾರ | ಉತ್ಸವಗಳು | |
|---|---|---|---|
| 06-07-2025 | ಭಾನುವಾರ | --- | ಅಂಕುರಾರ್ಪಣೆ |
| 07-07-2025 | ಸೋಮವಾರ | ಪಂಚಮೂರ್ತಿಗಳಿಗೆ ಸ್ನಪನ ತಿರುಮಂಜನಂ | ಪವಿತ್ರ ಮಂಡಲ ಪೂಜೆ, ಹೋಮಗಳು |
| 08-07-2025 | ಮಂಗಳವಾರ | ಗ್ರಂಥಿ ಪವಿತ್ರ ಸರ್ಮಪಣೆ, ವ್ರತಚರಿ | ಪವಿತ್ರ ಪ್ರತಿಷ್ಠ, ವ್ರತಚರಿ |
| 09-07-2025 | ಬುಧವಾರ | ಪವಿತ್ರ ಸರ್ಮಪಣೆ, ಪವಿತ್ರೋತ್ಸವ ಸಮಾಪ್ತಿ | ಪಂಚಮೂರ್ತಿಗಳ ಬೀಧಿ ಉತ್ಸವಗಳು |

# ತಿರುಪತಿ, ಶ್ರೀ ಗೋವಿಂದರಾಜ ಸ್ವಾಮಿಯವರ ಜ್ಯೇಷ್ಠಾಭಿಷೇಕ

| ದಿನಾಂಕ | ವಾರ | ಉತ್ಸವಗಳು | |
|---|---|---|---|
| 06-07-2025 | ಭಾನುವಾರ | ಜ್ಯೇಷ್ಠಾಭಿಷೇಕ ಪ್ರಾರಂಭ | |
| 07-07-2025 | ಸೋಮವಾರ | ಕವಚ ಪ್ರತಿಷ್ಠೆ | |
| 08-07-2025 | ಮಂಗಳವಾರ | ಕವಚ ಸರ್ಮಪಣೆ | |

# ತಿರುಪತಿ, ಶ್ರೀ ಕೋದಂಡರಾಮ ಸ್ವಾಮಿಯವರ ಪವಿತ್ರೋತ್ಸವಗಳು

| ದಿನಾಂಕ | ವಾರ | ಉತ್ಸವಗಳು | |
|---|---|---|---|
| 19-07-2025 | ಶನಿವಾರ | --- | ಅಂಕುರಾರ್ಪಣೆ |
| 20-07-2025 | ಭಾನುವಾರ | ಪವಿತ್ರ ಪ್ರತಿಷ್ಠೆ | |
| 21-07-2025 | ಸೋಮವಾರ | ಪವಿತ್ರ ಸರ್ಮಪಣೆ | |
| 22-07-2025 | ಮಂಗಳವಾರ | ಪೂರ್ಣಾಹುತಿ | |

# ವಾಯಲ್ಪಾಡು, ಶ್ರೀ ಪಟ್ಟಾಭಿರಾಮ ಸ್ವಾಮಿಯವರ ಪಟ್ಟಾಭಿಷೇಕ ಮಹೋತ್ಸವಗಳು

| ದಿನಾಂಕ | ವಾರ | ಉತ್ಸವಗಳು | |
|---|---|---|---|
| 29-07-2025 | ಮಂಗಳವಾರ | ಶ್ರೀ ಪಟ್ಟಾಭಿರಾಮ ಸ್ವಾಮಿಯವರಿಗೆ | |
| 30-07-2025 | ಬುಧವಾರ | ಶ್ರೀ ಪಟ್ಟಾಭಿರಾಮ ಸ್ವಾಮಿಯವರಿಗೆ | ಶ್ರಾವಣ ಮಾಸದಲ್ಲಿ ಶುಕ್ಲ ಪಂಚಮಿಯಿಂದ ಸಪ್ತಮಿ ವರೆಗೆ ನಡೆಯುತ್ತದೆ. |
| 31-07-2025 | ಗುರುವಾರ | ಶ್ರೀ ಪಟ್ಟಾಭಿರಾಮ ಸ್ವಾಮಿಯವರಿಗೆ | |



ಧಾರಾವಾಹಿ

# ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ

- ಡಾ|| ಬಿ.ಎನ್.ಶ್ರೀನಿವಾಸನ್

**ಕಳೆದ ಸಂಚಿಕೆಯಿಂದ**

ನಂತರದ ಕಾಲದಲ್ಲಿ ರಾಮಾನುಜರಿಂದ ನಿತ್ಯಾರ್ಚನೆ ಮುಂತಾದವುಗಳಲ್ಲಿ ಉಂಟಾದ ಪರಿವರ್ತನೆಗಳೊಡನೆ ಇದು ವೈಷ್ಣವ ಆಲಯವಾಗಿರಬೇಕು.

- ಮೇಲಿನ ಈ ವಾದಗಳೆಲ್ಲ ನಿಲ್ಲಲಾರವು

ಮೊದಲನೆಯದಾಗಿ ದೇವರ ಕಿರೀಟದಲ್ಲಿ ಶಿವಮೂರ್ತಿಯನ್ನು ಹೋಲುವ ಜಟಾಜೂಟವಿದೆ ಎಂದು ಹೇಳುವುದು ಸರಿಯಲ್ಲ. ಶ್ರೀ ವೆಂಕಟೇಶ್ವರಸ್ವಾಮಿಯ ಧ್ರುವಬೇರದ ಲಕ್ಷಣಗಳು ಈ ರೀತಿಯಿವೆ.

ಅ. ವಿಗ್ರಹದ ಬಲಗಡೆಯ ವಕ್ಷದ ಶ್ರೀವತ್ಸದ ಮೇಲೆ ಶ್ರೀಲಕ್ಷ್ಮಿ ಕುಳಿತಿದ್ದಾಳೆ.

ಆ. ತೋಳಿನ ಮೇಲೆ ಗಾಯದ ಗುರುತುಗಳಿವೆ.

ಇ. ಮುಕ್ತವಾದ ಹಾಗೂ ಸುಲಭವಾದ ಮೇಲಿನ ಎರಡೂ ಕೈಗಳಲ್ಲಿ ಶಂಖ ಚಕ್ರಗಳನ್ನಿಡಲಾಗಿದೆ.

ಈ. ಕೆಳಗಣ ಬಲಗೈ ವರದ ಹಸ್ತವಾಗಿಯೂ ಕೆಳಗಣ ಎಡಹಸ್ತವು ಕಟ್ಯವಲಂಬಿತವಾಗಿಯೂ ಇರುತ್ತದೆ.

ಇಲ್ಲಿನ ವರದ ಹಸ್ತವು ಎಂದರೆ ಅಂಗೈ ಹಾಗೂ ಬೆರಳುಗಳು ಕೆಳಮುಖವಾಗಿರುವಿಕೆಯು ಯಾವುದೇ ಆಗಮದಲ್ಲಿಯೂ ಹೇಳಲಾಗಿಲ್ಲವೆಂಬುದನ್ನು ಇಲ್ಲಿ ಉಲ್ಲೇಖಿಸಬೇಕು. ಮೇಲೆಯೇ ತಿಳಿಸಿದಂತೆ ದೇವರ ಮೂರ್ತಿಯು ಸ್ವಯಂಭು ಆಗಿರಬೇಕು ಅಥವಾ ಯಾವುದೇ ಆಗಮಶಾಸ್ತ್ರವೂ ಬರೆಯಲ್ಪಡುವ ಮೊದಲಿಗೆ ಬಂದ ಇದು ಅತ್ಯಂತ ಪ್ರಾಚೀನ ಮೂರ್ತಿಯಾಗಿರಬೇಕು. ವಿಗ್ರಹದ ಅಂಗೈ ಹಾಗೂ ಬೆರಳುಗಳು ಬಲಗಾಲನ್ನು ತೋರಿಸುತ್ತ ಕೆಳಮುಖವಾಗಿರುವುದು ದೇವರಲ್ಲಿ ಶರಣು ಬಂದವರ ಕೋರಿಕೆಗಳನ್ನು ತೀರಿಸುವ ದೇವರ ಕರುಣೆಯ ಸಂಕೇತ ಆಗಿದೆಯಷ್ಟೆ. ಮಹಾಬಲಿಗೆ ಕೇಳದೆಯೇ ನೀಡಿದ ವರದತ್ತ ಗಮನ ಸೆಳೆಯುವಂತಿದೆ. ನಮ್ಮಾಳ್ವಾರರು ಇದನ್ನು ಉಲ್ಲೇಖಿಸಿದ್ದಾರೆ. ಶ್ರೀವೈಷ್ಣವ ಸಂತಶ್ರೇಷ್ಠರಾದ ಆಳವಂದಾರರೂ ಸ್ವಾಮಿಯನ್ನು ಹೊಗಳುತ್ತಾ ಸ್ವಾಮಿಯ ಪಾದಗಳನ್ನು ತಮ್ಮ ತಲೆಯ ಮೇಲಿರಿಸಲು ಪ್ರಾರ್ಥಿಸಿದ್ದಾರೆ, ತಮ್ಮ ಸ್ತೋತ್ರರತ್ನದಲ್ಲಿ, ವಿಷ್ಣುವಿನ ತ್ರಿವಿಕ್ರಮಾವತಾರದಲ್ಲಿ ಬಲಗಾಲನ್ನು ತೋರಿಸುತ್ತ ಇಡೀ ವಿಶ್ವವನ್ನು ಎರಡೇ ಪಾದದಿಂದ ಅಳೆದುಕೊಂಡ ಮೇಲೆ ಮೂರನೆಯ ಪಾದವನ್ನು ಇಡಲು ಸ್ಥಳವೆಲ್ಲಿ ಎಂದು ಬಲಿಯನ್ನು ಕೇಳುತ್ತಾನೆ. ಬೇರೇನೂ ತೋರಿಸಲಾಗದ ಬಲಿ ತನ್ನ ತಲೆಯನ್ನೇ ತೋರಿಸಿ ಪಾದವನ್ನು ಅಲ್ಲಿಡಲು ಹೇಳಿದಾಗ ಸ್ವಾಮಿ ಬಲಿಯನ್ನು ತನ್ನ ಪಾದದತ್ತ ಸೆಳೆದುಕೊಂಡು ಅತ್ಯಂತ ಉನ್ನತ ಪದವನ್ನು ನೀಡುವನು. ಆಗಮ ಶಾಸ್ತ್ರಗಳು ಸೂತ್ರಬದ್ಧವಾಗುವ ಮೊದಲು ವಿಗ್ರಹದ ವರದ ಹಸ್ತಕ್ಕೆ ಇದೇ ವಿವರಣೆಯಾಗಿದ್ದಿರಬೇಕು.


ಬೆರಳುಗಳ ಸ್ಥಾನ,ವಿಶೇಷವಾಗಿ ತೊಡೆಯನ್ನು ಮುಟ್ಟುವ ಎಡಗೈ ಹೆಬ್ಬೆರಳಿನ ರೀತಿಯು, ಶ್ರೀರಾಮನ ಕೋದಂಡವು ಬೆರಳಿನ ಮೂಲಕ ಹೊರಟಿದ್ದನ್ನು ಸೂಚಿಸುವಂತಿದೆ.

ವಿಗ್ರಹದ ಮತ್ತೊಂದು ಪ್ರಧಾನ ಲಕ್ಷಣವೆಂದರೆ ಇಲ್ಲಿನ ಪ್ರಲಂಬ ಸೂತ್ರ ಹಾಗೂ ಕಟಿಸೂತ್ರ. ಮೊದಲನೆಯದು ಯಜ್ಞೋಪವೀತವಾದರೆ ಎರಡನೆಯದು ಕನ್ನಡದಲ್ಲಿ ಹೇಳುವ ಉಡಿದಾರ. ಇವು ಶ್ರೀವಿಷ್ಣುವಿಗೆ ಇರುವಂತಹವು.

ಹೀಗಾಗಿ ವಿಗ್ರಹವು ಶಿವ ವಿಗ್ರಹವಾಗದೆ ವಿಷ್ಣು ವಿಗ್ರಹವೇ ಎಂಬುದನ್ನು ಕೆಳಗಣ ಅಂಶಗಳಿಂದ ದೃಢೀಕರಿಸಬಹುದು.

ಅ. ಎದೆಯ ಮಧ್ಯದಲ್ಲಿರುವ ಕೌಸ್ತುಭವು ವಿಷ್ಣುವಿನ ಲಕ್ಷಣಗಳಲ್ಲಿ ಒಂದು. ಇದು ಕ್ರಿ.ಶ.ದ ಆದಿಭಾಗಕ್ಕೆ ಸೇರಿದ ತಮಿಳು ಕೃತಿ ಶಿಲಪ್ಪದಿಕಾರದಲ್ಲಿಯೂ ವಿವರಿತವಾಗಿದೆ.

ಆ. ಆಗಮ ಶಾಸ್ತ್ರನಿಯಮದಂತೆ ಕೌತುಕ ಬೇರವು ಧ್ರುವಬೇರದ ಪ್ರತಿಮೂರ್ತಿ ಆಗಿರಬೇಕು. ತಿರುಮಲೆಯ ಕೌತುಕ ಬೇರದ ಸೂಕ್ಷ್ಮ ಪರಿಶೀಲನೆ ಮಾಡಿದರೆ ಅದು ವಿಷ್ಣುಮೂರ್ತಿಯೆಂದೇ ಸಿದ್ಧವಾಗುವುದು.



ಇ. ಧ್ರುವ ಮೂರ್ತಿಯ ತೋಳುಗಳಲ್ಲಿ ನಾಗಾಭರಣವೇನೂ ಇಲ್ಲವೆಂಬುದು ಖರೆ. ತೋಳಿಗೆ ತೊಡಿಸಿರುವ ಆಭರಣ ನಂತರದ ಕಾಲದಲ್ಲಿ ಭಕ್ತರಿಂದ ಕಾಣಿಕೆಯಾಗಿ ಬಂದದ್ದಿರಬೇಕು. ಆದಿಶೇಷ ಅಥವಾ ನಾಗ ವಿಷ್ಣುವಿನೊಡನೆ ಅವಿನಾಭಾವದಿಂದ ಬೆರೆತಿದ್ದು, ದೇವರ ಮಂತ್ರ ಪುಷ್ಪದಲ್ಲಿ ಸ್ಥಳ ಪಡೆದಿದ್ದು ನಿತ್ಯವೂ ಆಲಯದಲ್ಲಿ ಈ ಬಗ್ಗೆ ಪಾರಾಯಣವುಂಟು.

ಈ. ದೇವರ ವಿಗ್ರಹದ ತಲೆಯಲ್ಲಿ ಜಟೆಯೆಂಬುದಿಲ್ಲ. ದೇವರ ಕಿರೀಟದಲ್ಲಿ ಶ್ರೀ ಚಕ್ರವಾಗಲೀ ಯಂತ್ರವಾಗಲೀ ಇಲ್ಲ.

ಉ. ಆಚಾರ್ಯ ಪುರುಷರೂ ವಿಗ್ರಹವನ್ನು ಅತ್ಯಂತ ನಿಕಟವಾಗಿ ಪರಿಶೀಲಿಸುವ ಪರಂಪರೆಯಿಲ್ಲ. ಭಕ್ತರು ಸ್ವಾಮಿಯನ್ನು ಅತಿಹತ್ತಿರದಿಂದ ನೋಡಬಹುದಾದ ಕುಲಶೇಖರ ಪಡಿಯಿಂದ (ಗರ್ಭಗುಡಿಯ ಹೊಸ್ತಿಲಿನಿಂದ) ನೋಡುತ್ತ, ವರ್ಷಗಳಿಂದಲೂ ಸ್ವಾಮಿ ಸೇವೆಯಲ್ಲಿ ತೊಡಗಿರುವ ಅರ್ಚಕರ ಹೇಳಿಕೆಗಳಿಂದಲೂ, ನಿರ್ಧರಿಸುವ ವಿಷಯ ಎಂದರೆ ಸ್ವಾಮಿಯ ವಿಗ್ರಹದ ಮೇಲೆಯೇ ಅಲ್ಲದೆ ಗರ್ಭಗುಡಿಯಲ್ಲಿಯೇ ಎಲ್ಲಿಯೂ ಸರ್ಪದ ಸುಳಿವೇ ಇಲ್ಲ. ಹೇಗೊ, ಎನೋ,ದೇವರ ವಿಗ್ರಹದಲ್ಲಿ ಉರಗದ ಗುರುತಿದೆ ಎಂಬ ಅಪಪ್ರಥೆ ಚಾಲ್ತಿಗೆ ಬಂತು. ವಾಸ್ತವವಾಗಿ ಇದು ಸುಳ್ಳೇ ಆದರೂ ಇಂದಿಗೂ ಪ್ರಚಲಿತವಾಗಿದೆ.

ಊ. ಸಿಂಹ ಲಲಾಟವೆಂಬುದು ದೇವರ ಹಾಗೂ ದೇವನಾಯಕಿಯರ ಅಂಗಾಂಗಳಿಗೆ ಒಪ್ಪುವ ಸಾಧಾರಣ ಆಭರಣವಷ್ಟೆ. ವಿಗ್ರಹದ ಮೇಲಿರುವುದೆಲ್ಲ ಒಂದು ಒರಟಾದ ಚಿತ್ರಣವಷ್ಟೇ. ಇಂತಹ ಆಭರಣದ ಗುರುತುಗಳು ಹಲವಾರು ವಿಗ್ರಹಗಳಲ್ಲೂ ಕಾಣಸಿಗುವುದುಂಟು.

ಋ. ದೇವರ ವಿಗ್ರಹದಲ್ಲಿ ನಾಗಾಭರಣವು ಒಂದು ಅವಿನಾಭಾವಿ ಅಂಗವಲ್ಲ. ಇದು ಯಾವುದನ್ನೂ ಸಂಕೇತಿಸುವುದಿಲ್ಲ. ವಿಷ್ಣುವಿನೊಂದಿಗೆ ಯಾವಾಗ್ಯೂ ಇರುವ ನಿತ್ಯರಲ್ಲಿ ನಾಗನೂ ಒಬ್ಬನಷ್ಟೆ.

ೠ.ಪೂಜೆಯಲ್ಲಿ ಬಳಸಲಾಗುವ ಬಿಲ್ವಪತ್ರೆ ಶಿವಪೂಜೆಗೆಂದೇ ಮೀಸಲಾದದ್ದೇನಲ್ಲ. ವಿಷ್ಣುಪೂಜೆಯಲ್ಲಿ ಬಳಸಲಾಗುವ ಅಷ್ಟ ಪುಷ್ಪಗಳಲ್ಲಿ ಇದೂ ಒಂದು. ಈ ಮಾತನ್ನು ಪದ್ಮಸಂಹಿತೆಯ 12 ಅಧ್ಯಾಯವೂ,ಭೃಗು ಸಂಹಿತೆಯೂ ಸಮರ್ಥಿಸುತ್ತವೆ.

ಎರಡೂ ಆಗಮಗಳೂ ವಿಷ್ಣುಪೂಜೆಯಲ್ಲಿ ಬಿಲ್ವಪತ್ರೆಯನ್ನು ಬಳಸಲು ಶಿಫಾರಸು ಮಾಡುತ್ತವೆ. ಹೀಗಾಗಿ ಇಲ್ಲಿ ಪೂಜೆಯಲ್ಲಿ ಬಿಲ್ವಪತ್ರೆಯ ಬಳಕೆಯಿಂದಾಗಿ ಎಂದೋ ಒಂದಾನೊಂದು ಕಾಲದಲ್ಲಿ ಆಲಯ ಶಿವಾಲಯವಾಗಿತ್ತೆನ್ನುವ ಅರ್ಥವೇನೂ ಹೊರಡುವುದಿಲ್ಲ.

ಜೊತೆಗೇ ವಿಷ್ಣು ಪೂಜೆಯಲ್ಲಿ ಪವಿತ್ರವಾದ ತುಳಸೀ ದಳದೊಡನೆ ಇದನ್ನು ಬಳಸುವುದಿಲ್ಲವಾಗಿ ಬಿಲ್ವವು ವಿಷ್ಣುಪೂಜೆಯಲ್ಲಿ ಒಪ್ಪಲಾಗುವ ಎಂಟು ಪುಷ್ಪಗಳಲ್ಲಿ ಒಂದಾಗಿ ಮಾತ್ರವೇ ಬಳಕೆಯಲ್ಲಿದೆಯೆಂದು ದೃಢವಾಗುತ್ತದೆ.

ಎ. ವಿಷ್ಣುವಿನ ಸ್ಥಾನಕ,ಆಸೀನ,ಶಯನ ಮೂರ್ತಿಗಳ ಪ್ರತಿಷ್ಠೆಯಲ್ಲಿ ಧ್ರುವಮೂರ್ತಿಗಳು ದೈವಿಕಆಸನವನ್ನು ಹೊಂದಿರಬೇಕೆಂದು ಆಗಮ ಶಾಸ್ತ್ರಗಳು ಒತ್ತಿಹೇಳುತ್ತವೆ. ಸ್ವಾಮಿಯ ವಿಗ್ರಹವೂ ಇದೇ ರೀತಿಯ ತಳಗಟ್ಟಿನಲ್ಲಿದೆ. ಹೀಗಾಗಿ ಗರ್ಭಗೃಹದ ಮಧ್ಯಭಾಗದಲ್ಲಿರುವುದರಿಂದ ವಿಗ್ರಹವು ಶೈವವಾಗಿರಬೇಕು ಎಂಬುದರಲ್ಲಿ ಹುರುಳಿಲ್ಲ.

ಏ. ಭೃಗುಸಂಹಿತೆಯ ಲಕ್ಷ್ಮಿಕಲ್ಪದಲ್ಲಿ ಹೇಳಿರುವಂತೆ ಯೋಗ ಲಕ್ಷ್ಮಿಯೂ ಶ್ರೀವತ್ಸವೂ ಸರಿಯಾದ ಸ್ಥಳದಲ್ಲಿವೆ. ಅದರಂತೆ ಲಕ್ಷ್ಮಿಯು ಎದೆಯ ಬಲಭಾಗದಲ್ಲಿ ಶ್ರೀವತ್ಸದ ಮೇಲಿರಬೇಕು. ಶ್ರೀವತ್ಸದ ಗುರುತುಗಳು ಮೂರ್ತಿಯ ಇರತಕ್ಕ ರೂಪವನ್ನು ಅನುಸರಿಸಿದ್ದು ಇದಕ್ಕಾಗಿ ಪ್ರತ್ಯೇಕವಾದ ನಿಯಮಗಳಿಲ್ಲ, ಸ್ಥೂಲವಾಗಿ ಹೇಳುವುದಾದರೆ ಶ್ರೀವತ್ಸವು ಮೂಲಪ್ರಕೃತಿಯನ್ನೂ ಲಕ್ಷ್ಮಿಯು ಅಧಿಷ್ಠಾನ ದೇವತೆಯನ್ನು ಪ್ರತಿನಿಧಿಸಿದ್ದು, ಸ್ವಾಮಿಯ ವಿಗ್ರಹದ ಮೇಲಿರುವ ಲಕ್ಷ್ಮಿಯ ಚಿತ್ರ ಈ ನಿಯಮವನ್ನಾಧರಿಸಿದೆ.

ಐ. ಇದುವರೆಗೆ ನಡೆದಿರುವ ಪರಿಶೀಲನೆಯಲ್ಲಿ ತಿರುಮಲೆಯ ಆಲಯದಲ್ಲಿ ಎಲ್ಲೂ ಸ್ಫಟಿಕಲಿಂಗವಿಲ್ಲ. ಈ ಬಗ್ಗೆ ಪ್ರಾಯಶಃ ವಿದ್ಯಾರಣ್ಯರು ಎಲ್ಲಿಯೋ ಹೇಳಿರಬಹುದು. ವಿದ್ಯಾರಣ್ಯರು ಕ್ರಿ.ಶ.14ನೇ ಶತಮಾನದಲ್ಲಿದ್ದ ವೇದಾಂತದೇಶಿಕರ ಸಮಕಾಲೀನರಾಗಿದ್ದು, ಈ ಆಲಯದಲ್ಲಿ ಅದಕ್ಕೂ ಹಿಂದೆ ಆರುನೂರು ವರ್ಷಗಳ ಶಾಸನೋಕ್ತ ಇತಿಹಾಸವಿದ್ದು,ಎಲ್ಲಿಯೂ ಸ್ಫಟಿಕ ಲಿಂಗದ ಮಾತೇ ಇಲ್ಲ.

ಒ. ಬೆಟ್ಟದ ಬುಡದಲ್ಲಿರುವ ಕಪಿಲೇಶ್ವರಸ್ವಾಮಿ ಆಲಯದಿಂದಾದ ಕಪಿಲ ಸಂಬಂಧಕ್ಕೂ ಪ್ರಾಮುಖ್ಯವನ್ನು ನೀಡಬೇಕಿಲ್ಲ, ಕಾರಣವೆಂದರೆ; ವೈಷ್ಣವ ಆಗಮಗಳ ಪ್ರಕಾರ ಕಪಿಲ,ಭೃಗು,ಗಣೇಶ,ದುರ್ಗ,ಶಿವ,ಬ್ರಹ್ಮ ಮೊದಲಾದವರೆಲ್ಲ ಉಪದೇವತೆಗಳು.

ಓ. ಗೋಮುಖದ ಹೊರಬರುವಿಕೆ,ಗರ್ಭಗೃಹದ ಎತ್ತರ ಮೊದಲಾದವೆಲ್ಲವನ್ನೂ ಇದು ಶಿವಾಲಯವೆನ್ನಲು ಗುರುತುಗಳೆಂದು ಹಲವು ಬಾರಿ ಹೇಳಲಾಗುತ್ತದೆ.

ಆಲಯದ ವಾಸ್ತುಶಿಲ್ಪ ಹಲವಾರು ಶತಮಾನಗಳ ಕಾಲ ಬೆಳೆದು ಬಂದಿರುವುದರಿಂದ ಈ ರೀತಿಯ ಅಪಪ್ರಥೆಗಳಿಗೆ ಅವಕಾಶವಾಗಿರಬೇಕು.

ಗರ್ಭಗೃಹದ ಗೋಮುಖದಲ್ಲಿ ಒಂದು ಹೊರಗೊಳವೆ ನಿಜವಾಗಿ ಇದ್ದರೂ ಅದು ಬಹು ಹಿಂದಿನಿಂದಲೂ ಕೆಲಸ ಮಾಡುತ್ತಿಲ್ಲ. ಗರ್ಭಗೃಹದ ಎತ್ತರವು ಮೂರ್ತಿಯ ಎತ್ತರದೊಡನೆ ಅನುಪಾತದಲ್ಲಿದ್ದು ಈ ಆಲಯದಲ್ಲಿ ಈ ನಿಯಮವು ಪಾಲಿತವಾಗಿದೆ.

ಇದರಂತೆಯೇ ಧ್ರುವ ಬೇರದ ಪೀಠದ ಎತ್ತರ ಗರ್ಭಗೃಹದ ಹೊಸಿಲಿನ ಭುವಂಗದ ಎತ್ತರದೊಡನೆ ಅನುಪಾತದಲ್ಲಿದೆ.

**ಇವುಗಳಿಂದಾಗಿ ನಿರ್ಧಾರ ಪೂರ್ವಕವಾಗಿ ಹೇಳುವುದೆಂದರೆ ಇಲ್ಲಿನ ವಿಗ್ರಹವು ಯಾವುದೇ ಕಾರಣಕ್ಕೂ ಶೈವ ವಿಗ್ರಹವೆಂದು ಇಂದಾಗಲೀ ಮುಂದಾಗಲೀ ತಪ್ಪು ತಿಳಿಯಬಾರದು.**

ಸ್ವಾಮಿಯ ವಿಗ್ರಹವು ಶಕ್ತಿಯದೇ ಎಂಬ ಜಿಜ್ಞಾಸೆ.

ಹಲವು ಬಾರಿ ಈ ದೇವಾಲಯವು ಯಾವುದೋ ದೇವತೆದೆಂದೂ ಒಳಗಿನ ವಿಗ್ರಹ ದುರ್ಗೆಯದೆಂದೂ ಹೇಳುವುದುಂಟು. ಇದಕ್ಕಾಗಿ ನೀಡಲಾಗುವ ಕಾರಣಗಳು ಹೀಗಿವೆ :-

1. ಉತ್ತರಭಾರತದವರು ಈ ದೇವರನ್ನು ಬಾಲಾಜಿ ಎಂದು ಕರೆಯುವುದುಂಟು. ದುರ್ಗೆಯನ್ನು ಬಾಲಾ ಎಂದು ಕರೆಯುವರು. ಆದ್ದರಿಂದ ವಿಗ್ರಹವು ಶಕ್ತಿಯದು ಎನ್ನಬಹುದು.

2. ದುರ್ಗೆಯ ಒಂದು ರೂಪವಾದ ಮೇರುಚಕ್ರವೆಂದು ಬೆಟ್ಟವನ್ನು ಕರೆಯುವರು.

3. ಗಾಳಿಗೋಪುರವನ್ನು ಕಾಳಿಗೋಪುರವೆಂದು ಕರೆದು, ಹಾಗಾಗಿ ಇದು ಶಕ್ತಿಯ ಗೋಪುರ ಎನ್ನುವರು.

4. ಮಧ್ಯದ ವಿಮಾನದಲ್ಲಿ ಕುಳಿತಿರುವ ಸಿಂಹದ ವಿಗ್ರಹವಿದೆ. ಸಿಂಹ ದುರ್ಗೆಯ ವಾಹನವಾಗಿ ಶಕ್ತಿ ಮುದ್ರೆ ಕಂಡುಬರುತ್ತದೆ.

5. ದೇವರ ಒಳವಸ್ತ್ರ ಬಹಳ ದೀರ್ಘವಾಗಿದ್ದು ತಮಿಳಿನಲ್ಲಿ ಉಳ್ ಚಾತ್ ಎಂದು ಕರೆದಿರುವುದು ಸೀರೆಯನ್ನು ಹೋಲುತ್ತದೆಯಾಗಿ ವಿಗ್ರಹವು ದುರ್ಗೆಯ ಅಥವಾ ಶಕ್ತಿಯದಾಗಿರಬೇಕು.

6. ಚಂದನ ಚೂರ್ಣವನ್ನು ಆರಾಧನೆಯಲ್ಲಿ ಬಳಸುವುದರಿಂದ ಇದು ಸ್ತ್ರೀ ವಿಗ್ರಹ.

7. ವಿಶೇಷವಾಗಿ ಸ್ತ್ರೀಯರ ಸಿಂಗಾರ ಸಾಧನವಾದ ಹರಿಷಿಣವನ್ನು ದೇವರ ಅಭಿಷೇಕದಲ್ಲಿ ಬಳಸುವರು. ಜೊತೆಗೇ ದೇವರಿಗೆ ನೀಡುವ ನೈವೇದ್ಯವು ಸ್ತ್ರೀ ದೇವತೆಯರ ನೈವೇದ್ಯಕ್ಕೆ ಹತ್ತಿರವಾಗಿದ್ದು ಪ್ರಾಚೀನ ಕಾಲದಲ್ಲಿ ಈ ಮೂರ್ತಿ ಸ್ತ್ರೀ ಮೂರ್ತಿ ಆಗಿರಬೇಕು.

8. ದೇವೀ ಭಾಗವತದ ಒಂದು ಪದ್ಯವು ಕಲಿಯುಗದ ಏಕಮೇವ ದೇವತೆ ಎಂದು ಶ್ರೀವೆಂಕಟೇಶ್ವರಿಯನ್ನು ವಿವರಿಸುತ್ತದೆ.

9. ಸ್ತ್ರೀಯರು ಮಂಗಳಸ್ನಾನ ಮಾಡುವ ಶುಕ್ರವಾರಗಳಲ್ಲಿಯೇ ಈ ದೇವರಿಗೆ ಅಭಿಷೇಕ ನಡೆಯುವುದು.

10. ತೋಮಾಲೆ ಸೇವೆಯನ್ನು ಭಗವತಿ ಆರಾಧನೆಯೆನ್ನುವರು. ಹೀಗಾಗಿ ನಿಜವಾದ ಪೂಜೆ ನಡೆಯುವುದು ಶಕ್ತಿಗೆ.

11. ದೇವರ ಅಭಿಷೇಕದಲ್ಲಿ ಶ್ರೀಸೂಕ್ತ ಮಂತ್ರಗಳನ್ನು ಹೇಳುವುದರಿಂದ ಪೂಜೆ ನಡೆಯುವುದು ಶಾಕ್ತೇಯವೇ ಆಗಿರಬೇಕು.

ಮೇಲಿನ ಕಾರಣಗಳನ್ನು ಸಾಧಾರಣವಾಗಿ ದೇವರ ವಿಗ್ರಹ ಶಕ್ತಿಯದೆನ್ನಲು ನೀಡುವರು. ಆದರೆ ಸೂಕ್ಷ್ಮಾವಲೋಕದಿಂದ ಈ ಕಾರಣಗಳನ್ನು ಅಲ್ಲಗಳೆಯಲಾಗುವುದು.

(ಮುಂದುವರೆಯುತ್ತದೆ)

# ತಿರುಪತಿ, ಶ್ರೀ ಗೋವಿಂದರಾಜ ಸ್ವಾಮಿಯವರ ಜ್ಯೇಷ್ಠಾಭಿಷೇಕ ಮಹೋತ್ಸವ

## 06-07-2025 ರಿಂದ 08-07-2025 ರ ವರೆಗೆ







ಗರುಡ ಅಷ್ಟೋತ್ತರ ಪಾರಾಯಣದಿಂದ ವಿಶೇಷವಾಗಿ ಸಂತಾನ ಪ್ರಾಪ್ತಿಯಾಗುತ್ತದೆ. ಅವಿವಾಹಿತರಿಗೆ ವಿವಾಹವಾಗುತ್ತದೆ. ವಿಶೇಷವಾಗಿ ಆಯುಷ್ಯ ಹೆಚ್ಚಾಗುತ್ತದೆ. ಅಲ್ಲದೆ ಅಷ್ಟೋತ್ತರ ಪಠಣದಿಂದ ಶುಭ ಸೂಚನೆಗಳು ಕಂಡು ಬರುತ್ತದೆ. ಸಕಲ ಪಾಪಗಳು ನಾಶವಾಗುತ್ತವೆ. ಎಲ್ಲಾ ಪಾಪಗಳ ರಕ್ಷಕನಾದ ಆ ಭಗವಂತನಲ್ಲಿ ಅಚಲ ಭಕ್ತಿ ಮತ್ತು ನಂಬಿಕೆ ಹೆಚ್ಚಾಗುತ್ತದೆ. ಆದ್ದರಿಂದ ಗರುಡ ಅಷ್ಟೋತ್ತರ ಪಠಣವು ಒಂದು ಶ್ರೇಷ್ಠ ಅಷ್ಟೋತ್ತರ ಎಂದು ಹೇಳಲಾಗುತ್ತದೆ. ಆದ್ದರಿಂದ ಈ ಅಷ್ಟೋತ್ತರ ಪಾರಾಯಣವು ವಿಶೇಷವಾಗಿ ಸಪ್ತಗಿರಿ ನಿಮಗಾಗಿ ನೀಡುತ್ತಿದೆ.

# ಶ್ರೀಗರುಡಾಷ್ಟೋತ್ತರ ಶತನಾಮಾವಳಿಃ

ನಮಃ ಪನ್ನಗನದ್ಧಾಯ ವೈಕುಂಠ ವಶವರ್ತಿನೇ।
ಶ್ರುತಿಸಿಂಧು ಸುಧೋತ್ಪಾದ ಮಂದರಾಯ ಗರುತ್ಮತೇ॥



ಓಂ ಶ್ರೀವೈನತೇಯಾಯ ನಮಃ
ಓಂ ಖಗಪತಯೇ ನಮಃ
ಓಂ ಕಾಶ್ಯಪೇಯಾಯ ನಮಃ
ಓಂ ಮಹಾಬಲಾಯ ನಮಃ
ಓಂ ತಪ್ತಕಾಂಚನವರ್ಣಾಭಾಯ ನಮಃ
ಓಂ ಸುಪರ್ಣಾಯ ನಮಃ
ಓಂ ಹರಿವಾಹನಾಯ ನಮಃ
ಓಂ ಛಂದೋಮಯಾಯ ನಮಃ
ಓಂ ಮಹಾತೇಜಸೇ ನಮಃ
ಓಂ ಮಹೋತ್ಸಾಹಾಯ ನಮಃ 10
ಓಂ ಮಹೋಬಲಯಾ ನಮಃ
ಓಂ ಬ್ರಹ್ಮಣ್ಯಾಯ ನಮಃ
ಓಂ ವಿಷ್ಣುಭಕ್ತಾಯ ನಮಃ
ಓಂ ಕುಂದೇಂದುಧವಳಾನನಾಯ ನಮಃ
ಓಂ ಚಕ್ರಪಾಣಿಧರಾಯ ನಮಃ
ಓಂ ಶ್ರೀಮತೇ ನಮಃ
ಓಂ ನಾಗಾರಯೇ ನಮಃ
ಓಂ ನಾಗಭೂಷಣಾಯ ನಮಃ
ಓಂ ವಿದ್ವನ್ಮಯಾಯ ನಮಃ
ಓಂ ವಿಶೇಷಜ್ಞಾಯ ನಮಃ 20
ಓಂ ವಿದ್ಯಾನಿದಯೇ ನಮಃ
ಓಂ ಅನಾಮಯಾಯ ನಮಃ
ಓಂ ಭೂತಿದಾಯ ನಮಃ
ಓಂ ಭುವನದಾತ್ರೇ ನಮಃ
ಓಂ ಭಯಘ್ನೇ ನಮಃ
ಓಂ ಭಕ್ತವತ್ಸಲಾಯ ನಮಃ
ಓಂ ಸಪ್ತಛಂದೋಮಯಾಯ ನಮಃ
ಓಂ ಪಕ್ಷಿರಾಜಾಯ ನಮಃ
ಓಂ ಸುರಾಸುರಪೂಜಿತಾಯ ನಮಃ
ಓಂ ಭುಜಂಗಭುಜೇ ನಮಃ 30

ಓಂ ಕಚ್ಛಪಾಶಿನೇ ನಮಃ
ಓಂ ದೈತ್ಯಹಂತ್ರೇ ನಮಃ
ಓಂ ಅರುಣಾನುಜಾಯ ನಮಃ
ಓಂ ನಿಗಮಾತ್ಮನೇ ನಮಃ
ಓಂ ನಿರಾಧಾರಾಯ ನಮಃ
ಓಂ ನಿಸ್ತ್ರೈಗುಣ್ಯಾಯ ನಮಃ
ಓಂ ನಿರಂಜನಾಯ ನಮಃ
ಓಂ ನಿರ್ವಿಕಲ್ಪಾಯ ನಮಃ
ಓಂ ಪರಂಜ್ಯೋತಿಷೇ ನಮಃ
ಓಂ ಪರಾತ್ಪರತರಾಯ ನಮಃ 40
ಓಂ ಪರಸ್ಮೈ ನಮಃ
ಓಂ ಶುಭಾಂಗಾಯ ನಮಃ
ಓಂ ಶುಭದಾಯ ನಮಃ
ಓಂ ಶೂರಾಯ ನಮಃ
ಓಂ ಸೂಕ್ಷ್ಮರೂಪಿಣೇ ನಮಃ
ಓಂ ಬೃಹತ್ತನವೇ ನಮಃ
ಓಂ ವಿಷಾಶಿನೇ ನಮಃ
ಓಂ ವಿಜಿತಾತ್ಮನೇ ನಮಃ
ಓಂ ವಿಜಯಾಯ ನಮಃ
ಓಂ ಜಯವರ್ಧನಾಯ ನಮಃ 50
ಓಂ ಅಜಾಸ್ಯಾಯಾಯ ನಮಃ
ಓಂ ಜಗದೀಶಾಯ ನಮಃ
ಓಂ ಜನಾರ್ಧನಮಹಾಧ್ವಜಾಯ ನಮಃ
ಓಂ ಘನಸಂತಾಪನಚ್ಛೇತ್ರೇ ನಮಃ
ಓಂ ಜರಾಮರಣವರ್ಜಿತಾಯ ನಮಃ
ಓಂ ಕಲ್ಯಾಣದಾಯ ನಮಃ
ಓಂ ಕಾಳಾತೀತಾಯ ನಮಃ
ಓಂ ಕಾಲಾಧರಸಮಪ್ರಭಾಯ ನಮಃ
ಓಂ ಸೋಮಪಾಯ ನಮಃ
ಓಂ ಸುರಸಂಘೇಶಾಯ ನಮಃ 60
ಓಂ ಯಜ್ಞಾಂಗಾಯ ನಮಃ

ಓಂ ಯಜ್ಞಭೂಷಣಾಯ ನಮಃ
ಓಂ ವಜ್ರಾಂಗಾಯ ನಮಃ
ಓಂ ವರದಾಯ ನಮಃ
ಓಂ ವಂದ್ಯಾಯ ನಮಃ
ಓಂ ವಾಯುವೇಗಾಯ ನಮಃ
ಓಂ ವರಪ್ರದಾಯ ನಮಃ
ಓಂ ಮಹಾಜವಾಯ ನಮಃ
ಓಂ ವಿದಾರಿಣೇ ನಮಃ
ಓಂ ಮನ್ಮಥಪ್ರಿಯಬಂಧವಾಯ ನಮಃ 70
ಓಂ ಯಜುರ್ನಾಮ್ನೇ ನಮಃ
ಓಂ ಅನುಷ್ಟುಭಜಾಯ ನಮಃ
ಓಂ ಮಾರಕಾಯ ನಮಃ
ಓಂ ಕಾಲಜ್ಞಾಯ ನಮಃ
ಓಂ ಕಮಲೇಷ್ಟಾಯ ನಮಃ
ಓಂ ಕಲಿದೋಷನಿವಾರಣಾಯ ನಮಃ
ಓಂ ಸ್ತೋಮಾತ್ಮನೇ ನಮಃ
ಓಂ ತ್ರಿವೃನ್ಮೂರ್ಧ್ನೇ ನಮಃ
ಓಂ ಭೂಮ್ನೇ ನಮಃ
ಓಂ ಗಾಯತ್ರಿತಲೋಚನಾಯ ನಮಃ 80
ಓಂ ಸಾಮಗಾನರತಾಯ ನಮಃ
ಓಂ ಸ್ರಗ್ವಿಣೇ ನಮಃ
ಓಂ ಸ್ವಚ್ಛಂದಗತಯೇ ನಮಃ
ಓಂ ಅಗ್ರಣ್ಯೇ ನಮಃ
ಓಂ ವಿನತಾನಂದನಾಯ ನಮಃ
ಓಂ ವಿಜಿತಾರಾತಿಸಂಕುಲಾಯ ನಮಃ
ಓಂ ಪತದ್ವರಿಷ್ಠಾಯ ನಮಃ
ಓಂ ಸರ್ವೇಶಾಯ ನಮಃ
ಓಂ ಪಾಪಘ್ನೇ ನಮಃ
ಓಂ ಪಾಮಮೋಚಕಾಯ ನಮಃ 90
ಓಂ ಅಮೃತಾಂಶವೇ ನಮಃ
ಓಂ ಅಮೃತವಪುಷೇ ನಮಃ

ಓಂ ಆನಂದಗತಯೇ ನಮಃ
ಓಂ ಸುಧಾಕುಂಭಧರಾಯ ನಮಃ
ಓಂ ದುರ್ಧರಾಯ ನಮಃ
ಓಂ ಅಸುರಭಂಜನಾಯ ನಮಃ
ಓಂ ಅಗ್ರಜಿತೇ ನಮಃ
ಓಂ ಜಯಗೋಪಾಯ ನಮಃ
ಓಂ ಜಗದಾಹ್ಲಾದಕಾರಕಾಯ ನಮಃ
ಓಂ ಭಗವತೇ ನಮಃ 100
ಓಂ ಸ್ತೋತ್ರಾಯ ನಮಃ
ಓಂ ಶೋಭಾಯ ನಮಃ
ಓಂ ಸ್ವರ್ಣವಪುಷೇ ನಮಃ
ಓಂ ಸ್ವರಾಜೇ ನಮಃ
ಓಂ ವಿದ್ಯುನ್ನಿಭಾಯ ನಮಃ
ಓಂ ವಿಶಾಲಾಂಗಾಯ ನಮಃ
ಓಂ ವಿನತಾದಾಸ್ಯವಿಮೋಚಕಾಯ ನಮಃ
ಓಂ ಶ್ರೀ ಗರುಡಾಯ ನಮಃ 108

**ಸಮಸ್ತ ಸನ್ಮಂಗಳಾನಿ ಸಂತು**



**ವೇಗೋತ್ತಾನಂ ವಿತಾನಂ ವ್ಯಜನ ಮಮಗುಣಂ ವೈಜಯಂತೀ ಜಯಂತೀ**
**ಮಿತ್ರಂ ನಿತ್ಯಾಭ್ಯಮಿತ್ರಂ ಯುಧಿ ವಿಜಯರಥೋ ಯುಗ್ಯಯೋಗಾನಪೇಕ್ಷಃ**
**ದಾಸೋನಿಷ್ಪರ್ಯುದಾಸೋ ದಮತನಯಭಿದೋ ನಿಸ್ಸಹಾಯಃ ಸಹಾಯಃ**
**ದೋಧೂಯೇತಾಸ್ಮದೀಯಂ ದುರಿತ ಮಧರಿತಾರಾತಿಪಕ್ಷೈಃಸ್ವಪಕ್ಷೈಃ॥**

(ಆಧಾರ: ಆಚಾರ್ಯ ಕೆ. ಸರ್ವೋತ್ತಮರಾವ್ ರವರ ಪೆರಿಯತಿರುವಡಿ-ಶಿರಿಯತಿರುವಂಡಿ ಗ್ರಂಥದಿಂದ)



ತಿರುಪತಿ, ಶ್ರೀ ಗೋವಿಂದರಾಜ ಸ್ವಾಮಿಯವರ
ಪುಷ್ಪಯಾಗ ಮಹೋತ್ಸವ
02-07-2025



ಅಪ್ಪಲಾಯಗುಂಟ, ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರ
ಪುಷ್ಪಯಾಗ ಮಹೋತ್ಸವ
12-07-2025

# ಆಷಾಢಮಾಸ ಬಂದೀತವ್ವಾ....



■ಸಾಧಕರಿಗೆ ಸೋಪಾನವಾಗುವ ತಿಂಗಳು

■ ಸನ್ಯಾಸಿಗಳಿಗೆ ಚಾತುರ್ಮಾಸ ಆರಂಭದ ಘಟ್ಟ

– ಶ್ರೀಮತಿ. ವಾರುಣಿ ಹೊನ್ನಾಳಿ
99160 22982

ಚೈತ್ರಮಾಸದಿಂದ ಆರಂಭವಾಗುವ ಸನಾತನ ಹಿಂದೂ ಪಂಚಾಂಗ ವರ್ಷದ 12 ಚಾಂದ್ರಮಾನ ತಿಂಗಳಿನಲ್ಲಿ 4 ನೇ ಮಾಸವೇ ಆಷಾಢ. ಹುಣ್ಣಿಮೆ ಜತೆಗೆ ಪೂರ್ವಾಷಾಢ ಅಥವಾ ಉತ್ತರಾಷಾಢ ನಕ್ಷತ್ರ ಸಂಗಮಿಸುವ ಕಾರಣ ಈ ಮಾಸಕ್ಕೆ ಆಷಾಢ ಎಂಬ ನಾಮಧೇಯ ತಳುಕು ಹಾಕಿ ಕೊಂಡಿದೆ. ಪ್ರಸ್ತುತ ವಿಶ್ವಾವಸು ಸಂವತ್ಸರದಲ್ಲಿ ಜೂನ್ 26 ಜುಲೈ 24 ರ ವರೆಗೆ ಆಷಾಢ ಮಾಸಾಚರಣೆ ಇರಲಿದೆ. ಆಷಾಢಮಾಸ ಎಂದರೆ ಇದು ಸಾಧಕರಿಗೆ ಸೋಪಾನ. ಪಂಡಿತರಿಗೆ ವಿವರಿಸಿದಷ್ಟೂ ವ್ಯಾಖ್ಯಾನ. ಸನ್ಯಾಸಿ, ಸಂತರಿಗೆ ಎಂದು ರೈತಾಪಿ ಸಮುದಾಯಗಳ ಮನೆಯೊಡತಿಗೆ ತಪ ಮಾಡಲು ವೇದಿಕೆ, ವನಿತೆಯರಿಗೆ ವ್ರತಾಚರಣೆಗಳ ಹವಣಿಕೆ.


ಸಾಧು,ಸಂಚಾರಿಗಳಿಗೆ ವಿಶ್ರಾಮಕಾಲ. ಆಷಾಢದ ಪರ್ಯಂತ ಆಕಾಶದಲ್ಲಿ ಕಾರ್ಮೋಡ. ಗದ್ದೆ, ಹೊಲಗಳಿಗೆ ಹೋದವರು ಯಾವಾಗ ಬರುವರೋ ಎಂದು ಮನೆಯೊಡ ತಿಗೆ ತವಕ. ದಿನಕರ ಎಲ್ಲಿ ಯಾವಾಗ ಕಾಣುತ್ತಾನೆಂಬುದನ್ನೇ ಹುಡುಕಬೇಕು ಈ ಆಷಾಢದಲ್ಲಿ.

ವರ್ಷಧಾರೆಯ ಆರ್ಭಟದ ನಡುವೆ ಸಣ್ಣನೆ ಬೀಸುವ ಗಾಳಿಗೆ ಚುಳುಚುಳು ನಡುಕ.ಜಿಟಿಪಿಟಿ ಮಳೆ. ಕಿಚಿಪಿಚಿ ಕೆಸರು, ಒಟ್ಟಿನಲ್ಲಿ ತಂಪು ಸುತ್ತೆಲ್ಲಾ ಹಸಿರು ನಿಸರ್ಗದಲಿ...

ಸೂರ್ಯಮಿಥುನ ರಾಶಿಯಲ್ಲಿರುವಾಗ ಆಷಾಢ ಪ್ರಾರಂಭವಾಗಿ ಕರ್ಕಾಟಕ ರಾಶಿಯಲ್ಲಿರುವಾಗ ಅಂತ್ಯ ಗೊಳ್ಳುತ್ತದೆ. ಹಲವು ವರ್ಷಗಳಿಗೆ ! ಒಮ್ಮೆ ಮಾತ್ರ ಸೂರ್ಯ ಮಿಥುನ ರಾಶಿಯಲ್ಲಿರುವಾಗಲೇ ಮಾಸ ಮಧ್ಯದಲ್ಲಿ ಸೂರ್ಯ ಸಂಕ್ರಮಣವಿಲ್ಲದ ಚಾಂದ್ರಮಾಸ ಬರುತ್ತದೆ. ಆ ತಿಂಗಳಿಗೆ ಅಧಿಕ ಆಷಾಢ ಎನ್ನುತ್ತಾರೆ. ಆಷಾಢದಲ್ಲಿ ಕರ್ಕಾಟಕ ರಾಶಿ ಯಲ್ಲಿ ಸೂರ್ಯನಿದ್ದರೆ ಅದು ಶೂನ್ಯ ಮಾಸವೆಂದು ಪಂಚಾಂಗ ಕರ್ತೃಗಳು ಹೆಸರಿಸಿದ್ದಾರೆ. ಅಂದ ಹಾಗೆ ಹಿಂದೂ ಧರ್ಮೀಯರಿಗೆ ಆಷಾಢ ಎಂಬುದು ಮಹತ್ತರವಾದ ಮಾಸ. ಆಷಾಢದಲ್ಲಿ ದುರ್ಗೆ, ರುದ್ರ, ವಿಷ್ಣು ಮತ್ತು ಸೂರ್ಯ ದೇವನನ್ನು ಆರಾಧನೆ ಮಾಡುವ ಪದ್ಧತಿ ಇದೆ. ಶಾಸ್ತ್ರ ವಿಧಿ ವತ್ತಾಗಿ ಈ ದೇವರುಗಳನ್ನು ಪೂಜೆ ಮಾಡುವ ಕಾರಣ ವ್ಯಕ್ತಿಯ ಇಷ್ಟಾರ್ಥಗಳೆಲ್ಲವೂ ಪ್ರಾಪ್ತಿ ಆಗುತ್ತದೆ ಎಂಬ ನಂಬಿಕೆ ಢಾಳಾ ಗಿದೆ. ಈ ಮಾಸದಲ್ಲಿ ಪ್ರತಿದಿನ ಬ್ರಾಹ್ಮೀ ಮುಹೂರ್ತದಲ್ಲಿ ಏಳ ಬೇಕು. ನಿತ್ಯವೂ ಸ್ನಾನಾದಿ ನಂತರ ಸೂರ್ಯನಿಗೆ ಅರ್ಘ್ಯ ಸಮರ್ಪಣೆ ಮಾಡಬೇಕು. ಆದಿತ್ಯ ಹೃದಯ ಸ್ತೋತ್ರ ಪಠಣ ಮಾಡಬೇಕು. ಸುಮಂಗಲಿಯರು ತುಳಸೀ ಪೂಜೆ, ಪುರುಷರು ವಿಷ್ಣು, ರುದ್ರಾದಿಗಳ ಪೂಜೆ ಮಾಡುವುದರಿಂದ ಪುಣ್ಯ ಸಂಪಾ ದನೆ ಇದೆ. ತೀರ್ಥ ಕ್ಷೇತ್ರಗಳ ದರ್ಶನಕ್ಕೆ ಹಿರಿಯರು ಮಹತ್ವ ನೀಡಿದ್ದಾರೆ.

ಮಾಸ ಪರ್ಯಂತ ದಾನ, ಯಾಗ, ಅಲ್ಲಲ್ಲಿ ಉಪವಾಸ, ದೇವತಾರಾಧನೆಗೆ ಮಾನ್ಯತೆಯನ್ನು ಪ್ರಾಚೀನರು ಕೊಟ್ಟಿದ್ದರು. ಈ ಸಂದರ್ಭ ದಾನವನ್ನು ನಿರ್ಗತಿಕರಿಗೆ ಮಾಡಬೇಕು. ಶಾಸ್ತ್ರಾಧ್ಯಯನ ಮಾಡಿದವರಿಗೆ ಆದ್ಯತೆ ಕೊಡಬೇಕು. ಧನ, ಧಾನ್ಯ, ಸುವಸ್ತುಗಳು, ಪೂಜಾ ಸಾಮಾಗ್ರಿ, ಗುಣಮಟ್ಟದ ವಸ್ತ್ರ ದಾನದಿಂದ ಪಾಪ, ಪೀಡೆ ಪರಿಹಾರವಾಗುತ್ತದೆ ಎಂದಿದ್ದಾರೆ ಶಾಸ್ತ್ರಕಾರರು.

ಈ ತಿಂಗಳಲ್ಲಿ ಬರುವ ದೇವಶಯನಿ ಏಕಾದಶಿ ಚಾತು ರ್ಮಾಸ ಆರಂಭ ದಿನ ಗುರುಪೂರ್ಣಿಮೆ ದಿನದಂದು ಕೆಲವರು



ಉಪವಾಸ ಆಚರಣೆ ಮೂಲಕ ಆತ್ಮ ಸಾಧನೆ ಮಾಡಿಕೊಳ್ಳು ತ್ತಾರೆ.

ಆಷಾಢಮಾಸ ಪೂರ್ತಿ ಒಂದು ಹೊತ್ತು ಊಟ (ಏಕ ಭುಕ್ತ) ಮಾಡಿದರೆ ಮಹಾಫಲ. ಕೇವಲ ಹಣ್ಣು ಸೇವಿಸಿ ತಿಂಗಳನ್ನು ಕಳೆದವರಿಗೂ ಇಂದ್ರಲೋಕ ಪ್ರಾಪ್ತಿ, ನೆಲ್ಲಿಕಾಯಿ, ಎಳ್ಳು ಬಳಸಿ ಪ್ರಾತಃಸ್ನಾನ ಮಾಡಿದರೆ ಸ್ವರ್ಗ ಪ್ರಾಪ್ತಿ ಎನ್ನುತ್ತವೆ ಪುರಾಣಗಳು.

ತೈಲಾಭ್ಯಂಗಂ ಪರಿತ್ಯಾಜ್ಯಂ;
ರೂಪವಾನ್ ಜಾಯತೇ ಭುವಿ ॥

ಆಷಾಢದಲ್ಲಿ ತೈಲಾಭ್ಯಂಗಕ್ಕೆ ಜಾಗವೇ ಇಲ್ಲ....

ವಾಮನರೂಪಿ ವಿಷ್ಣು ಪ್ರೀತಿಗಾಗಿ ಆಷಾಢದಲ್ಲಿ ಪಾನಕ, ಕೊಸಂಬರಿ, ನೆಲ್ಲಿಕಾಯಿ, ಉಪ್ಪು, ಛತ್ರಿ, ಚಪ್ಪಲಿಗಳನ್ನು ದಾನ ಮಾಡಿದರೆ ಅಧಿಕ ಪುಣ್ಯ ಎನ್ನುತ್ತದೆ ಈ ಮುಂದಿನ ಶ್ಲೋಕಾರ್ಥ.

ಉಪಾನದ್ಯುಗಲಂ ಛತ್ರಚ
ಲವಣಾಮಲ ಕಾನಿಚ
ಆಷಾಢೇ ವಾಮನ ಪ್ರೀತ್ಯಯ
ದಾತವ್ಯಾನಿ ತು ಭಕ್ತಿತಃ

**ಮಾಸದ ಆಹಾರ ಪದ್ಧತಿ ಹೀಗಿದೆ.**

ಈ ಮಾಸದಲ್ಲಿ ಮನೆಗೆ ಬರುವ ಅತಿಥಿಗಳಿಗೆ ಯಥೋಚಿತ ಸತ್ಕಾರ ಮಾಡಬೇಕು ಎಂಬುದನ್ನು ಹಿರಿಯರು ರೂಢಿಗತ ಮಾಡಿದ್ದಾರೆ. ಮಾಸದ ಆಹಾರ ಪದ್ಧತಿ ವೈಜ್ಞಾನಿಕವಾಗಿದೆ "ಆಷಾಢದಲ್ಲಿ ಕತ್ತೆಯೂ ಸೊಪ್ಪನ್ನು ಒಲ್ಲದು" ಎಂಬುದು ಒಂದು ಗಾದೆ ಮಾತು.

ಈ ಮಾಸದಲ್ಲಿ ಎಲ್ಲ ರೀತಿಯ ಸೊಪ್ಪುಗಳು, ಹಸಿರು ತರಕಾರಿ ಸೇವನೆ ದೂರ ದೂರ. ಇದಕ್ಕೆ ವೈಜ್ಞಾನಿಕ ಹಿನ್ನೆಲೆಯೂ ಇದೆ. ಮಳೆ ಸುರಿಯುವ ಕಾಲದಲ್ಲಿ ಅನೇಕ ಕ್ರಿಮಿ, ಕೀಟಗಳು, ಎಲೆ, ಬಳ್ಳಿಗಳಲ್ಲಿ ಮೊಟ್ಟೆ ಇಟ್ಟು ಮರಿ ಮಾಡು ತ್ತಿರುವೆ. (ಜರ್ಮಿನೇಷನ್) ಕೆಲವು ಕಣ್ಣಿಗೆ ಕಾಣಲಾರದಷ್ಟು ಚಿಕ್ಕ ಕ್ರಿಮಿಗಳಿಗೂ ಇದು ಸಂತಾನೋತ್ಪತ್ತಿ ಕಾಲ. ಅವು ಹಸಿರನ್ನೇ ಆಶ್ರಯ ಮಾಡಿರುತ್ತವೆ. ಹಾಗಾಗಿ ಕತ್ತೆಗಳೂ ಸೊಪ್ಪನ್ನು ಈ ಮಾಸದಲ್ಲಿ ತಿನ್ನುವುದಿಲ್ಲ. ನಾವು ತಿಂದು ಆರೋಗ್ಯ ಕೆಡಿಸಿಕೊಳ್ಳಬಾರದು ಎಂಬ ಹಿನ್ನೆಲೆಯಲ್ಲಿ ಶಾಕ ವ್ರತ ಜಾರಿಗೆ ತಂದಿದ್ದಾರೆ ಹಿರಿಯರು. ಹಾಗಾಗಿ ಬದನೆ ಕಾಯಿ, ಎಲೆಕೋಸು, ಬೆಳ್ಳುಳ್ಳಿ, ಈರುಳ್ಳಿ ಇತ್ಯಾದಿಯೂ ವರ್ಜ್ಯ. ಇದರ ಫಲವಾಗಿ ಕೋಪ ತಾಪಗಳು ಹತ್ತಿರ ಸುಳಿಯ ಲಾರವು ಎಂದು ಜೀವ ವಿಜ್ಞಾನವೂ ಪ್ರತಿಪಾದಿಸಿದೆ.

**ಚಾತುರ್ಮಾಸ್ಯದ ಹೆಬ್ಬಾಗಿಲು ಆಷಾಢ**

ಚಾತುರ್ಮಾಸ್ಯದ (4 ತಿಂಗಳ ಕಾಲಾವಧಿ) ಸಂದರ್ಭ ಒಂದೊಂದು ತಿಂಗಳು ಒಂದೊಂದು ಆಹಾರ ವ್ರತ ಆಚರಿಸ ಬೇಕು. ಇದಕ್ಕೆ ಆಷಾಢ ಹೆಬ್ಬಾಗಿಲು. ಮೇಲುನೋಟಕ್ಕೆ ಚಾತು ರ್ಮಾಸ್ಯದ ವ್ರತದಲ್ಲಿ ಆಹಾರ ಪದ್ಧತಿಗಳ ಕಠಿಣ ಆಚರಣೆ, ತ್ಯಾಗದಂತೆ ಕಂಡರೂ ಆಳದಲ್ಲಿ ಶುದ್ಧತೆ ಮಾರ್ಗ ಇದೆ, ಆರೋಗ್ಯವಿದೆ, ಧನ್ಯತೆ ಇದೆ. ಸತ್ಕಾರ್ಯಕ್ಕೆ ಪ್ರೇರಣೆ ಇದೆ. ಸಜ್ಜನರ ಸಂಗ ಮಾಡಲು ಅನಂತ ಅವಕಾಶವಿದೆ. ಗುರು ಹಿರಿಯರ ದರ್ಶನಕ್ಕೆ ಮಹಾ ಮಾರ್ಗವಿದೆ. ಒಟ್ಟಾರೆ ಬದುಕು ಸಂಸ್ಕಾರಯುತವಾಗಿ ಸಾಗಲು, ಕುಟುಂಬದಲ್ಲಿ ಸಮಾಜದಲ್ಲಿ ಗೌರವ ಸ್ಥಾನ ದೊರಕಿಸಿ ಕೊಡಲು, ಜ್ಞಾನ, ಭಕ್ತಿ ಮತ್ತು ವೈರಾಗ್ಯ ಪ್ರಾಪ್ತಿಯಾಗಲು ಈ ವ್ರತಗಳು ಪೂರಕವಾಗಿದೆ. ಈ ವ್ರತದ ಆಹಾರ ನಿಯಮಗಳು ದೇಹ ಮತ್ತು ಮನಸ್ಸುಗಳನ್ನು ಶುದ್ಧಗೊಳಿಸುವುದಲ್ಲದೇ ದೀರ್ಘಸ್ವಾಸ್ಥ್ಯಪಾಲನೆಗೂ ನೆರ ವಾಗುತ್ತದೆ. ಚಾತುರ್ಮಾಸ್ಯದ 4 ತಿಂಗಳು ಗ್ರೀಷ್ಮ ಮತ್ತು ವರ್ಷ ಋತುಗಳ ಸಮಾಗಮ. ಇದು ಅಪ್ಪಟ ಮಳೆಗಾಲವೇ ಆಗಿದೆ.

ಹಳ್ಳ, ಕೊಳ್ಳ ಮತ್ತು ನದಿ-ನದ ತುಂಬಿ ಹರಿಯುತ್ತಿರು ತ್ತವೆ. ಊರಿಂದ ಊರಿಗೆ ತೆರಳಲು ಕಾಲುನಡಿಗೆ ಸಂಚಾ ರವೇ ಪ್ರಧಾನವಾಗಿದ್ದ ಕಾಲದಲ್ಲಿ ಯತಿ, ಸಾಧುಸಂತರು, ಅಹಿಂಸಾ ವ್ರತ ಪಾಲಕರು ಒಂದೆಡೆ ಕುಳಿತು ಸತ್ಸಂಗ, ಧ್ಯಾನಾದಿಗಳನ್ನು ಮಾಡುತ್ತಿದ್ದರು. ಹಾಗಾಗಿ ಚಾತುರ್ಮಾಸ

ವ್ರತ ಜಾರಿಗೆ ಬಂತು. ವರಾಹ ಪುರಾಣ ಇದಕ್ಕೆ ಸಮಗ್ರ ಆಧಾರ ನೀಡಿದೆ.

ಹಿಂದೂ ಯತಿಗಳು ಮಾತ್ರವಲ್ಲ, ಜೈನ , ಬೌದ್ಧ ಧರ್ಮ ಸೇರಿದಂತೆ ಹಲವು ಮತಗಳ ಸನ್ಯಾಸಿಗಳೂ ಚಾತುರ್ಮಾಸ ವ್ರತ ಪಾಲಿಸುವುದು ವಾಡಿಕೆಯೇ ಆಗಿದೆ. ಇಲ್ಲಿ ಹೇಳಿರುವ ಆಹಾರ ವ್ರತಕ್ಕೆ ಯಾವುದೇ ಜಾತಿ ಸಮುದಾಯದ ಗೊಡವೆ ಇಲ್ಲ. ಏಕಾದಶಿ ವ್ರತ ಹೇಗೆ ಎಲ್ಲರಿಗೂ,ಅನ್ವಯವೋ ಹಾಗೆ ಈ ಚಾತುರ್ಮಾಸವೂ ಎಲ್ಲರಿಗೂ,ಆಧ್ಯಾತ್ಮ ಸೂತ್ರದೊಂದಿಗೆ ಆರೋಗ್ಯ ಮತ್ತು ವಿಜ್ಞಾನವೂ ಮಿಳಿತವಾಗಿರುವ ಕಾರಣ ಈ ವ್ರತ ಸಮಗ್ರ ಭಾರತೀಯರು ಅನುಸರಿಸಬೇಕಾದ ಆಚರಣೆ ಯಾಗಿದೆ ಎಂಬುದು ಮಹತ್ವದ ಅಂಶ. ಕೆಲವರು ಚಾತು ರ್ಮಾಸ್ಯ ಎಂದರೆ ಅದು ಸನ್ಯಾಸಿಗಳಿಗೆ ಮಾತ್ರ, ನಮಗೇನೂ ಇಲ್ಲ ಎಂದು ಭಾವಿಸಿದ್ದಾರೆ. 4 ವರ್ಣದವರಿಗೂ ಈ ವ್ರತಾ ಚರಣೆ ಇದೆ.

### ಮೊದಲ ತಿಂಗಳು ಶಾಕವ್ರತ

ಈ ತಿಂಗಳಲ್ಲಿ ಯಾವುದೇ ತರಕಾರಿ, ಬಾಳೆಹಣ್ಣು ಕೇಸರಿ, ಪಚ್ಚಕರ್ಪೂರ ಇತ್ಯಾದಿ ಸುಗಂಧದ್ರವ್ಯ ಬಳಸು ವಂತಿಲ್ಲ. ಮಾಸ ಫಲ ಮಾವು ಹೊರತಾಗಿ ಬೇರೆ ಯಾವ ಹಣ್ಣುಗಳೂ ದೇವರ ನೈವೇದ್ಯಕ್ಕೆ ಇಲ್ಲ. ನಮಗೂ ಇಲ್ಲ. ಇದಕ್ಕೆ ವೈಜ್ಞಾನಿಕ ಹಿನ್ನೆಲೆಯೂ ಇದೆ. ತರಕಾರಿ ಎಂಬುದು ಹಿಂದಿನ ಕಾಲದಲ್ಲಿ ಯಥೇಚ್ಛವಾಗಿ (ವಾಣಿಜ್ಯ ಲಾಭಕ್ಕಾಗಿ) ಬೆಳೆಯು ತ್ತಿರಲಿಲ್ಲ. ಜನರು ಅವರ ಅಗತ್ಯಕ್ಕೆ ತಕ್ಕಂತೆ ಮನೆ ಹಿತ್ತಲು, ತೋಟದಲ್ಲಿ ಬೆಳೆದು ಹೆಚ್ಚುವರಿಯನ್ನು ಹಂಚಿ ತಿನ್ನುತ್ತಿದ್ದರು. ಮಳೆಗಾಲದ ಆರಂಭ ಘಟ್ಟದಲ್ಲಿ ತರಕಾರಿಗಳ ಮೇಲೂ ಕ್ರಿಮಿ, ಕೀಟಗಳು ಸಂತಾನ ಉತ್ಪತ್ತಿ ಮಾಡುತ್ತವೆ. ಹೆಚ್ಚು ಫಸಲೂ ಆ ಸಮಯದಲ್ಲಿ ಬರಲಾರದು ಹಾಗಾಗಿ ತರಕಾರಿ ಈ ತಿಂಗಳು ನಿಷೇಧ. ವ್ರತಾಚರಣೆ ಸಂದರ್ಭ ಒಂದೇ ಸ್ಥಳದಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದ ಕಾರಣ ವಿವಿಧ ರೀತಿಯ ಹಣ್ಣು ಸೇವಿ ಸಿದರೆ ಸರಿಯಾಗಿ ಜೀರ್ಣವಾಗುವುದಿಲ್ಲ. ಹಾಗಾಗಿ ಮಾಸ ಫಲ ಮಾವು ಹೊರತಾಗಿ ಎಲ್ಲ ಹಣ್ಣುಗಳನ್ನೂ ಈ ಸಂದರ್ಭ ಹಿರಿಯರು ನಿಷೇದಿಸಿದ್ದರು.

### ಮುದ್ರಾಧಾರಣೆಗೆ ಪ್ರಶಸ್ತ ಕಾಲ :

ಆಧ್ಯಾತ್ಮಿಕ ಪ್ರಪಂಚದಲ್ಲಿ ಆಷಾಢ ಮಾಸವು ಪ್ರಾಮುಖ್ಯ ಪಡೆದಿದೆ. ಈ ಮಾಸದಲ್ಲಿ ಭಗವಾನ್ ವಿಷ್ಣುವು ಯೋಗ ನಿದ್ರೆಗೆ ಜಾರುತ್ತಾನೆ. ಇಂದಿನಿಂದ 6 ತಿಂಗಳು ರಾತ್ರಿ (ಅಂದರೆ ದೇವರಿಗೆ ಒಂದು ದಿನ). ಹಾಗಾಗಿಯೇ ಆಷಾಢದ ಏಕಾದಶಿ ಯನ್ನು ಶಯನೀ ಎಂದು ಕರೆದಿದ್ದಾರೆ.

ಆಷಾಢ ಏಕಾದಶಿಯಂದು ದೇವರು ಯೋಗನಿದ್ರೆಗೆ ಹೋದನೆಂದು ನಾವು ಮಲಗದೇ ಎಚ್ಚೆತ್ತು ಸಾಧನೆ ಮಾಡ ಬೇಕು. ಈ ಮೂಲಕ ಬದುಕಿನ ಸಾರ್ಥಕ್ಯ ಹೊಂದಬೇಕು ಎಂಬ ಭಾವ ಇಲ್ಲಿ ಅಡಗಿದೆ. ಆ ಎಚ್ಚರ ಮೂಡಿಸಲೆಂದೇ ಬಿಸಿಯಾದ ಪಂಚಲೋಹ ಮುದ್ರೆಯಿಂದ ದೇಹವನ್ನು ಅಂಕಿತಗೊಳಿಸಬೇಕು. ಮುದ್ರಾಧಾರಣೆ ಮಾಡಿಸಿಕೊಳ್ಳ ಬೇಕು. ಶಂಖ, ಚಕ್ರ ಸಹಿತ ಮುದ್ರಾಧಾರಣೆಯಲ್ಲಿ ವೈದಿಕ ಮತ್ತು ಆಧ್ಯಾತ್ಮಿಕ ಮಹತ್ವ ಅಡಗಿದೆ. ಮಾಧ್ವರಲ್ಲಿ ಈ ಸಂಪ್ರ ದಾಯ ಹೆಚ್ಚು ಮನ್ನಣೆ ಪಡೆದಿದೆ ಅನೇಕರು ಈ ದಿನ ವಿಠ್ಠಲ ರುಕುಮಾಯಿ ಪೂಜೆಯನ್ನೂ ಮಾಡುತ್ತಾರೆ. ಪಂಢರಾಪುರ ದಲ್ಲಿ ವಿಠಲನಿಗೆ ವಿಶೇಷ ಪೂಜೆ ಸಂಪನ್ನಗೊಳ್ಳುತ್ತದೆ.


### ಡೋಲೋತ್ಸವ :

ಈ ತಿಂಗಳಿನ ಶುಕ್ಲ ಏಕಾದಶಿ ದಿನ ದಕ್ಷಿಣಾಯನ ಪ್ರಾರಂಭದ ಕುರುಹಾಗಿ ಹಲವು ದೇವ ಸನ್ನಿಧಿಗಳಲ್ಲಿ ಡೋಲೋತ್ಸವಗಳು ಭಗವಂತನ ಪ್ರೀತ್ಯರ್ಥವಾಗಿ ಸಂಪನ್ನ ಗೊಳ್ಳುತ್ತವೆ. ಅಂದಿನಿಂದ ಚಾತುರ್ಮಾಸ್ಯ ವ್ರತ ಪ್ರಾರಂಭ ವಾಯಿತು ಎಂಬ ಸಂಕೇತವೂ ಇದಾಗಿದೆ.

### ಅತ್ತೆ - ಸೊಸೆ ಒಟ್ಟಿಗೆ ಇರಬಾರದು!

ಹೊಸದಾಗಿ ಮದುವೆಯಾದ ಸೊಸೆಯು ಆಷಾಢದಲ್ಲಿ ಅತ್ತೆಯೊಂದಿಗೆ ಇರಬಾರದು! ತವರಿಗೆ ಹೋಗಬೇಕು. ಇದಕ್ಕೂ ಕಾರಣ ಇದೆ. ಈ ತಿಂಗಳಲ್ಲಿ ನವವಧು ಗರ್ಭ ಧರಿ ಸಿದರೆ ಚೈತ್ರ ಅಥವಾ ವೈಶಾಖದ ಸುಡು ಬಿಸಲ ಕಾಲದಲ್ಲಿ ಶಿಶು ಜನಿಸುತ್ತದೆ. ಆಗ ಮಗು-ಬಾಣಂತಿ ಇಬ್ಬರಿಗೂ ಆರೈಕೆ ಮಾಡುವುದು ತ್ರಾಸ. ಇದನ್ನು ಬಹಿರಂಗವಾಗಿ ಹೇಳುವುದು ಮುಜುಗರವಾದ ಕಾರಣ ಮೇಲಿನ ಮಾತು ಸಂಪ್ರದಾಯಸ್ಥ ರಿಂದ ಚಾಲ್ತಿಗೆ ಬಂತು.

ಆಷಾಢ ಮಾಸ ಬಂದೀತವ್ವಾ... ಅಣ್ಣಾ ಬರಲಿಲ್ಲ ಕರಿಯಾಕಾ... ಎಂದು ಹಾಡಿದರು ಜಾನಪದರು. ಆಷಾಢ ವನ್ನು ನಿಷಿದ್ಧ ಮಾಸ ಎನ್ನದೇ ಸಾಧನೆ, ಪ್ರಗತಿ, ಆತ್ಮೋನ್ನತಿಗೆ ಮುಂದಾಗಬೇಕು ಎಂಬ ಸಂದೇಶ ಇಲ್ಲಿ ಅಡಗಿದೆ.



### ಗುರುಪೂರ್ಣಿಮೆ :

ಆಷಾಢ ಹುಣ್ಣಿಮೆಯಂದು ಗುರುಪೂರ್ಣಿಮೆ. ಎಲ್ಲ ರಂಗದವರೂ ಇಂದು ಗುರುಪೂಜೆ ಮಾಡಿ ಧನ್ಯತೆ ಮೆರೆಯುತ್ತಾರೆ. ಈ ದಿನ ಭಗವಾನ್ ವೇದವ್ಯಾಸರು ಪ್ರಾದುರ್ಭವಿಸಿದ ಮಹತ್ತರ ದಿನ. ಯತಿಗಳು ಶ್ರೀವೇದವ್ಯಾಸ ದೇವರ ಪೂಜೆ ನಡೆಸಿ ಚಾತುರ್ಮಾಸ್ಯ ವ್ರತ ಆರಂಭಿಸುತ್ತಾರೆ. ಸುಮಂಗಲಿಯರು ದೀರ್ಘ ಸೌಮಂಗಲ್ಯ ಪ್ರಾಪ್ತಿಗಾಗಿ ಈ ತಿಂಗಳ ಅಮಾವಾಸ್ಯೆಯಂದು ಜ್ಯೋತಿರ್ಭೀಮೇಶ್ವರ ವ್ರತ ಆಚರಿಸುತ್ತಾರೆ. ಹಾಗಾಗಿ ಆಷಾಢ ಮಾಸವನ್ನು ಅಶುಭ ಮಾಸವೆಂದು ತಿರಸ್ಕರಿಸದೆ ಸಾಧನಾ ಕಾರ್ಯಗಳಿಗೆ ಮುಂದಾದರೆ ನಮಗೇ ಲಾಭ.

ವೈಜ್ಞಾನಿಕ ಪರಿಸರಾತ್ಮಕ ಕಾರಣಗಳಿಂದ ಕೆಲ ಕಾರ್ಯ ಇಲ್ಲಿ ನಿಷಿದ್ಧವೇ ಹೊರತು ಧಾರ್ಮಿಕವಾಗಿ ಅಲ್ಲ. ಅನುಸೂಯಾದೇವಿ ಈ ತಿಂಗಳಲ್ಲಿ ಬರುವ 4 ಸೋಮವಾರಗಳೆಂದು ರುದ್ರದೇವರ ಪೂಜೆ ಮಾಡಿದ್ದಳಂತೆ. ಅದಕ್ಕಾಗಿ ಮುಂದೆ ದತ್ತಾತ್ರೇಯರೇ ಆಕೆಗೆ ಮಕ್ಕಳಾದರಂತೆ ಎನ್ನುತ್ತದೆ ಭಾಗವತ.

## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡುತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾ ತೋರಣ.ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾ ಮಂಡಪ.

### ಶ್ರೀವೆಂಕಟೇಶ್ವರ ಧ್ಯಾನಮಂದಿರ(ಎಸ್.ವಿ.ಮ್ಯೂಜಿಯಂ):

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.



108 ದಿವ್ಯದೇಶಗಳು

# ತಿರುಮಣಿಕ್ಕೂಡಮ್

**ಆಚಾರ್ಯ ಚಕ್ರವರ್ತಿ ರಂಗನಾಥನ್**
**ಅನುವಾದ : ಸೂರ್ಯವಂಶಿ**

ಈ ದಿವ್ಯ ದೇಶವು ಶೀರ್ಕಾಳಿಯಿಂದ 8 ಕಿ.ಮೀ. ದೂರದಲ್ಲಿ ತಿರುನಾಂಗೂರ್‌ನಿಂದ ಮಂಗೈಮಡಂ ಊರಿಗೆ ಹೋಗುವ ದಾರಿಯಲ್ಲಿ ಒಂದೇ ಪ್ರಾಕಾರದೊಂದಿಗೆ ಪೂರ್ವದಿಕ್ಕಿನಲ್ಲಿ ಅರ್ಧ ಮಂಟಪ, ಮಹಾಮಂಟಪದೊಂದಿಗೆ ಈ ತಿರುಮಣಿಕ್ಕೂಡಂ ಎಂಬ ಪವಿತ್ರ ಪ್ರದೇಶವು ಅದ್ಭುತವಾದ ಪ್ರಕೃತಿ ರಮಣೀಯತೆಯೊಂದಿಗೆ ರಾರಾಜಿಸುತ್ತದೆ.

ಈ ದಿವ್ಯದೇಶದಲ್ಲಿ ಮೂಲಮೂರ್ತಿಯು ಪೂರ್ವಾಭಿಮುಖವಾಗಿ ಪದ್ಮಪೀಠದ ಮೇಲೆ ನಿಂತಿರುವ ಭಂಗಿಯಲ್ಲಿ ತಿರುಮಣಿ ಕ್ಕೂಡನಾಯಕನಾಗಿ, ಗಜೇಂದ್ರವರದನಾಗಿ, ವರದರಾಜನಾಗಿ ಭಕ್ತರಿಂದ ಸ್ತುತಿಸಲ್ಪಡುತ್ತಿದ್ದಾನೆ. ಹಾಗೇ ಅಮ್ಮನವರು ನಿಂತಿರುವ ಭಂಗಿಯಲ್ಲಿ ಮೂರ್ತಿಸ್ವರೂಪಳಾಗಿ ಎಲ್ಲರಿಂದ ಸೇವಿಸಲ್ಪಡುತ್ತಿದ್ದಾಳೆ. ಆಲಯದ ತೀರ್ಥವು ಚಂದ್ರಪುಷ್ಕರಿಣಿ ಎಂಬ ಹೆಸರಿನಿಂದ ಕರೆಯಲ್ಪಡುತ್ತಿದೆ. ವಿಮಾನವು ಕನಕವಿಮಾನವೆಂದು, ಪ್ರಸನ್ನ ವಿಮಾನವೆಂದು ಕರೆಯಲ್ಪಡುತ್ತಿದೆ. ಮೂಲ ಮೂರ್ತಿಯಂತೆಯೇ ಶ್ರೀದೇವಿ ಭೂದೇವಿ ಸಹಿತನಾದ ವರದರಾಜನು ತಿರುನಾಮದೊಂದಿಗೆ ಉತ್ಸವಮೂರ್ತಿಗಳು ವಿರಾಜಮಾನರಾಗಿದ್ದಾರೆ. **'ತಿರುಮಾ ಮಹಳ್ ನಾಚ್ಚಿಯಾರ್'** ಎಂಬ ಹೆಸರಿನೊಂದಿಗೆ ಅಮ್ಮನವರು ಈ ಕ್ಷೇತ್ರದಲ್ಲಿ ಪ್ರತ್ಯೇಕವಾದ ಸನ್ನಿಧಿಯಲ್ಲಿ ನೆಲೆಸಿದ್ದು, ಇಲ್ಲಿ ಪಾಂಚರಾತ್ರಾಗಮದ ಪ್ರಕಾರ ಆರಾಧನೆಗಳು, ಉತ್ಸವಗಳು ನಡೆಯುತ್ತಿದೆ.

ಇಲ್ಲಿ ಬೇಡಿ ಬಂದ ಭಕ್ತರಿಗೆ ಆಪದ್ಬಾಂದವನಾಗಿ ಬೇಡಿದ ಇಷ್ಟಾರ್ಥಗಳನ್ನು ಪ್ರಸಾದಿಸುತ್ತಾ ಈ ಸ್ವಾಮಿಯ ನಾಮ ಧೇಯವಾದ ವರದರಾಜನೆಂಬ ಹೆಸರನ್ನು ಅನ್ವರ್ಥವಾಗಿಸಿಕೊಂಡಂತೆ ಭಾಸವಾಗುತ್ತದೆ. ಚಂದ್ರನಿಗೂ ಅನುಗ್ರಹಿಸಿದ ಈ ಸ್ವಾಮಿ ವರದರಾಜನೆಂದು ಹೆಸರು ವಾಸಿಯಾಗಿದ್ದಾನೆ. ತಿರುಮಂಗೈಆಳ್ವಾರರು ಈ ದಿವ್ಯದೇಶಕ್ಕೆ ಮಂಗಳಾಶಾಸನವನ್ನು ರಚಿಸಿದ್ದಾರೆ.

### ಸ್ಥಳ ಪುರಾಣ

ತಿರುಇಂದಳೂರ್, ತಲೈಚ್ಚಂಗನಾನ್ ಮದಿಯಮ್ ಇತರ ದಿವ್ಯದೇಶಗಳಂತೆ ಈ ತಿರುಮಣಿಕ್ಕೂಡಮ್ ದಿವ್ಯ ದೇಶದಲ್ಲಿ ದೇವದೇವನು ಚಂದ್ರನನ್ನು ಅನುಗ್ರಹಿಸಿದ ಪ್ರಸಂಗವೇ ಈ ದಿವ್ಯದೇಶದ ಪ್ರಸಿದ್ಧ ಪುರಾಣವಾಗಿದೆ. ಈ ಲೋಕದಲ್ಲಿ ಅಂದಕ್ಕೆ,



ಆಹ್ಲಾದಕ್ಕೆ ಚಂದ್ರನನ್ನು ಉದಾಹರಣೆಯಾಗಿ ಹೇಳುತ್ತಾರೆ. ಚಂದ್ರದೇವನನ್ನು ನೋಡಿ ಮೋಹಪರವಶರಾಗದವರು ಇಲ್ಲವೆಂದರೆ ಅತಿಶಯೋಕ್ತಿಯಲ್ಲ. ಆ ಚಂದ್ರನ ಆಹ್ಲಾದವನ್ನು, ಸೌಂದರ್ಯವನ್ನು, ಸ್ವರೂಪವನ್ನು ನೋಡಿ ದಕ್ಷಪ್ರಜಾಪತಿಯು ತನ್ನ 27 ಜನ ಪುತ್ರಿಯರನ್ನು ಚಂದ್ರನಿಗೆ ಕೊಟ್ಟು ವಿವಾಹ ಮಾಡಿದರು. ಆ 27 ಜನರೇ ಅಶ್ವಿನಿ, ಭರಣಿ ಮೊದಲಾದ 27 ನಕ್ಷತ್ರಗಳಾಗಿ ಆಕಾಶದಲ್ಲಿ ಮಿನುಗುತ್ತಿದ್ದಾರೆ. ಈ 27 ಜನ ಹೆಣ್ಣುಮಕ್ಕಳಲ್ಲಿ ರೋಹಿಣಿಯೆಂದರೆ ಚಂದ್ರನಿಗೆ ವಿಪರೀತವಾದ ಪ್ರೇಮ! ಉಳಿದ 26 ಜನರನ್ನು ಅಲಕ್ಷಿಸುತ್ತಿದ್ದ. ಈ 26 ಜನ ತಮ್ಮ ದುಃಸ್ಥಿತಿಯನ್ನು ತಂದೆಗೆ ತಿಳಿಸಿದರು. ಅದಕ್ಕೆ ಕೋಪಗೊಂಡ ದಕ್ಷನು 27 ಕನ್ಯೆಯರನ್ನು ನೀನು ಆಕರ್ಷಿಸಿದ್ದೀ ಅಂತಹಾ ಸೌಂದರ್ಯವೇ ನಿನಗೆ ಇಲ್ಲದಾಗಲಿ ಎಂದು ಶಪಿಸಿದ. ದಕ್ಷನ ಶಾಪದಿಂದಾಗಿ ಚಂದ್ರನು ತನ್ನ ಸೌಂದರ್ಯವನ್ನು ಕಳೆದುಕೊಂಡು, ಕಾಂತಿಹೀನನಾಗಿ ರಾತ್ರಿಯ ವೇಳೆ ಪ್ರಕಾಶಿಸದೇ ಇರುವುದರಿಂದ ರಾತ್ರಿ ಅಂಧಕಾರವು ಮುಸುಗಿತ್ತು, ಚಂದ್ರನೊಂದಿಗೆ ಆಕಾಶದಲ್ಲಿ ಪ್ರಕಾಶಿಸುವಂತಹಾ 27 ನಕ್ಷತ್ರಗಳು ಕೂಡಾ ಕಾಂತಿಯನ್ನು ಕಳೆದುಕೊಂಡವು. ಚಂದ್ರನಿಗೆ ಉಂಟಾದ ಶಾಪದ ಫಲವನ್ನು ಆತ ಮಾತ್ರಾ ಅನುಭವಿಸದೇ ಲೋಕವೆಲ್ಲವೂ ಅನುಭವಿಸುವಂತೆ ಆಯಿತು.

ಶಾಪದ ಕಾರಣದಿಂದಾಗಿ ತನ್ನ ಪತ್ನಿಯರು, ದೇವಲೋಕ, ಭೂಲೋಕ, ಸಮಸ್ತ ಲೋಕಗಳು ಕಷ್ಟಪಡುತ್ತಿರುವುದನ್ನು ನೋಡಿ ಚಂದ್ರನು ತನಗೆ ಒದಗಿದ ಶಾಪವು ಉಪ ಸಂಹಾರವಾಗುವಂತೆ ಭೂಲೋಕದಲ್ಲಿ ಅನೇಕ ಸ್ಥಳಗಳಿಗೆ ಹೋಗಿ, ಪೂಜೆಯನ್ನು ಮಾಡುತ್ತಾ ಕೊನೆಯಲ್ಲಿ ಈ ತಿರುಮಣಿಕ್ಕೂಡಾ ದಿವ್ಯ ದೇಶಕ್ಕೆ ಬಂದ, ಅಲ್ಲಿ ಒಂದು ಪುಷ್ಕರಿಣಿಯನ್ನು ತೋಡಿ, ಅಲ್ಲಿ ಸ್ನಾನವನ್ನು ಮಾಡಿ, ಈ ದಿವ್ಯಕ್ಷೇತ್ರದ ಭಗವಂತನಾದ ವರದರಾಜಸ್ವಾಮಿಯನ್ನು ಕಣ್ಣೀರಿನೊಂದಿಗೆ ಪ್ರಾರ್ಥಿಸಿದ. ವರದರಾಜಸ್ವಾಮಿಯು ಚಂದ್ರನ ಪ್ರಾರ್ಥನೆಯನ್ನು ಮನ್ನಿಸಿ ಆತನ ಎದಿರು ಪ್ರತ್ಯಕ್ಷನಾಗಿ ಶಾಪ ವಿಮೋಚನೆಯನ್ನು ಮಾಡಿದ. ಆದರೆ ದಕ್ಷನ ಶಾಪಕ್ಕೆ ಗೌರವವನ್ನು ತೋರಿ, ಪ್ರಜಾಪತಿಯ ಶಾಪವು ಸುಳ್ಳಾಗದಂತೆ ತಿಂಗಳಿನಲ್ಲಿ 15 ದಿನಗಳ ಕಾಲ ಪ್ರಕಾಶವಂತನಾಗಿ, 15 ದಿನಗಳ ಕಾಲ ಕಾಂತಿ ಹೀನನಾಗಿ ಇರುವಂತೆ ಶುಕ್ಲಪಕ್ಷ, ಕೃಷ್ಣಪಕ್ಷಗಳನ್ನು ಏರ್ಪಡಿಸಿದ. ಈ ರೀತಿ ಚಂದ್ರನನ್ನು ಅನುಗ್ರಹಿಸಿದ ಈ ವರದರಾಜ ಸ್ವಾಮಿಯನ್ನು ಯಾರು ದರ್ಶಿಸುತ್ತಾರೋ ಅಂತಹವರಿಗೆ ಸಕಲವಿಧವಾದ ಮಂಗಳವುಂಟಾಗಿ ಎಲ್ಲಾ ಕಾರ್ಯಗಳೂ ಸಿದ್ಧಿಸುತ್ತವೆ. ಆದ್ದರಿಂದ ಭಕ್ತರೆಲ್ಲರೂ ಈ ತಿರುಮಣಿಕ್ಕೂಡ ದಿವ್ಯದೇಶಕ್ಕೆ ಬಂದು ವರದರಾಜ ಸ್ವಾಮಿಯನ್ನು ಸೇವಿಸಿ ಇಹಪರ ಸೌಖ್ಯಗಳನ್ನು ಪಡೆಯುತ್ತಾರೆ.

| | | |
|---|---|---|
| ಭಗವಂತನು | : | ತಿರುಮಣಿಕ್ಕೂಡನಾಯಗನ್, ವರದರಾಜನ್, ಗಜೇಂದ್ರ ವರದನ್, |
| ಅಮ್ಮನವರು | : | ತಿರುಮಾಮಹಳ್ ನಾಚ್ಚಿಯಾರ್, ಇಂದಿರಾದೇವಿ, ಭೂದೇವಿ, |
| ತೀರ್ಥ | : | ಚಂದ್ರಪುಷ್ಕರಿಣಿ |
| ವಿಮಾನ | : | ಕನಕವಿಮಾನ, ಪ್ರಸನ್ನ ವಿಮಾನ |
| ಪ್ರತ್ಯಕ್ಷವಾಗಿದ್ದು | : | ಗರುಡನಿಗೆ ಮತ್ತು ಚಂದ್ರನಿಗೆ |
| ಮಂಗಳಾಶಾಸನ | : | ತಿರುಮಂಗೈಆಳ್ವಾರ್ |
| ಆಗಮ | : | ಪಾಂಚರಾತ್ರಾಗಮ |

# ಶ್ರೀ ವೆಂಕಟಾಚಲ ಮಹಾತ್ಮ್ಯ

ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್
ಅನುವಾದ – ಶ್ರೀಮತಿ. ಎನ್. ಪಾರ್ವತಿ

ಕಳೆದ ಸಂಚಿಕೆಯಿಂದ

ಋಷಿಗಳು, “ಸ್ವಾಮಿ! ವೇದಾಂತ ವೇದ್ಯನಾದ ವೆಂಕಟೇಶನ ಮಹಿಮೆಯನ್ನು ತಿಳಿಸುವಿರಾ? ” ಎಂದು ಬಿನ್ನವಿಸಿದರು. “ನಿಜ! ಕಪಿಲ ಮಹಾಮುನಿಯು ಒಮ್ಮೆ ಶೇಷನೊಂದಿಗೆ ಈ ವಿಷಯವನ್ನು ಚರ್ಚಿಸಿದನು. ನಂತರ, ಹರಿಗೆ ಪ್ರಿಯವಾದ, ರಹಸ್ಯವಾದ, ಪಾಪ ನಿವಾರಕವಾದ, ಮತ್ತು ಶ್ರೇಷ್ಠವಾದ ಅಷ್ಟೋತ್ತರಶತ ನಾಮಾವಳಿಯನ್ನೂ, ಸುಮಕೈಂಕರ್ಯವಾದ ಪೂಜಾ ವಿಧಾನವನ್ನೂ ಬೋಧಿಸಿದನು. ಆ ಕಪಿಲನೇ ಈ ಅಷ್ಟೋತ್ತರ ಶತನಾಮಾವಳಿಯ ಜೊತೆಗೆ ಪೂಜಾ ವಿಧಾನವನ್ನು ಬೋಧಿಸಿರುವುದನ್ನು ನಾನು ನಿಮಗೆ ವಿವರಿಸಿದ್ದೇನೆ” ಎಂದು ಮುಗಿಸಿದನು.

ಸೂತನು ನೈಮಿಷಾರಣ್ಯ ಮುನಿಗಳಿಗೆ ವೆಂಕಟಾದ್ರಿಯ ಬಗ್ಗೆ ಶ್ರೀನಿವಾಸ ಕೈಂಕರ್ಯದ ವಿವರವಾದ ಕಾರ್ಯವಿಧಾನವನ್ನು ವಿವರಿಸುತ್ತಿರುವಾಗ, ಋಷಿಗಳು ವೆಂಕಟಾದ್ರಿಯನ್ನು ದರ್ಶಿಸುವ ಬಯಕೆಯನ್ನು ವ್ಯಕ್ತಪಡಿಸಿದರು.



ನೈಮಿಷಾರಣ್ಯ ಮುನಿಗಳು ವೆಂಕಟಾದ್ರಿಯನ್ನು ತಲುಪುವುದು

ಸೂತ ಮಹರ್ಷಿ ತಕ್ಷಣ “ಮುನಿಗಳೇ! ನನ್ನ ಪೌರಾಣಿಕ ಪ್ರವಚನ ಸಾರ್ಥಕವಾಯಿತು. ನಿಮ್ಮ ಉತ್ಸಾಹವನ್ನು ಗಮನಿಸಿದ್ದೇನೆ. ತಡಮಾಡದೆ ಹೊರಡಿ. ಗಿರಿ ಶಿಖರಗಳನ್ನು ದರ್ಶಿಸಿ. ವೆಂಕಟಾದ್ರಿಯ ವೈಭವವನ್ನು ಮನದಣಿಯ ನೋಡಿ. ಪುಣ್ಯ ತೀರ್ಥಗಳಲ್ಲಿ ಸ್ನಾನ ಮಾಡಿ. ಭೂವರಾಹ ಸ್ವಾಮಿಯ ಸೇವೆ ಮಾಡಿ” ಎಂದು ಅನುಮತಿಸಿದರು. ಸೂತನು ತಮ್ಮ ಪ್ರಯಾಣಕ್ಕೆ ಅನುಮತಿ ನೀಡಿದ ತಕ್ಷಣ, ಗೌತಮ, ಜಾಬಾಲಿ, ಕಾಶ್ಯಪ, ಅಂಗೀರಸ, ಶ್ರೀವತ್ಸ, ಕೋತ್ಸ, ಮೈತ್ರೇಯ, ಕಣ್ವ, ಗಾರ್ಗೇಯ, ಮೃಕಂಡ ಭಾರದ್ವಾಜ, ಕೌಶಿಕ, ದೇವಳ, ಕ್ರತು, ಪುಲಸ್ತ್ಯಾದಿಯರು ಯಾತ್ರೆಗೆ ಸಿದ್ಧರಾದರು.

ಗಂಗಾನದಿಯಲ್ಲಿ ಸ್ನಾನ ಮಾಡಿದರು. ಗೌತಮಿಯಲ್ಲಿ ಮಿಂದರು. ಕೃಷ್ಣಾ ನದಿಯಲ್ಲಿ ಮುಳುಗಿ ಎದ್ದರು. ಅವರು ದಾರಿಯುದ್ಧಕ್ಕೂ ಅನೇಕ ತೀರ್ಥಗಳಲ್ಲಿ ಸ್ನಾನ ಮಾಡಿದರು. ಭಗವಂತನನ್ನು ದರ್ಶಿಸುವ ತುಡಿತದಿಂದ ಪಾವನತೀರ್ಥ ಮತ್ತು ಕಪಿಲತೀರ್ಥವನ್ನು ತಲುಪಿಸಿದರು. ಆ ತೀರ್ಥಗಳಲ್ಲಿ ಪವಿತ್ರ ಸ್ನಾನ ಮಾಡಿ,ಸ್ತೋತ್ರಗಳನ್ನು ಪಠಿಸಿ ಸ್ವಾಮಿ ಪುಷ್ಕರಿಣಿಯಲ್ಲಿ ಮುಳುಗಿ ಎದ್ದು, ಅಲ್ಲಿ ಶ್ರೀನಿವಾಸನ ದರ್ಶನ ಪಡೆದರು.

ಋಷಿಗಳಿಗೆ ಪರಮಾನಂದ. ಕೆಲವರು ಜಡೆಗಳನ್ನು ಅಲ್ಲಾಡಿಸುತ್ತಾ ಆಡಿದರು. ಇನ್ನೂ ಕೆಲವರು ಆನಂದಪರವಶರಾಗಿ ಎಗರುತ್ತಿದ್ದರು. ಆವೇಶದಿಂದ ಭಾವಪರವಶರಾಗಿದ್ದರು. ವೇದ ಶ್ಲೋಕಗಳನ್ನು ಏಕಕಂಠದಿಂದ ಪಠಿಸುತ್ತಿದ್ದರು. ಎಲ್ಲರೂ ಚಿನ್ನದ ಕಮಲದ ಹೂವುಗಳಿಂದ



ನೂರೆಂಟು ದಿವ್ಯ ನಾಮಗಳನ್ನು ಪಠಿಸಿದರು. ಮುನಿಗಳ ಭಕ್ತಿಗೆ ಸುಪ್ರೀತನಾದ ಪರಮಾತ್ಮ ಶ್ರೀನಿವಾಸನು ಪ್ರತ್ಯಕ್ಷನಾದನು.

"ಋಷಿಗಳೇ! ನೀವು ಇಲ್ಲಿಗೆ ಬಂದಿರುವುದರಿಂದ, ನೀವು ನಿಷ್ಠಾವಂತ ಭಕ್ತರಿದ್ದೀರಿ ಎಂದು ನನಗೆ ಅರ್ಥವಾಯಿತು. ನಿಮ್ಮ ಭಕ್ತಿಯಿಂದ ನಾನು ಸಂತುಷ್ಟನಾಗಿದ್ದೇನೆ. ನೀವು ಬಯಸುವ ಯಾವುದೇ ವರವನ್ನು ಕೇಳಿ. ನಾನು ನಿಮಗೆ ಆ ವರವನ್ನು ದಯಪಾಲಿಸುತ್ತೇನೆ" ಎಂದು ಎಂದನು. ಭಗವಂತನ ಸಾಕ್ಷಾತ್ಕಾರಕ್ಕೆ ಮತ್ತು ವರಾನುಗ್ರಹದಿಂದ ಋಷಿಗಳು ಬಹಳ ಸಂತುಷ್ಟರಾದರು.

"ಪರಬ್ರಹ್ಮಸ್ವರೂಪನೇ! ವಾಙ್ಮನಸಾತೀತನೂ, ವೈಕುಂಠ ವಾಸಿಯಾದ ನೀನು ವೆಂಕಟಗಿರಿಯಲ್ಲಿ ನೆಲೆಸಿದ್ದೀಯಾ. ನಿನ್ನನ್ನೂ, ನಿನ್ನ ರೂಪವನ್ನೂ ಮನಸಾರೆ ಕಣ್ತುಂಬಿಕೊಂಡಿದ್ದೇವೆ. ಆದರೂ ನಿಮ್ಮ ದಿವ್ಯಮಂಗಳ ವಿಗ್ರಹವನ್ನು ವೆಂಕಟಗಿರಿಯಲ್ಲಿ ಕಣ್ಣಾರೆ ನೋಡಲು ಸಾಧ್ಯವಾಯಿತು. ಪುಣ್ಯಫಲ ಲಭಿಸಿದೆ. ಇನ್ನು ವರಗಳು ಏಕೆ?ನಮಗೆ ಮೋಕ್ಷದ ಮಾರ್ಗವನ್ನು ತೋರಿಸು. ಅದೇ ನಾವು ಕೋರುವ ವರ ನಮಗೆ ಬೇರೆ ಏನೂ ಬೇಡ" ಎಂದರು.

ಭಗವಂತನು ಋಷಿಗಳನ್ನು ನೋಡಿ ಸಂತೃಪ್ತನಾಗಿ, "ಮುನಿಗಳೇ! ನೀವು ಸಾಮಾನ್ಯರಲ್ಲ. ಪರಿಪೂರ್ಣಕಾಮರು. ಮಹಾಋಷಿಗಳು. ಜಗತ್ಪಾವನರು. ಅದಕ್ಕಾಗಿಯೇ ನೀವು ಯಾವುದೇ ವರವನ್ನು ಬಯಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದೀರಿ. ಪರಮ ಶಾಂತರಾಗಿರುವುದರಿಂದ, ಲೌಕಿಕರು ಕೇಳುವ ವರಗಳನ್ನು ನೀವು ಕೇಳಲಿಲ್ಲ. ನಿಮ್ಮ ಮನಸ್ಸಿನಲ್ಲಿ ಇರುವುದನ್ನು ತಿಳಿಯಲು ಈ ಪ್ರಶ್ನೆಯನ್ನು ಕೇಳಿದೆ. ನಿಮ್ಮ ಪ್ರಾಮಾಣಿಕತೆಯನ್ನು ಮೆಚ್ಚಿದೆ. ನೀವು ಕೋರಿದಂತೆ ನಿಮಗೆ ಮೋಕ್ಷವನ್ನು ಪ್ರಸಾದಿಸುತ್ತೇನೆ."

ನಂತರ ಮುನಿಗಳೇ ! ಕನ್ಯಾಮಾಸದಲ್ಲಿ ಬ್ರಹ್ಮ ದೇವನು ನನಗೆ ಒಂದು ಮಹೋತ್ಸವಗಳನ್ನು ಆಯೋಜಿಸಲು ಎಲ್ಲಾ ಸಿದ್ಧತೆಗಳನ್ನು ಪೂರ್ಣಗೊಳಿಸಿದ್ದಾನೆ. ಚತುರ್ಮುಖನ ಸಂಕಲ್ಪವನ್ನು ಪೂರೈಸುವ ಸಲುವಾಗಿ, ಭೂವಾಸಿಗಳು ನನ್ನ ಬಳಿಗೆ ಬರುವಂತೆ ಮಾಡುತ್ತೇನೆ. ಭಕ್ತಿಯಿಂದ ಸೇವೆ ಮಾಡುವವರೆಗೆ ವರಗಳನ್ನು ನೀಡುತ್ತೇನೆ. ನನ್ನ ಲೀಲೆಗಳನ್ನು ಕೇಳುವ ಮತ್ತು ಭಕ್ತಿಯಿಂದ ಸೇವೆ ಮಾಡುವವರಿಗೆ ವರಗಳನ್ನು ನೀಡುತ್ತೇನೆ. ಅಂತಹ ಜನರು ಹತ್ತಿರದಲ್ಲಿರಲಿ ಅಥವಾ ದೂರದಲ್ಲಿರಲಿ ಅವರು ಕೋರಿಕೆಗಳನ್ನು ಖಂಡಿತವಾಗಿಯೂ ಈಡೇರಿಸುತ್ತೇನೆ. ಕಷ್ಟಕಾಲದಲ್ಲಿ ಅವರ ನೆರಳಾಗಿದ್ದು, ಅವರ ನಂಬಿಕೆಯನ್ನು ಹೆಚ್ಚಿಸಿ, ಅವರನ್ನು ರಕ್ಷಿಸುತ್ತೇನೆ. ಹಾಗೆಯೇ, ಮರಣದ ನಂತರ, ಅವರಿಗೆ ಮೋಕ್ಷವನ್ನು ನೀಡುತ್ತೇನೆ" ಎಂದು ಸ್ವಾಮಿ ಹೇಳಿದನು.

ಹರಿನುಡಿಗಳನ್ನು ಕೇಳಿದ ಮುನಿಗಳು ತುಂಬಾ ಸಂತೋಷಪಟ್ಟರು. ಶೇಷಾದ್ರಿಯ ಮೇಲೆ ಐದು ವರ್ಷಗಳ ಕಾಲ ನೆಲೆಸಿದರು. ಐದು ವರ್ಷಗಳ ನಂತರ ಸ್ವಾಮಿಯು, "ಮುನಿಗಳೇ ! ನೀವು ಇನ್ನೂ ಇಲ್ಲಿಯೇ ಏಕೆ ಇರುವಿರಿ? ನಿಮ್ಮ ನಿಮ್ಮ ಆಶ್ರಮಗಳಿಗೆ ತೆರಳಿ" ಎಂದು ಅನುಮತಿಸಿದರು.

ಮುನಿಗಳು ಶ್ರೀ ಭೂನಿಲಾದಿ ಸತಿಯರೊಂದಿಗಿರುವ ಶ್ರೀ ವೆಂಕಟೇಶ್ವರನಿಗೆ ನಮಸ್ಕರಿಸಿದರು. ಸ್ವಾಮಿ ಸನ್ನಿಧಾನ ಬಿಟ್ಟು ಹೋಗಲು ಮನಸ್ಸಾಗದೇ ಅಲ್ಲಿಯೇ ಸ್ವಲ್ಪ ಕಾಲ ತಂಗಿದರು. ಸ್ವಾಮಿ ಮುಖಾರವಿಂದವನ್ನು ಕಣ್ಣಾರೆ ದರ್ಶಿಸಿ,ಆನಂದಬಾಷ್ಪವನ್ನು ಸುರಿಸುತ್ತಾ ಮುಂದೆ ಹೆಜ್ಜೆ ಹಾಕುತ್ತಾ ಮತ್ತೇ ಹಿಂತಿರುಗಿ ನೋಡುತ್ತಾ ತನ್ಮಯತೆಯಿಂದ ಹೋಗಲಾಗದೇ ಇರುವುದನ್ನು ನೋಡಿ,ಸ್ವಾಮಿಯು ಮುನಿಗಳಿಗೆ, "ಪರಮ ಶ್ರೇಷ್ಠರೇ! ನಾನು ನಿರ್ಗುಣ ಬ್ರಹ್ಮನಾಗಿದ್ದರೂ, ಸಾಮಾನ್ಯ ಜನರನ್ನು ರಕ್ಷಿಸಲು ನಾನು ಸಗುಣ ವಿಲಾಸನಾಗುತ್ತೇನೆ. ಆದ್ದರಿಂದ ನಾನು ಇಲ್ಲೇ ಇರುವಂತೆ ಇರುತ್ತೇನೆ. ಆದರೆ ಎಲ್ಲೆಡೆ ಇರುತ್ತೇನೆ. ಆದ್ದರಿಂದ ವಿವೇಕಿಗೆ ನನ್ನ ಅಗಲಿಕೆಯ ನೋವು ಇರುವುದಿಲ್ಲ. ನನ್ನ ವಿಮಲ ಸ್ವರೂಪವನ್ನು ಭಾವಿಸುವವರಿಗೆ ಯಾವಾಗಲೂ ಹತ್ತಿರವಾಗಿರುತ್ತೇನೆ. ನೀವು ಸಹ ಅಂತಹ ಪರಿಶುದ್ಧ ಚಿತ್ತದಿಂದ ನನೊಂದಿಗೆ ಇದ್ದು, ಈಗ ಪವಿತ್ರ ನೈಮಿಷಾರಣ್ಯಕ್ಕೆ ತೆರಳಿ" ಎಂದು ಅನುಮತಿಸಿ, ಭಗ ವಂತನು ಮೌನ ಮುದ್ರನಾಗಿ ಶಿಲಾರೂಪ ತಳೆದನು.

ನೋಡು ನೋಡುತ್ತಿದ್ದಂತೆ ಶಿಲಾರೂಪನಾದ ಭಗವಂತನ ಸರ್ವಾವಯವ ಸೌಂದರ್ಯವನ್ನು ಆಶ್ಚರ್ಯದಿಂದ ದರ್ಶಿಸಿದ ಮುನಿಗಳು ಭಗವಂತನ ಸ್ತೋತ್ರವನ್ನು ಸ್ತುತಿಸಿದರು.

**- ಮುಂದುವರೆಯುತ್ತದೆ.**



# ಆಳ್ವಾರುಗಳು ಕಂಡ ತಿರುವೇಂಗಡ

– ಎಂ. ಆರ್. ನರಸಿಂಹನ್

**ಕಳೆದ ಸಂಚಿಕೆಯಿಂದ**

ಯಾವಾಗಲೂ ಪರಿಮಳಿಸುವ ನಾಭಿ ಕಮಲದಲ್ಲಿ ಜನ್ಮವನ್ನು ಕಂಡುಕೊಂಡ ಬ್ರಹ್ಮನೂ, ತ್ರಿನೇತ್ರನಾದ ರುದ್ರನೂ ನಿನ್ನ ಪಾದಗಳ ಮೇಲೆ ಕಮಲಗಳನ್ನಿಟ್ಟು ಸ್ತೋತ್ರ ಮಾಡುವ ಪವಿತ್ರ ತಾಣ ವೇಂಗಡ. ಅಂತಹ ತಿರುಮಲೆಗೆ ಹೋಗಿ ತನ್ನ ಸ್ವಭಾವದಿಂದಲೇ ಪಾಪ ಪರಿಹಾರ ಮಾಡುವ ಮಹಿಮೆಯನ್ನುಳ್ಳ ಅದನ್ನು ಆಶ್ರಯಿಸಿರಿ (42) ಚಂದ್ರನನ್ನು ಜಟೆಯಲ್ಲಿ ಧರಿಸಿದ ಶಿವನೂ, ಬ್ರಹ್ಮನೂ ತಾವೇ ಛತ್ರಿಯನ್ನು ತೆಗೆದುಕೊಂಡು ಹೋಗಿ ಗಗನ ಚುಂಬಿಯಾದ ಉತ್ತರ ತಿರುವೇಂಗಡ ಶಿಖರದಲ್ಲಿ ನೆಲಸಿದ ಸ್ವಾಮಿಗೆ ಸಾಯಂಕಾಲದ ರಕ್ಷೆಯನ್ನು ಸಮರ್ಪಿಸಲು ಬಂದಿದ್ದಾರೆ. ಇದಿಗೋ (ಸಾಯಂಕಾಲದ ನಿವಾಳಿಸುವ ಪಂಜಿನ ಆರತಿಗೆ "ಅಂದಿಕ್ಕಾಪ್ಪು" ಎನ್ನುತ್ತಾರೆ) (43) ಮಡಿಲಿನಲ್ಲಿ ಇಟ್ಟುಕೊಳ್ಳುವಂತಹ ಎಳೆ ಕೂಸಿನಂತೆ ಬ್ರಹ್ಮನ ಮಡಿಲಿನಲ್ಲಿದ್ದ ಸ್ವಾಮಿ ವರವನ್ನು ಕೇಳಲು ಬಂದ ರಾವಣನ ತಲೆಗಳನ್ನು ಎಣಿಸಿ ಇವನಿಗೆ ವರವನ್ನು ಕೊಡಬೇಡವೆಂದು ಎಚ್ಚರಿಸಿ ಅಂತರ್ಧಾನನಾದನು. ಅಂತಹವನೇ ವೇಂಗಡದ ಅಧಿಪತಿ. ಯೌವ್ವನವಿರುವಾಗಲೇ ಅಲ್ಲಿಗೆ ಹೋಗಿ ಅವನನ್ನು ದರ್ಶಿಸಿ ಕೃತಾರ್ಥರಾಗಿರಿ(44) ಆಶ್ರಯಿಸಲು ಬಂದವರು ಪರಮಾತ್ಮನ ಚರಣದಲ್ಲಿ ಪುಷ್ಪ ವನ್ನಿರಿಸಿ ಮಂಗಳಾಶಾಸನ ಮಾಡಿ ಕತ್ತರಿಸಿದ ಮರದಂತೆ ನಿಶ್ಚಲವಾಗಿ ಅಲ್ಲಿಯೇ ನೆಲಸಿ ಸರ್ವ ದೇಶಗಳಲ್ಲಿಯೂ ಪ್ರಕಾಶಿಸುವ ಸರ್ವಾಧಿಕನಾಗಿ ನಿಂತಿರುವವನೇ ಈತ. ತಂಪಾದ ಕಾಲುವೆಗಳಿಂದ ಕೂಡಿದ ವೇಂಗಡಾದ್ರಿಯು ನಿತ್ಯಸೂರಿಗಳಿಗೂ, ಭೂಲೋಕ ನಿವಾಸಿಗಳಿಗೂ ಕೂಡಿ ನಿಧಿಯೋಪಾದಿ ಇದೆ (45) "ಅಂದವಾದ ಚಂದ್ರನನ್ನು ಸರ್ವೇಶ್ವರನಾದ ವೇಂಗಡದೊಡೆಯನಿಗೆ ದೀಪವನ್ನಾಗಿ ಮೇಲೆ ಹಿಡಿದು ಅಲಂಕಾರ ಮಾಡುವೆನು" ಎಂದು ಚಂದ್ರನನ್ನು ಸೊಂಡಿಲಿನಿಂದ ಎತ್ತಿದ ಆನೆಯನ್ನು ಎಲ್ಲ ಕಡೆಯಿಂದಲೂ ಬೇಡರು ಬೇಟೆಯಾಡಿ ಕೊಲ್ಲಲು ಸುತ್ತುವರಿಯಲು, ಅದರ ಕೈಂಕರ್ಯ ಬುದ್ಧಿಯನ್ನು ಕಂಡ ಕುರವರು ಅದನ್ನು ರಕ್ಷಿಸಲು ಎತ್ತರವಾದ ಬಿಲ್ಲು ಬಾಣಗಳೊಂದಿಗೆ ಬೇಡರನ್ನು ಸುತ್ತುವರಿಯುವ ವೇಂಗಡವೇ. ಈ ಲೋಕದ ಜನರೆಲ್ಲಾ ನರ್ತಿಸುತ್ತಾ ಪ್ರದಕ್ಷಿಣೆ ಮಾಡುವ ಪವಿತ್ರ ತಾಣವೇ! ಆ ಜನರು ನಿಜವಾಗಿಯೂ ಧನ್ಯರೇ ಸರಿ. (46)ವ್ಯಾಳಿಯನ್ನೂ, ಬಲಿಷ್ಠವಾದ ಸಿಂಹವನ್ನೂ, ಚಿನ್ನವನ್ನೂ, ವಜ್ರ ವೈಢೂರ್ಯಗಳನ್ನು ಹೂ, ವೃಕ್ಷಗಳನ್ನೂ ಕೊಚ್ಚಿಸಿಕೊಂಡು ಬರುವ ಪ್ರವಾಹದ ನದಿಗಳನ್ನುಳ್ಳ ಮತ್ತು ಕಾಡುಗಳ, ಕಪಿಗಳ,ಬೇಡರುಗಳನ್ನು ಹೊಂದಿದ ವೇಂಗಡವು ವಿಲಕ್ಷಣವಾದ ಮಣಿವರ್ಣನ ಊರು ಆಗಿದೆ. (47) ನಿತ್ಯ ಸೂರಿಗಳು ತಮಗೆ, ಭಕ್ತಿಯಿಂದ ಪ್ರಾಪ್ಯವೆಂದು ತಿಳಿದು, ಆಶ್ರಯಿಸುವ

ಜಾಗ ವೇಂಗಡ. ನಿಶ್ಚಯವಾಗಿಯೂ ಇದು ಪಾಪವನ್ನೂ, ವ್ಯಾಧಿಯನ್ನೂ ಹೋಗಲಾಡಿಸುವುದು. ರಾಕ್ಷಸರನ್ನು ನಾಶ ಪಡಿಸಲು ತನ್ನ ಕೈಯ್ಯಲ್ಲಿ ಚಕ್ರವನ್ನು ಹಿಡಿದು ದೇವತೆಗಳನ್ನು ಸಲಹಿದ ಸ್ವಾಮಿಯ ಶ್ರೀಗಿರಿಯೂ ಇದೇ (48) ಮಹಿ ಮಾನ್ವಿತರಾಗಿ ಪರಮ ಪದವನ್ನು ಆಳಲು ಆಶೆಪಡುವವರು ವೇಂಗಡದೊಡೆಯನ ಪಾದದಲ್ಲಿ ಅನೇಕ ಪುಷ್ಪಗಳನ್ನು ಸಮರ್ಪಿಸುತ್ತಾರೆ. ಭಗವಂತನ ಮನೋಭಿ ಪ್ರಾಯವನ್ನರಿತು ಅದರಂತೆಯೇ ಪ್ರೇಮದಿಂದ ಅವನಿಗೆ ದಾಸ್ಯ ವೃತ್ತಿಯನ್ನು ಮಾಡುವ ಭಾಗವತರ ದಾಸರಾಗುವರು. ಇನ್ನೂ ಹೆಚ್ಚಿನ ಮೇಲ್ಮೆಯಿಂದ ಬಾಳುವರು. (81)

ಈ ಆಳ್ವಾರ್ ವೇಂಗಡವನ್ನು ನೋಡಬೇಕೆಂಬ ಹಂಬಲವನ್ನು 34,39,40,41,42,ಮತ್ತು 48 ನೇ ಪಾಶುರ ಗಳಲ್ಲಿ ತೋಡಿಕೊಂಡಿದ್ದಾರೆ. 39 ನೆಯ ಪಾಶುರದಲ್ಲಿ ಜಲ ಪಾತದಲ್ಲಿ ಕೊಚ್ಚಿ ಬರುವ ವಜ್ರ, ವೈಢೂರ್ಯಾದಿಗಳನ್ನು ಕಂಡು ಆನೆ ಭಯಪಟ್ಟು ಓಡುವುದು, ಹಾವು ಭಯದಿಂದ ಹುತ್ತವನ್ನು ಸೇರುವುದೂ ಈ ದೃಶ್ಯಗಳು ಪೊಯ್ಗೈಯ್ ಆಳ್ವಾರರ ವರ್ಣನೆಯ ಬೇರೆ ರೂಪವಾಗಿದೆ.

'ಹೇಳಿದರೆ ವೇಂಗಡವನ್ನೇ ಹಾಡುವೆ ' ಎನ್ನುವ ಪೇಯಾ ಳ್ವಾರ್ ನಾಯಕೀಭಾವ ಇಲ್ಲಿ ಅದೇ ರೀತಿಯಿಂದ ಆರಂಭ ವಾಗುವ ಪಾಶುರದೊಂದಿಗೆ, ಭಾವದೊಂದಿಗೆ ಸಾಮ್ಯ ಗೊಳ್ಳುತ್ತದೆ. ಶ್ರವಣ ನಕ್ಷತ್ರದ ಜಾತ್ರೆ ಮೊದಲಾಳ್ವಾರ್ ಜಾತ್ರೆ ಯೊಂದಿಗೆ ಹೋಲಿಕೆಗೊಳ್ಳುತ್ತದೆ. ಆನೆಯನ್ನು ಆಕ್ರಮಿಸಿದ ಬೇಡರ ಜೊತೆ ಕುರವರು ಆನೆಯ ರಕ್ಷಣೆಗಾಗಿ ಶ್ರಮಿಸಿದ ಚಿತ್ರ ತಲಸ್ಪರ್ಶಿಯಾಗಿದೆ. ಇವರ ತಿರುವೇಂಗಡ ವಿಷಯವಾದ ಪಾಶುರಗಳಲ್ಲಿ ಇದೊಂದೇ ಅತ್ಯಂತ ಆಕರ್ಷಕವಾಗಿದೆ ಎನ್ನ ಬೇಕು.

ಬೇಡರ, ಕುರವರ ಯುದ್ಧವನ್ನೂ, ಪಲ್ಲವರಿಗೂ, ಬೆಟ್ಟದ ಮೂಲನಿವಾಸಿಗಳಾದ ಕುರವರಿಗೂ ಆದ ಯುದ್ಧ ವೆಂಬುದಾಗಿ ಕೆಲವರು ಗುರುತಿಸುತ್ತಾರೆ. ಆದರೆ ಪಲ್ಲವರು ಪ್ರಬಲರಾದದ್ದು ನರಸಿಂಹವರ್ಮನ ಕಾಲದಲ್ಲಿ, ನರಸಿಂಹ ವರ್ಮನ ಕಾಲ ಮೊದಲಾಳ್ವಾರ್ ಕಾಲ, ಇವನಿಗೂ ಮೊದ ಲಿನವನು ಮಹೇಂದ್ರವರ್ಮ ! ಆದ್ದರಿಂದ ಈ ಯುದ್ಧ ಈ ಇಬ್ಬರ ಕಾಲದಲ್ಲಿ ನಡೆದಿರಲಿಕ್ಕೆ ಸಾಧ್ಯವಿಲ್ಲವೆನ್ನಬೇಕು. ಮಹೇಂದ್ರವರ್ಮನ ಕಾಲದಲ್ಲಿ ಈ ಭಾಗದಲ್ಲಿದ್ದ ಶಾಕ್ತೇಯ, ಜೈನ, ಬೌದ್ಧರ ಹುಟ್ಟಡಗಿಸಿದನು ಎಂದು ಇತಿಹಾಸ ಸಾರು ತ್ತದೆ. ಇದೊಂದು ಪರಿಶೀಲನಾರ್ಹವಾದ ವಿಚಾರವೇ ಸರಿ!ಈ ಆಳ್ವಾರ್ ಪ್ರಕೃತಿ ಚಿತ್ರಣಕ್ಕೆ ಅಷ್ಟಾಗಿ ಗಮನ ಕೊಟ್ಟಿಲ್ಲ. ಆದರೆ ಕೊಟ್ಟಿರುವ ಒಂದೆರಡು ಚಿತ್ರಗಳೇ ಮನೋಜ್ಞ. ಭಾವಪೂರಿತ ವಾಗಿದೆ.

ಮೊದಲಾಳ್ವಾರ್‌ಗಳು ಮತ್ತು ತಿರುಮಳಿಶೈ ಆಳ್ವಾರ್ ಅವರ ಭಾವುಕತೆ. ಶೈಲಿ, ವರ್ಣನೆ, ಪದ್ಯಗಳ ರಚನಾ ವಿನ್ಯಾಸ ಕೌಶಲ್ಯಗಳೆಲ್ಲ ಒಂದೇ ರೀತಿಯಲ್ಲಿ ಮೂಡಿಬಂದಿರುವುದು ಅಚ್ಚರಿಯ ವಿಷಯವಾಗಿದೆ. ಈ ಪಾಶುರಗಳ ಲಕ್ಷಣವೂ ವಿಚಿತ್ರವಾದದ್ದೇ ಸರಿ, ಕುರುಳ್ ವೃತ್ತದ ಎರಡು ಸಾಲುಗಳನ್ನೇ ನಾಲ್ಕು ಸಾಲಿಗೆ ಹೆಚ್ಚಿಸಿರುವ ಅಂಶ ನಾವು ಮನಗಾಣುತ್ತೇವೆ. ಮೊದಲಿನ ಒಂದೂವರೆ ಸಾಲು ಒಂದು ರೀತಿಯದಾದರೆ ಅದರ ಉತ್ತರ ರೂಪವೆನ್ನುವಂತೆ ಮುಂದಿನ ಎರಡು ಸಾಲು ಗಳು ರಂಜಿಸುತ್ತವೆ. ಇವು ಮೊದಲಿನ ಆಳ್ವಾರ್ ಪಾಶುರಗಳ ಲಕ್ಷಣ!

ನಾವಿನ್ನು ನಮ್ಮಾಳ್ವಾರ್ ಕೃತಿಗಳ ಅಧ್ಯಯನಕ್ಕೆ ಸಾಗೋಣ. ಇವರ ನಾಲ್ಕು ಕೃತಿಗಳು ನಾಲ್ಕು ವೇದಗಳನ್ನು ಪ್ರತಿನಿಧಿಸುತ್ತದೆಯಂತೆ. **'ತಿರುವಿರುತ್ತಂ'** ಋಗ್ವೇದ; ತಿರು ವಾಶಿರಿಯಂ ಯಜಸ್ಸು; **"ಪೆರಿಯತಿರುವಂದಾದಿ"** ಅಥರ್ವ **"ತಿರುವಾಯ್ಮೊಳಿ"** ಸಾಮವಂತೆ ತಿರುವಿರುತ್ತಂನಲ್ಲಿ ನೂರು ಪಾಶುರಃ ತಿರುವಾಶಿರಿಯಂನಲ್ಲಿ 87 ಪಾಶುರ; ಪೆರಿಯ ತಿರುವಂದಾದಿಯಲ್ಲಿ 87 ಪಾಶುರಃ ತಿರುವಾಯ್ಮೊಳಿಯಲ್ಲಿ 1102 ಪಾಶುರಗಳು ಇವೆ. ಇವುಗಳಲ್ಲಿ ತಿರುವಿರುತ್ತಂನಲ್ಲಿ 8 ಪಾಶುರಗಳೂ, ಪೆರಿಯತಿರುವಂದಾದಿಯಲ್ಲಿ 1 ಪಾಶುರವೂ ತಿರುವಾಯ್ಮೊಳಿಯಲ್ಲಿ ಮೊದಲೇ ಹೇಳಿರುವಂತೆ 47 ಪಾಶುರ ಗಳು ವೇಂಗಡವನ್ನು ಕುರಿತವು.

ಇಲ್ಲಿ ಇನ್ನೊಂದು ವಿಚಾರವನ್ನು ಪ್ರಸ್ತಾಪ ಮಾಡ ಬೇಕಾ ಗಿದೆ. ಈ ಪಾಶುರಗಳ ವಿಚಾರದಲ್ಲಿ ಮತ್ತೊಂದು ರೀತಿ ವ್ಯಾಖ್ಯಾನ ಮಾಡುವವರೂ ಇದ್ದಾರೆ. **'ಶೆಂದಮಿಳ್ ಪಾಡು ವಾರ್ ವಣಂಗುಂ ದೈವಂ'** ಎಂದು ರಾಮಾನುಜರು ಮೊದಲಾ ಳ್ವಾರ್‌ಗಳ ಮೂರು ತಿರುವಂದಾದಿಗಳನ್ನು ತಿರುಮಲೆಯ ಅಧ್ಯಯನೋತ್ಸವ ಕಾಲದಲ್ಲಿ ಅನುಸಂಧಾನ ಕ್ರಮದಲ್ಲಿ ಆದ್ಯತೆ ನೀಡಿದರು ಎನ್ನುವ ವ್ಯಾಜದಿಂದ ಇಡೀ 300 ಪಾಶುರ ಗಳನ್ನು ತಿರುಮಲೆಗೇ ಅಂಕಿತಗೊಂಡಿರುವುದು ಎಂದು ವಾದಿಸುತ್ತಾರೆ. ತಿ.ತಿ.ದೇ.,ಯವರು **'ಆಳ್ವಾರು'** ಮಂಗಳಾ ಶಾಸನ ಪಾಶುರಮುಲು ತಿರುಪ್ಪಲ್ಲಾಂಡ್ 1 ಪಾಶುರವೆಂಬು ದಾಗಿಯೂ,ತಿರುಪ್ಪಾವೈ ಒಂದು ಪಾಶುರವೆಂಬುದಾಗಿಯೂ ಸೇರಿಸಿದ್ದಾರೆ. ಇದರ ವಿಚಾರವನ್ನೂ ಇಲ್ಲಿ ಪ್ರಸ್ತಾಪ ಮಾಡು ವುದು ಸೂಕ್ತವೆನಿಸುತ್ತದೆ.

(ಮುಂದುವರೆಯುತ್ತದೆ.)

## ಕಳೆದ ಸಂಚಿಕೆಯಿಂದ

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ

- ಅನುವಾದ : ಶ್ರೀಮತಿ

ಮುಂದೆ ಭಗವದ್ರಾಮಾನುಜರು ಶ್ರೀವೇಂಕಟಾಚಲ ಯಾತ್ರೆ ಮಾಡುವಾಗ ಶ್ರೀಶೈಲಪೂರ್ಣರು, ಅನಂತಾಚಾರ್ಯರನ್ನು ಶ್ರೀವೇಂಕಟಾಚಲಪತಿ ಪ್ರಸಾದವಾದ ಮಾವಿನ ಹಣ್ಣನ್ನು ಕೈಯಲ್ಲಿ ಹಿಡಿದುಕೊಂಡು ಎದುರಲ್ಲಿ ದೀನರಾಗಿ ನಿಂತು ಭಗವದ್ರಾಮಾನುಜರಿಗೆ ಸಮರ್ಪಿಸಲು, ಅವರು ಆ ಹಣ್ಣನ್ನು ಸ್ವೀಕರಿಸಿ ಪ್ರಾಪ್ತಮಾತ್ರೇಣ ಭುಂಜಿಯಾತ್ ಪ್ರಸಾದಂ ಪಾವನಂ ಹರೇಃ (ಸಿಕ್ಕಿತೇ ಪವಿತ್ರವಾದ ಶ್ರೀ ಹರಿ ಪ್ರಸಾದ ಭುಂಜಿಸಲು) ಎನ್ನುವಂತೆ, ಆ ಹಣ್ಣನ್ನು ಅಂಗೀಕರಿಸಿ ಆ ಹಣ್ಣಿನ ಬೀಜಗಳನ್ನು ನೆಟ್ಟು, ನೀರೆರೆದು, ಅದು ಬೆಳೆದು ಫಲ ಪರ್ಯಂತವಾಗಿರಲು ಆ ಹಣ್ಣಿನ ಗಿಡದ ಸಂತಾನ ಪರಂಪರೆ ಪ್ರಾಪ್ತಿಯಾಗಿ ಆ ಮಾವಿನ ಹಣ್ಣಿನ ಮರ ವಿದ್ದ ಜಾಗದಲ್ಲಿ ಒಂದು ಗುಡಿ ಕಟ್ಟಿಸಿ ಶ್ರೀಭಗವದ್ರಾಮಾನುಜರನ್ನು ಅರ್ಚಾಮೂರ್ತಿಯಾಗಿ ಪ್ರತಿಷ್ಠಾಪಿಸಿ ಶ್ರೀ ವೇಂಕಟಾಚಲ ಯಾತ್ರೆ ಮಾಡುವ ಪರಮ ಭಾಗವತರ ಕೋರಿಕೆಯ ಮೇರೆಗೆ ಶೀತ-ತಾಪ-ವರ್ಷಭಾದೆಗಳ ನಿವರ್ತಕರಾದವುಗಳಾದ ಮಂಟಪಗಳನ್ನು ಹೊಂಡಗಳನ್ನು ಏರ್ಪಡಿಸಿ, ದೇವತಾಂತರ ಭಕ್ತರ ಮೂಲ ಸ್ಥಳಕ್ಕೆ ಒಂದೂ ತೊಂದರೆ ಬಾರದಂತೆ ತಿರುಮಲೆ ಪ್ರಾಂಗಣದಲ್ಲಿ ಹಿಂದೆ ಶ್ರೀ ಶೈಲಪೂರ್ಣರು, ಶ್ರೀಭಾಷ್ಯಕಾರರು, ಶ್ರೀಮದ್ರಾಮಾಯಣ ವನ್ನು ಪ್ರವಚನ ಮಾಡಿದ ಸ್ಥಳವಾದ ಶ್ರೀವೇಂಕಟಾಚಲಪತಿ ಪಾದಾರವಿಂದಗಳಲ್ಲಿ ನಮಿಸಲು ಸರ್ವಾರಿಷ್ಟ ನಿವಾರಣ ನಿಪುಣನಾದ ಲಕ್ಷ್ಮೀನರಸಿಂಹ ಸ್ವಾಮಿಯನ್ನು ಪ್ರತಿಷ್ಠಾಪಿಸಿ ಸ್ವಯಂವ್ಯಕ್ತವಾದ ಒಂದು ಶ್ರೀಗೋಪುರಕ್ಕೆ ಒಂಭತ್ತು ಅಂತಸ್ತುಗಳನ್ನು ನಿರ್ಮಿಸಲು ಸಂಕಲ್ಪ ಮಾಡಿರಲು ಆ ಕಾಲದಲ್ಲಿ ಸರಪತಿ ಅಸ್ತವಾಗಿರುವುದನ್ನು ಕಂಡು ಶಿಲಾದ್ವಾರದೊಂದಿಗೆ ಏಳು ದ್ವಾರಗಳು ಶಿಲ್ಪಸಿದ್ಧಗೊಂಡಿರಲು ಆ ವಿಧವಾಗಿ ಶಿಖರಗಳನ್ನೆಬ್ಬಿಸಿ ಕಂದಾಡೈ ರಾಮಾನುಜ ಅಯ್ಯಂಗಾರರು ಶ್ರೀ ಗೋಪುರವನ್ನು ಪೂರ್ತಿ ಮಾಡಿಸಿದನು.

ಮುಂದೆ ತೋಂಡಮಾನ ಚಕ್ರವರ್ತಿಗೆ ಸಾಕ್ಷಾತ್ಕಾರವೆಸಗಿದ ಪರಿಷದ್ವೇಂಕಟೇಶ್ವರನಿಗೆ ಅವರ ದರ್ಶನ ಸ್ಥಳದಂದು ಒಂದು ಮಂಟಪವನ್ನು ನಿರ್ಮಿಸಿ ಸ್ವಾಮಿಯ ಅನುಚರರಾದ ಅನಂತ, ಗರುಡ, ವಿಷ್ವಕ್ಸೇನಾದಿ ಪರಿವಾರದೊಂದಿಗೆ ಪ್ರತಿಷ್ಠಾಪನೆ ಮಾಡಿ, ಅವರು ಬಹಳ ದೂರವಲ್ಲದೇ (ಸ್ವಲ್ಪವೇ ದೂರದಲ್ಲಿ) ಅಪಕ್ವಪದಾರ್ಥಗಳನ್ನೇ ನಿವೇದಿಸುವಂತೆ, ಕಟ್ಟಳೆಯ ಹಾಕಿ ಶ್ರೀವೇಂಕಟೇಶ್ವರ ಸ್ವಾಮಿ



ದೇವಾಲಯದಲ್ಲಿ ಆಳ್ವಾರರು, ಭಗವದ್ರಾಮಾನುಜರು ಶ್ರೀಗೋದಾದೇವಿ ಪೂಜ್ಯರಿಗೆ ಶ್ರೀ ನಕ್ಷತ್ರ ಮಹೋತ್ಸವಗಳನ್ನು (ಜನ್ಮ ದಿನೋತ್ಸವಗಳನ್ನು) ಶ್ರೀಭಗವದ್ರಾಮಾನುಜರ ಸನ್ನಿಧಿಯಲ್ಲೇ ಜರುಗಿಸಲು, ಸಂಪಂಗಿ ಪ್ರದಕ್ಷಿಣ ಬೀದಿಯಲ್ಲಿ ದಕ್ಷಿಣ ದಿಕ್ಕಿನ ಆಗ್ನೇಯ ಮೂಲೆಯಿಂದ ಮೊದಲುಗೊಂಡು ಶಿಲಾಶಾಸನವನ್ನು ಬರೆಸಿ, ಇನ್ನು ಎಷ್ಟೋ ಧರ್ಮ ಕಾರ್ಯಗಳನ್ನು ಕೈಗೊಂಡರು. ತಿರುಪತಿಯಲ್ಲಿ ಶ್ರೀಗೋವಿಂದ ರಾಜಸ್ವಾಮಿ ದೇವಾಲಯಕ್ಕೆ ಬಲಭಾಗದಲ್ಲಿ ಭಗವದ್ರಾಮಾನುಜರಿಗೆ ಗೋಪುರ ಪ್ರಾಕಾರದಲ್ಲಿ ಒಂದು ಮಂಟಪವನ್ನು ಸಹಾ ನಿರ್ಮಿಸಿ ಶ್ರೀಭಗವದ್ರಾಮಾನುಜರ ಮೂಲ ವಿರಾಟವನ್ನು ಸಹಾ ಪ್ರತಿಷ್ಠಾಪನೆ ಮಾಡಿ ಒಳಗೆ ವಿರಾಜಿಸುವ ಭಗಾವದ್ರಾಮನುಜರ ಉತ್ಸವ ವಿಗ್ರಹವನ್ನು ಮೂಲ ವಿಗ್ರಹದ ಸನ್ನಿಧಿಗೆ ವಿಜಯವನ್ನು ಮಾಡಿಸಿದ್ದಾರೆ.

ಶ್ರೀಗೋವಿಂದರಾಜು ಸನ್ನಿಧಿಗೆ ಅಲಂಕಾರಿಕವಾಗಿ ವರ್ಷ ವಾತತಪನಿವಾರಕವಾಗಿ ಸ್ವಾಮಿಗೆ ಆಸ್ಥಾನ ಯೋಗ್ಯವಾದ ದಕ್ಷಿಣೋತ್ತರ ದಿಗ್ಮುಖವಾಗಿ ದ್ವಾರಪಾಲಕ ಮಂಟಪಕ್ಕೆ ಪೂರ್ವಕ್ಕೆ ವಿಶಾಲವಾದ ಒಂದು ಗರುಡ ಮಂಡಪವನ್ನು ನಿರ್ಮಿಸಿದ್ದಾರೆ.

ವಿಷ್ಣೋರ್ಥಾಮಂತರೇ ವಿಷ್ಣುರ್ಮೂರ್ಯಂತರ ಉಪಸ್ಥಿತೇ ।
ತಪ್ಯ ಪೂಜಾಂ ಪ್ರಕುರ್ವೀತ ಸಂಧ್ಯಯೋರ್ನ್ಯಾವ್ಯದಾಚರೇತ್ ॥

(ವಿಷ್ಣ್ವಾಲಯದಲ್ಲಿ ಕೈಗೊಳ್ಳುವ ವಿಷ್ಣುಮೂರ್ತಿ ವಿಗ್ರಹಕ್ಕೆ ಸಾಯಂಪ್ರಾತಃಸ್ಸಂಧ್ಯೆಗಳಲ್ಲಿ ಪೂಜೆಗಳನ್ನಿಲ್ಲಿಯೂ ನಡೆಸತಕ್ಕದ್ದು, ಬೇರಾವುದನ್ನೂ ಮಾಡಬಾರದು)

ಎಂದು ಸಾರುವ ವೈಖಾಸನ ವಚನಾನುಸಾರ ಮುಂದಿರುವ ಶ್ರೀ ಅನಂತ ಭಗವಂತನಿಗೆ ಏರ್ಪಡಿಸಿದ ಬಲಿಪೀಠ (ಗರುಡ) ಧ್ವಜಸ್ತಂಭಗಳನ್ನು ಕೊಂಡು ಬಂದು ಸಾಯಂಪಾತ್ರಃ ಸಂಧ್ಯಾಕಾಲಗಳಲ್ಲಿ ಆರಾಧನೆ ಮಾತ್ರವೇ ಜರುಗುವಂತೆ ಏರ್ಪಾಟು ಮಾಡಿ ಬಿಲ್ವಾರ್ಚನೋತ್ಸವಗಳನ್ನು ಒಂದೇ ಅಲ್ಲದೇ, ಶ್ರೀ ವೃಷಭ ಮಾಸ ತಿರುನಾಳ್‌ನಂದು ಶ್ರೀ ಮಿಥುನಮಾಸ ತಿರುನಾಳ್‌ನಂದು ಸಾಯಂಪ್ರಾತಃ ಕಾಲಗಳಲ್ಲಿ ಗೋವಿಂದರಾಜಸ್ವಾಮಿಯ ಜೊತೆಗೆ ಶ್ರೀಭಗವದ್ರಾಮಾನುಜರ ಆಶ್ರಯಾನುಗುಣಗಳೊಂದಿಗೆ ತೇರು ಬೀದಿಯಲ್ಲಿ ಮೆರವಣಿಗೆ ಚಾಮಲ ಚತ್ರಿಭಜಂತ್ರಗಳನ್ನು, ಉತ್ಸವಾದಿ ಸಮಯದಲ್ಲಿ ಗೋವಿಂದರಾಜಸ್ವಾಮಿಯೊಂದಿಗೆ ಶ್ರೀಮದ್ರಾಮಾನುಜರು, ಶ್ರೀ ಗೋದಾದೇವಿ ವಿಜಯವನ್ನು ಮಾಡಬೇಕೆಂದು, ಅವರಿಗೂ ಮೊದಲೂ ಶ್ರೀಭಗವದ್ರಾಮಾನುಜರು ನಿಯಮಿಸಿದ ರೀತಿಯಲ್ಲೇ ಶ್ರೀವೃಷಭ ಮಾಸೋತ್ಸವದಲ್ಲಿ ಆಳ್ವಾರು ತಿರುನಕ್ಷತ್ರ ಬರುವ ಕಾರಣ ಅವರು ಭಗವದ್ರಾಮಾನುಜರ ಜೊತೆಯಲ್ಲಿ ರಥಬೀದಿಯಲ್ಲಿ ಮೆರವಣಿಗೆ ಹೊರಡುವಂತೆ, ಅವರಿಗೂ ಮೊದಲು ಶ್ರೀವೈಷ್ಣವರ ಇಯಲ್‌ಗೋಷ್ಠಿಯನ್ನು ಅನುಸಂಧಾನ ಮಾಡುವಂತೆ, ಇಯಲ್‌ಗೋಷ್ಠಿ ನಡುವೆ ಏಕಾಂಗಿ ಶ್ರೀವೈಷ್ಣವರ ಕೈಯಿಂದ ಕೈಗೂಡಿಸಿಕೊಂಡು ಪುರೋಹಿತರೆಲ್ಲಾ ಸೇರಿ **'ಇಯಲ್'** ಅನುಸಂಧಾನ ಮಾಡುವಂತೆ, ಆಳ್ವಾರರೊಂದಿಗೆ ಪ್ರಬಂಧಗಾಯಕರ (ಆರೈಯರ್) ಕರಗಳಿಂದ ತಾಳಗಳಿಂದ ಸೇವಿಸುತ್ತಾ ಬರುವಂತೆ (ಕಂದಾಡೈ ರಾಮಾನುಜ ಅಯ್ಯಂಗಾರ್) ಏರ್ಪಾಟುಗಳಾದುವು.

**(ಮುಂದುವರೆಯುತ್ತದೆ)**

**ಶ್ರೀ ತಿರುಮಲ ರಸಪ್ರಶ್ನೆಯ ಉತ್ತರಗಳು**

01. **ವಿಶಾಖ**
02. **ಜ್ಞಾನಮಂಟಪ**
03. **ಬೀದರ್‌ನ ಮಂಗಳ ಪೇಟೆ**
04. **ನಾರದ**
05. **ಶ್ರೀ ಲಕ್ಷ್ಮೀ ನರಸಿಂಹ**
06. **ನಮ್ಮಾಳ್ವಾರ್**
07. **ಮಂತ್ರಾಕ್ಷತೆ, ಮಾವಿನಹಣ್ಣು**
08. **ಬ್ರಹ್ಮನ ಕಮಂಡಲದಿಂದ**
09. **32,000**
10. **ಪಾನಕ ನರಸಿಂಹ ದೇವಾಲಯ**
11. **ಭೇರುಂಡ**
12. **ದಾಸಸಾಹಿತ್ಯ**
13. **ಶೆಂಗಣ್‌ಮಾಲ್ ಪೆರುಮಾಳ್**
14. **ಸಹೋದರ ಸಂಬಂಧದಲ್ಲಿ**
15. **ಮಂಥರ**

# ಶ್ರೀ ಮದ್ರಾಮಾಯಣದಲ್ಲಿ ಹನುಮಂತ ದೇವರ ಪಾತ್ರ

– ಶ್ರೀಧರ ರಾಯಸಂ

ಮೂಲ ಶ್ರೀ ವಾಯುದೇವರ ಮೂರು ರೂಪಗಳೇ, ಹನುಮ, ಭೀಮ, ಮಧ್ವಾಚಾರ್ಯರು, ಮೂಲವಾಯುದೇವರು, ಕೂರ್ಮ ರೂಪದಿಂದ ಅಂಡೋದಕದಲ್ಲಿದ್ದು, ಜಗವ ಹೊತ್ತು ಶೇಷದೇವರನ್ನು ಹೊತ್ತಿರುವನೋ ಯಾರ ಬಲದಿಂದ ಯಾರನ್ನು ಹೊಂದಿಯೇ, ದೇವತೆಗಳು ಶ್ರೀಹರಿಯನ್ನು ಸೇರುವರೋ, ಆ ಮಹಿಮಾ ದೇವತೆಯೇ ವಾಯುದೇವರು.


ಶ್ರೀ ವಾಯುದೇವರು ಭಗವಂತನಾದ ಶ್ರೀಹರಿಯ ಬಲ ತೊಡೆಯಲ್ಲಿ ಆಸೀನರಾಗುವ ಸಹಭೋಗ ಪಡೆಯುವ ಅನುಗ್ರಹ ಪಡೆದು ಬ್ರಹ್ಮ ಪದವಿ ಪಡೆದ ಭಕ್ತ!!! ವಾಯುದೇವರು ಪ್ರತಿಜೀವಿಯಲ್ಲಿ 21600 ಸಲ ನಿರಂತರ ಹಂಸಮಂತ್ರ ಜಪಿಸುವರು. ಇವರಿಗೂ ಸಹ ಅನಂತಾನಂತ ರೂಪಗಳಿವೆ. ವಾಯುದೇವರು ಬೆಣ್ಣೆಗೆ ಅಭಿಮಾನಿ ದೇವತೆಗಳಾಗಿರುವರು. ಸಂಕರ್ಷಣ ಅವತಾರ ಶರೀರದ 32 ಲಕ್ಷಣಗಳುಳ್ಳ ದೇವತೆಯಾಗಿರುವರು. ಮಹತ್ವ ಶರೀರವಾಗಿದೆ. ಶ್ರೀಮಹಾಲಕ್ಷ್ಮೀದೇವಿಗಿಂತ ಕೋಟಿ ಗುಣಗಳಿಂದ ಕಡಿಮೆ ಇರುವರು. ಶ್ರೀಮಹಾಲಕ್ಷ್ಮೀ ಶ್ರೀ ಹರಿಗಿಂತ ಅನಂತಗುಣಗಳಿಂದ ಕಡಿಮೆ ಇರುವಳು, ಆದರೇ, ಕಾಲ, ದೇಶ ಒಂದೇ ಇರುವಳು. ನಿತ್ಯ ಮುಕ್ತಳು. ವಾಯುದೇವರು ಮೂರನೇ ಕಕ್ಷದಲ್ಲಿರುವರು. ಇವರ ಸಾಧನೆ 200 ಕಲ್ಪವಾಗಿರುತ್ತದೆ. ಮಹತತ್ವಕ್ಕೆ ಅಭಿಮಾನಿಯಾಗಿರುವರು. ಕೂರ್ಮರೂಪದಿಂದ ಹದಿನಾಲ್ಕು ಲೋಕಗಳನ್ನು ಹೊತ್ತಿರುವರು. ಗದೆಧಾರಿಯಾಗಿ, ನಮಸ್ಕಾರ ಅಭಯ ಹಸ್ತದ ರೂಪ ಹೊಂದಿರುವರು.

ಮೂಲ ವಾಯುದೇವರ ಪ್ರಥಮ ರೂಪವೇ ಹನುಮಂತ ದೇವರು.

ಹನುಮಂತದೇವರು (ಪ್ರಾಣದೇವರು) ಶಿಶುರೂಪದಲ್ಲಿ ಆಗಸದಲ್ಲಿ ಸೂರ್ಯ ಮಂಡಲಕ್ಕೆ ಹಾರಿ, ಆಗ ತಾನೇ ಉದಯಿಸಿದ ಸೂರ್ಯದೇವರನ್ನು ರಾಹು ಹಿಡಿಯಲು ಬಂದಾಗ, ರಾಹುವನ್ನು ನಿಗ್ರಹಿಸಲು ಹನುಮಂತನು ಹಾರಿದನೇ ಹೊರತು ಸೂರ್ಯದೇವನು ಹಣ್ಣು ಎಂದು ಭಾವಿಸಲಿಲ್ಲ! ಶ್ರೀರಾಮಚಂದ್ರನ ಪರಮ ಭಕ್ತನಾಗಿ ಶ್ರೀ ರಾಮಚಂದ್ರ ಆದೇಶಿಸಿದ ಆಜ್ಞೆಯಂತೆ ಸೀತಾನ್ವೇಷಣೆ ಮಾಡಿ ಮುಂದೆ ಬ್ರಹ್ಮಪದವಿ ಪಡೆದ ಭಾಗ್ಯಶಾಲಿ. ಕೇಸರಿ ಮತ್ತು ಅಂಜನಾದೇವಿಯ ಪುತ್ರನಾಗಿ, ಶ್ರೀರಾಮಚಂದ್ರನ ಸೇವೆ ಮಾಡಲು ಅನುವು ಮಾಡಿಕೊಟ್ಟ ದಂಪತಿಗಳು ಸಹ ಭಾಗ್ಯಶಾಲಿಗಳು. ಸಂಜೀವಿನಿ ಪರ್ವತವನ್ನು ಹೊತ್ತು ತಂದ ಮಹಾಭಕ್ತ ಆಂಜನೇಯ. ಕಿಷ್ಕಿಂದಾ ರಾಜ್ಯದ ಸುಗ್ರೀವಾದಿಗಳೊಂದಿಗೆ ಸೇತು ಬಂಧನ ಮಾಡಲು ಸಹಾಯ ಮಾಡಿದ ಮಹಾಭಕ್ತ. ವಾನರರ ಯೋಗಕ್ಷೇಮ ಪರಿಪಾಲನೆಯನ್ನು ಮಾಡಿದ ಚಿರಂಜೀವಿ ! ಶ್ರೀರಾಮಚಂದ್ರನು ಸುತ್ತುತ್ತಾ ವನವಾಸದಲ್ಲಿದ್ದಾಗ ಸೀತಾಮಾತೆಯನ್ನು ಹುಡುಕುತ್ತಾ, ಲಕ್ಷ್ಮಣನೊಂದಿಗೆ ಋಷ್ಯ ಮೂಕ ಪರ್ವತದ ತಪ್ಪಲಿಗೆ ಬರುವನು. ಆಗ ಅಲ್ಲಿದ್ದ ವಾನರರು, ಹನುಮಂತನೊಂದಿಗಿದ್ದ ಸುಗ್ರೀವಾದಿಗಳು, ಶ್ರೀ ರಾಮ, ಲಕ್ಷ್ಮಣರನ್ನು ಕಂಡು ಇವರು ವಾಲಿ ಕಡೆಯವರೆಂದು ಓಡಲು ಸಿದ್ಧರಾಗುವರು. ಅವರನ್ನು ತಡೆದು, ನಿಲ್ಲಿಸಿ, ಹನುಮಂತನು ಭಿಕ್ಷುಕ ವೇಷ ಧರಿಸಿ ಶ್ರೀರಾಮಚಂದ್ರನ ಹತ್ತಿರ ಬಂದು ಭಕ್ತಿಯಿಂದ ವಿನೀತ ಭಾವದಿಂದ ನಮಸ್ಕರಿಸಿ, ಸ್ತೋತ್ರ ಮಾಡಿ, ತನ್ನ ಹೆಗಲ ಮೇಲೆ ಕೂರಿಸಿಕೊಂಡು ಬರುವನು. ಇಂತಹ ಸನ್ನಿವೇಶವನ್ನು ತ್ರೈಲೋಕಾಚಾರ್ಯ ಶ್ರೀಮಧ್ವಾಚಾರ್ಯರು ತಮ್ಮ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ತಿಳಿಸಿದಂತೆ ಅಂಜನೇಯನ ಮಾತು ಕೇಳಿ ರಾಮಚಂದ್ರ ನಕ್ಕನು ಎಂಬ ಶ್ಲೋಕ ಬರೆದಿದ್ದಾರೆ. ಇದರ ಅರ್ಥ ವ್ಯಾಖ್ಯಾನವನ್ನು ಶ್ರೀ ವಾದಿರಾಜ ಗುರುಸಾರ್ವಭೌಮರು, ಭಾವಪ್ರಕಾಶಿಕಾ ವ್ಯಾಖ್ಯಾನದಲ್ಲಿ ವಿವರಣೆ ನೀಡಿದ್ದಾರೆ. ಹೇ ಹನುಮಂತಾ ನೀನು ಮೂಲ ರೂಪದಲ್ಲೂ ಹೀಗೆಯೇ ಸಕಲ ಜೀವರನ್ನು ನಿನ್ನ ಎಡ ಹೆಗಲ ಮೇಲೆ ಮತ್ತು ನನ್ನನ್ನು ಬಲ ಹೆಗಲ ಮೇಲೆ ಕೂಡಿಸಿಕೊಂಡು ಒಂದು ದೇಹದಿಂದ ಮತ್ತೊಂದು ದೇಹಕ್ಕೆ ಈ ಜೀವನನ್ನು ಪ್ರವೇಶ ಮಾಡುಸುತ್ತಿ. ಇದನ್ನೇ ಹುಟ್ಟು, ಸಾವು ಎಂದು ಜಗತ್ತು ಕರೆಯುವುದು. ಹೀಗಾಗಿ ಇದೇನು ಹೊಸದಲ್ಲ ಎಂಬುದಾಗಿ ಶ್ರೀರಾಮಚಂದ್ರ ನಕ್ಕನು. ಇದನ್ನು ಶ್ರೀಮಧ್ವಾಚಾರ್ಯರು ಹಸನ್ ಎಂಬ ಶಬ್ದದಿಂದ ನಿರ್ಣಯಿಸಿದ್ದಾ




ರೆಂದು ಶ್ರೀವಾದಿರಾಜರು ತಮ್ಮ ಭಾವಪ್ರಕಾಶಿಕಾ ವ್ಯಾಖ್ಯಾನದಲ್ಲಿ ತಿಳಿಸಿದ್ದಾರೆ. ಭಕ್ತ ಹನುಮಂತನು ಬಲ ಹೆಗಲ ಮೇಲೆಯೇ ಶ್ರೀರಾಮಚಂದ್ರನನ್ನು ಎಡ ಹೆಗಲ ಮೇಲೆ ತಮ್ಮನೊಂದಿಗೆ, ಶೇಷದೇವರ ಅವ ತಾರಿಯಾದ ಲಕ್ಷ್ಮಣನನ್ನು ಕೂಡಿಸಿಕೊಂಡು ಹೊರಟನು, ಇದರಲ್ಲಿ ಕ್ರಮ ವ್ಯತ್ಯಾಸ ಮಾಡಿಲ್ಲ ಎಂಬುದನ್ನು ರಾಮಾಯಣದಲ್ಲಿ ಕಾಣಬಹುದು. ಸುಂದರಕಾಂಡ ರಾಮಾಯಣದಲ್ಲಿ ಶ್ರೀವಾದಿ ರಾಜರು ಅದ್ಭುತ ಹಾಡನ್ನು ರಚಿಸಿ ಅದರಲ್ಲಿ ಆದಿ ಪ್ರಾಸ, ಅಂತ್ಯ ಪ್ರಾಸದ ಗೀತೆ ಸುಂದರವಾಗಿ ಭಕ್ತರಿಗೆ ನೀಡಿದ್ದಾರೆ. **“ಎಷ್ಟು ಸಾಹಸವಂತ ನೀನೇ ಬಲ ವಂತ ದಿಟ್ಟ ಮಾರುತಿ ಭಳಿ ಭಳೀರೇ ಹನು ಮಂತ”** ಎಂದು ಹಾಡಿ ಹೊಗಳಿದ ಶ್ರೀವಾದಿ ರಾಜರು ಹನುಮಂತ ದೇವರ ವೈರಾಗ್ಯ, ಧೈರ್ಯ, ಸಾಹಸ, ಸ್ವಾಮಿ ಭಕ್ತಿಯನ್ನು ಅತ್ಯಂತ ಅದ್ಭುತವಾಗಿ, ಹೃದಯ ತುಂಬಿ ಹಿಗ್ಗಿನಿಂದ ಕೊಂಡಾಡಿದ್ದಾರೆ. ಶ್ರೀವಾದಿರಾಜ ಗುರುಸಾರ್ವಭೌಮರು ಮೈಮರೆತು ಪುಳಕಿತರಾಗಿ ಹಾಡಿ, ಹನುಮಂತನ ಕಾರ್ಯ ಕ್ಷಮತೆ, ಶ್ರೀರಾಮಚಂದ್ರನ ಮೇಲಿರುವ ಅಪಾರ ಭಕ್ತಿಯನ್ನು ಸಹ ಅಭಿವ್ಯಕ್ತಿಗೊಳಿಸಿದ್ದಾರೆ. **“ದಾಸೋ ಹಂ ಕೌಸಲೇಂದ್ರ”** ಎಂದು ಹನುಮಂತ ದೇವರು ರಾವಣನಿಗೆ ತನ್ನ ಸ್ವಾಮಿ ಭಕ್ತಿಯನ್ನು ಪ್ರದರ್ಶಿಸಿ ದುದನ್ನು ಅದ್ಭುತ ಹಾಡಿನ ಮೂಲಕ ಚಿತ್ರಿಸಿದ್ದಾರೆ, ಮತ್ತೊಂದು ರಾಮಾಯಣದ ಪ್ರಸಂಗದಲ್ಲಿ ಶ್ರೀವಾದಿರಾಜರು ಅನೇಕ ಹೋಲಿಕೆ, ವರ್ಣನೆ, ಯುಕ್ತಿ, ಚಮತ್ಕಾರ, ಭಾವ, ರೂಪಕ ಬರೆದು ತಿಳಿ



ಸಿದ ಗೂಢಾರ್ಥ ಅವರ್ಣನೀಯ!! ಶ್ರೀರಾಮಚಂದ್ರ ಸೀತಾನ್ವೇಷಣೆಗೆ ಹನುಮಂತ ದೇವರಿಗೆ ತನ್ನ ಉಂಗುರ ವನ್ನು ಸೀತಾಮಾತೆಗೆ ಗುರುತಿಸಲು ನೀಡಿ ದಕ್ಷಿಣ ದಿಕ್ಕನಲ್ಲಿ ಹುಡು ಕಲು ಆಜ್ಞೆ ಮಾಡುವನು. ಆತನ ಆದೇಶದಂತೆ, ಲಂಕೆಯ ಅಶೋಕವನದಲ್ಲಿ, ಸೀತಾ ಮಾತೆಯನ್ನು ಕಂಡು ಮುದ ದಿಂದ ಶ್ರೀರಾಮಚಂದ್ರನ ಉಂಗುರ ಹನುಮಂತದೇವರು ಸಹ ನೀಡುತ್ತಾನೆ. ಹನುಮಂತ ದೇವರು ಸೀತಾಮಾತೆಯನ್ನು ಉದ್ದೇಶಿಸಿ, ಶ್ರೀರಾಮನ ಬಳಿಗೆ ಕರೆದೊಯ್ಯಲು ಕೇಳುತ್ತಾನೆ. ಆದರೇ ಸೀತಾಮಾತೆಯು ನಿರಾಕರಿಸುತ್ತಾ **“ಹೇ ಹನುಮಂತ ತನ್ನ ಪತಿ ಶ್ರೀರಾಮಚಂದ್ರ ಹೊರತು ಪಡಿಸಿ ಬೇರೆ ಯಾರಿಂದಲೂ ತನ್ನನ್ನು ರಕ್ಷಿಸಲು ಇಷ್ಟ ಪಡುವುದಿಲ್ಲ. ತನ್ನ ಅಪಹರಣದ ಅವಮಾನಕ್ಕೆ ಶ್ರೀರಾಮಚಂದ್ರ ಬಂದು ಸೇಡನ್ನು ತಪ್ಪದೆ ತೀರಿಸಿಕೊಳ್ಳಬೇಕೆಂದು”** ಹನುಮಂತನಿಗೆ ಹೇಳಿ ಕಳುಹಿಸುವಳು. ಸೀತಾಮಾತೆ ಕಂಡ ವಿಷಯವನ್ನು ಶ್ರೀರಾಮನಿಗೆ ಹೇಗೆ ಖಾತರಿಪಡಿಸಬೇಕೆಂದು ಯೋಚಿಸಿ, ಹನುಮಂತ ದೇವರು ಸೀತಾಮಾತೆ ತಿಳಿಸಿದ ಒಂದು ರಹಸ್ಯ, ಸಂದರ್ಭವನ್ನು ಹೇಳುತ್ತಾನೆ. ಇಂದ್ರ ಪುತ್ರನಾದ ಜಯಂತನ ದೇಹದಲ್ಲಿ ಕುರಂಗ ಎಂಬ ದೈತ್ಯಾವೇಶವಿದ್ದು, ಶಾಪಹೊಂದಿ ಕಾಗೆ ರೂಪವನ್ನು ಪಡೆದು, ಸೀತೆಯ ವಕ್ಷಃ ಸ್ಥಳವನ್ನು ಕುಕ್ಕಳು ಪ್ರಯತ್ನಿಸಿ ವನವಾಸದಲ್ಲಿದ್ದಾಗ ಅಲ್ಲಿಗೆ ಬರುವನು. ಶ್ರೀರಾಮಚಂದ್ರ ಮತ್ತು ಸೀತಾದೇವಿಯ ಏಕಾಂತದಲ್ಲಿಯ ಸಮಯವಾಗಿತ್ತು. ಸೀತಾಮಾತೆ ಎಷ್ಟು ಓಡಿಸಿದರೂ ಪುನಃ ಕಾಗೆ ಬಂದು ಕುಕ್ಕುತ್ತದೆ. ಸ್ವಲ್ಪ ಸಮಯ ಕಾಗೆ ಬರುವುದು ನಿಂತಾಗ ವಿಶ್ರಾಂತಿಗೆ ರಾಮ ದೇವರು ಸೀತಾ ತೊಡೆಯ ಮೇಲೆ ಮಲಗುವನು, ಮತ್ತೆ ಬಂದ ಕಾಗೆ ಪುನಃ ಸೀತಾ ದೇವಿಯ ವಕ್ಷಃಸ್ಥಳವನ್ನು ಕುಕ್ಕಲು ಪ್ರಾರಂಭಿಸಿದಾಗ, ರಕ್ತ ಕಣ ರಾಮದೇವರ ಮೇಲೆ ಬಿದ್ದು, ರಾಮಚಂದ್ರ, ಎಚ್ಚೆತ್ತು, ಕೋಪದಿಂದ ಕಾಗೆಗೆ ಪಕ್ಕದಲ್ಲಿಯೇ ಇದ್ದ ಹುಲ್ಲುಕಡ್ಡಿಯನ್ನು ಬ್ರಹ್ಮಾಸ್ತ್ರ ಮಾಡಿ ಕಾಗೆಯ ಮೇಲೆ ಪ್ರಯೋಗಿಸುತ್ತಾನೆ. ಆಗ ರಾಮಚಂದ್ರನಿಗೆ ಕಾಗೆ ಶರಣಾಗಿ, ನಮಸ್ಕರಿಸಿ ಅಪರಾಧವನ್ನು ಕ್ಷಮಿಸಲು ಬೇಡಿಕೊಳ್ಳುತ್ತಾನೆ. ಬ್ರಹ್ಮಾಸ್ತ್ರ ಬಿಟ್ಟಿದ್ದು ಸಹ ವ್ಯರ್ಥವಾಗದೆ ಕಾಗೆಯ ಒಂದು ಕಣ್ಣು ಹೋಗುತ್ತದೆ, ಕೊನೆಗೆ ರಾಮಚಂದ್ರ ಸೀತಾ ದೇವಿಯ ಕ್ಷಮೆ ಕೇಳಿ ಹಾರಿ ಹೋಗುತ್ತದೆ. ಈ ಸಂದರ್ಭದ ವಿಚಿತ್ರ ರಹಸ್ಯವನ್ನು ಶ್ರೀ ರಾಮದೇವರಿಗೆ ತಿಳಿಸಿದಾಗ, ಶ್ರೀರಾಮಚಂದ್ರದೇವರು ಹನುಮಂತ ದೇವರನ್ನು ನಂಬಿ ಮುದದಿಂದ ಪುನಃ ಸೀತಾಮಾತೆಯಿಂದ ತಂದ ಚೂಡಾಮಣಿ ಸಂತೋಷದಿಂದ ಸ್ವೀಕರಿಸುವನು. ಹನುಮಂತ ದೇವರು ಶ್ರೀರಾಮಚಂದ್ರ ದೇವರಿಗೆ ಅದನ್ನು ಭಕ್ತಿಯಿಂದ ಆತನ ಪಾದದಲ್ಲಿಟ್ಟು, ನಮಸ್ಕರಿಸುವನು. ಶ್ರೀವಾದಿರಾಜರು ಈ ವಿಷಯ ಪ್ರಸಂಗವನ್ನು ಅತ್ಯಂತ ಭಾವನಾತ್ಮಕವಾಗಿ ಚಿತ್ರಿಸಿದ್ದಾರೆ. ಶ್ರೀರಾಮಚಂದ್ರ ತನ್ನ ಉಂಗುರವನ್ನೇ ಏಕೆ ಸೀತಾ ಮಾತೆಗೆ ನೀಡಿದ ಎಂಬುದಕ್ಕೆ ಅವರಿಬ್ಬರ ಅಂತರಿಕ ಭಾವನೆಯನ್ನು ಅತ್ಯಂತ ಚಮತ್ಕಾರ ದಿಂದ ವರ್ಣಿಸಿದ್ದಾರೆ. ಸೀತಾಮಾತೆಗೆ ಸದಾ ತನ್ನ ಅಭಯ ಸೂಚಕವಿರುವಂತೆ, ತನ್ನ ಕೈ ಯಲ್ಲಿದ್ದ ಉಂಗುರ ನೀಡಿದನೆಂದು, ಅಂದರಂತೆ ಸೀತಾಮಾತೆ ಮಹಾಲಕ್ಷ್ಮಿ ನೀಡಿದ ತನ್ನ ತಲೆಯ ಚೂಡಾಮಣಿ ನೀಡಿ ಸದಾ ತಾನು ಶ್ರೀರಾಮನಿಗೆ ಶರಣು ಎಂಬರ್ಥದಿಂದ ನೀಡಿದ ಳೆಂದು ಶ್ರೀವಾದಿರಾಜರು ಅವರ ಅಂತರ್ಯದ ಭಾವನೆಗಳನ್ನು ಅತ್ಯಂತ ಕಲಾತ್ಮಕವಾಗಿ ವರ್ಣಿಸಿದ್ದಾರೆ. ದ್ವಾಪರಯುಗದಲ್ಲೂ ಸಹ ಹನುಮಂತದೇವರು ಭೀಮಸೇನದೇವರಿಗೆ ಸೌಗಂಧಿಕಾ ಪುಷ್ಪ ತರುವ ಸಮಯದಲ್ಲಿ ತನ್ನ ನಿಜರೂಪ ಪ್ರದರ್ಶಿಸಿ ಪುಷ್ಪ ತರಲು ಅನುವು ಮಾಡಿ ಕೃಪೆ ತೋರಿಸಿ, ಅನುಗ್ರಹ ಮಾಡುವ ಪ್ರಸಂಗ ಅದ್ಭುತ! ಮಹಾಭಾರತ ಯುದ್ಧದ ಸಮಯದಲ್ಲಿ, ಅರ್ಜುನನ ರಥದ ಕಪಿಧ್ವಜನಾಗಿ ವಿಜಯಕ್ಕೆ ನಾಂದಿ ಹಾಡುತ್ತಾನೆ. ಶ್ರೀಮಧ್ವಾಚಾರ್ಯರು ಮೂಲ ವಾಯು ದೇವರ ಮೂರನೇ ಅವ ತಾರವಾಗಿ ವೇದಗಳನ್ನು

ಪ್ರತಿಪಾದ್ಯ ಮಾಡಿದ ಗುರುಗಳು. ಸುಂದರಕಾಂಡವೇ ಹನುಮಂತನ ಸ್ವಾಮಿ ಭಕ್ತಿ ಸೀತಾಮಾತೆಯ ಸಂದರ್ಶನ ರಾವಣನ ಭೇಟಿ ಲಂಕಾದಹನ, ಸವಿಸ್ತಾರವಾಗಿ ವಿವರಿಸಿದ ಮಹಾಕಾವ್ಯರಾಮಾಯಣ ರಾಮ ರಾವಣರ ಯುದ್ಧದ ಸಮಯದಲ್ಲಿ ಹನುಮಂತ ದೇವರ ಪರಾಕ್ರಮ, ಯುಕ್ತಿ ಅಸಾಮಾನ್ಯ ರಾವಣನ ಸಹೋದರ ಅಹಿರಾವಣ ಮಹಾಪರಾಕ್ರಮಿಯಾಗಿ ತನ್ನ ಮಾಂತ್ರಿಕ ಶಕ್ತಿ ಉಪಯೋಗಿಸಿ ರಾಮಚಂದ್ರ, ಲಕ್ಷ್ಮಣರನ್ನು ಅಪಹರಿಸಿ ಪಾತಾಳಲೋಕಕ್ಕೆ ಕರೆದೊಯ್ಯುತ್ತಾನೆ. ಇಲ್ಲಿ ರಾಮ, ಲಕ್ಷ್ಮಣರು ಆಂಜನೇಯನ, ಜಾಣ್ಮೆ ಯುಕ್ತಿ ಪೌರುಷ ಅಹಿರಾವಣನ ಸಂಹಾರ ಕ್ಕಾಗಿ, ನಟನೆಯನ್ನು ಜನರಿಗಾಗಿ ಸಹ ಮಾಡಿ, ಪಾತಾಳದಲ್ಲಿರುವರು. ಅಲ್ಲಿ ಐದು ದಿಕ್ಕಿನಲ್ಲಿ ಐದು ದೀಪಗಳನ್ನು ಈ ಮಹಿರಾವಣ ಬೆಳಗಿಸಿದ್ದ. ಯಾರೂ ಐದೂ ದಿಕ್ಕಿನ ದೀಪಗಳನ್ನು ಒಂದೇ ಬಾರಿ ಆರಿಸುತ್ತಾರೋ, ಆಗ ಅಹಿರಾವಣನ ಮರಣವಾಗುತ್ತದೆ ಎಂಬ ವರವನ್ನು ಪಡೆದಿದ್ದ ಆಂಜನೇಯ ಪಾತಾಳಕ್ಕೆ ಬಂದು ಪಂಚಮುಖಿ ರೂಪಗಳನ್ನು ಪಡೆದನು.



ಪೂರ್ವದಿಕ್ಕಿಗೆ ವಾನರ ರೂಪ, ಪಶ್ಚಿಮಕ್ಕೆ ಗರುಡ ರೂಪ, ಉತ್ತರಕ್ಕೆ ವರಾಹ, ರೂಪ, ದಕ್ಷಿಣಕ್ಕೆ ನರಸಿಂಹ ರೂಪ, ಆಕಾಶಕ್ಕೆ ಹಯವದನ ರೂಪ ಪಡೆದು ಒಂದೇ ಬಾರಿಗೆ ಐದು ದೀಪಗಳನ್ನೂ ಆರಿಸಿ ಅಹಿರಾವಣನನ್ನು ಸಂಹರಿಸಿ, ರಾಮ, ಲಕ್ಷ್ಮಣರನ್ನು ವಾಪಸ್ ಕರೆಸಿಕೊಂಡು ತನ್ನ ಸಾಹಸ ತೋರಿಸಿ ರಾಮಚಂದ್ರನ ಪ್ರೀತಿಗೆ ಪಾತ್ರನಾದನು ಮಹಾಭಕ್ತನಾದ ಹನುಮಂತದೇವರು. ರಾವಣನ ಸಂಹಾರವಾದ ಮೇಲೆ, ವಿಭೀಷಣನಿಗೆ ಲಂಕಾ ಪಟ್ಟಣದ ರಾಜನನ್ನಾಗಿ ಮಾಡಿದ ಶ್ರೀರಾಮಚಂದ್ರ, ಮತ್ತೊಂದು ಸನ್ನಿವೇಶದಲ್ಲಿ ಯುದ್ಧ ಸಮಾಪ್ತಿಯಾದ ಮೇಲೆ ರಾಮಚಂದ್ರನು ಅಚ್ಚರಿಪಟ್ಟು, ಎಲ್ಲಿ ವಾನರರು ಕಾಣುತ್ತಿಲ್ಲವೆಂದು ಆಂಜನೇಯನಿಗೆ ಪ್ರಶ್ನಿಸಿದ. ಆಂಜನೇಯ ವಾನರರನ್ನು ಹುಡುಕಲು ಬೃಹತ್ ಗಂಟೆಯ ಒಳಗಿದ್ದರು.

ಕುಂಭಕರ್ಣ ಯುದ್ಧದ ಸಮಯದಲ್ಲಿ, ಎಲ್ಲಾ ವಾನರರನ್ನು ಬೃಹತ್ ಗಂಟೆಯ ಒಳಗೆ ಮುಚ್ಚಿ ಯುದ್ಧ ಮಾಡಿದ್ದ ! ಆಂಜನೇಯ ಬೃಹತ್ ಗಂಟೆ ಹುಡುಕಿ, ವಾನರರನ್ನು ಕಾಪಾಡಿ ಬಿಡಿಸಿದ್ದ. ಆಂಜನೇಯ ಆ ಬೃಹತ್ ಗಂಟೆಯನ್ನು ಬಾಲಕ್ಕೆ ಕಟ್ಟಿಕೊಂಡು ಯುದ್ಧ ಮಾಡಿ ರಾವಣನ ಸೈನ್ಯವನ್ನು ಧ್ವಂಸ ಮಾಡಿದ್ದ. ಈ ಸನ್ನಿವೇಶದ ಕುರುಹಾಗಿ, ಶ್ರೀವ್ಯಾಸರಾಜರು ದಕ್ಷಿಣ ಭಾರತದಲ್ಲಿ 732 ಬಾಲದಲ್ಲಿ ಗಂಟೆಯಿರುವ ಮುಖ್ಯ ಪ್ರಾಣ ದೇವರನ್ನು ಪ್ರತಿಷ್ಠಾಪಿಸಿ, ಭಕ್ತರಿಗೆ ಪ್ರಾಣ ದೇವರ ಅನುಗ್ರಹ ಪಡೆಯಲು ಅನುವು ಮಾಡಿದ ಚಕ್ರವರ್ತಿಗಳ ರಾಜ ಗುರುಗಳು.

ಶ್ರೀ ರಾಮಚಂದ್ರ ಅಯೋಧ್ಯೆಗೆ ವಾಪಸ್ಸು ಬರುವ ಸಮಯದಲ್ಲಿ ನಂದಿಗ್ರಾಮದಲ್ಲಿ ನಾರು ಮಡಿಯುಟ್ಟ ಭರತನು ರಾಮಪಾದುಕೆಯೊಂದಿಗೆ ರಾಮನಿಗಾಗಿ ಕಾಯುತ್ತಿದ್ದನು. ಒಂದು ಕ್ಷಣ ತಡವಾದರೇ, ಅಗ್ನಿ ಪ್ರವೇಶ ಮಾಡಲು ಭರತ ಸಿದ್ಧನಾಗಿದ್ದ, ಇದನ್ನರಿತ ಶ್ರೀರಾಮಚಂದ್ರ, ಹನುಮಂತನನ್ನು ತನ್ನ ದೂತನನ್ನಾಗಿ ಕಳುಹಿಸಿ, ರಾಮ ಬಂದ ಎಂಬ ಸುದ್ದಿ ತಿಳಿಸು ಎಂದು ಹೇಳಿ ಕಳುಹಿಸಿದ (ಕಂಬ ರಾಮಾಯಣ) ಅದರಂತೆ ಹನುಮಂತ ದೇವರು ಸಿಹಿ ಸುದ್ದಿ ತಿಳಿಸಿ ಭರತನ ಸಂತಸಕ್ಕೆ ಕಾರಣನಾದನು. ಶ್ರೀರಾಮನ ಪಟ್ಟಾಭಿಷೇಕದ ಸಮಯದಲ್ಲಿ ಇಂದ್ರನು ನೀಡಿದ್ದ ಮುಕ್ತಾಹಾರವನ್ನು ಸೀತಾದೇವಿಗೆ ರಾಮನು ನೀಡಿ, ಯಾರು ನಿನಗೆ ಧೈರ್ಯಶಾಲಿಗಳು, ಯುಕ್ತಿವಂತರೋ ಅವರಿಗೆ ಮುಕ್ತಾಹಾರವನ್ನು ಕೊಡು ಎಂದು ಹೇಳಿ ದಾಗ, ಸೀತಾಮಾತೆ ತಡಮಾಡದೆ ಹನುಮಂತ ದೇವರಿಗೆ ನೀಡಿ ಆಶೀರ್ವದಿಸುವ ಸಂದರ್ಭ ಆವರ್ಣನೀಯ!! ಮುಂದೆ ಶ್ರೀರಾಮ ಚಂದ್ರ ಆಲಿಂಗನ ನೀಡಿದಾಗ ಹನುಮಂತ ದೇವರು ಸದಾ ನಿನ್ನಲಿ ಭಕ್ತಿಯಿರಲೆಂದು ಪ್ರಾರ್ಥಿಸುತ್ತಾರೆ. ಶ್ರೀರಾಮಚಂದ್ರನು ಹನುಮಂತ ದೇವರಿಗೆ ಮುದದಿ ಸಹಭೋಗ ನೀಡಿ ಬಲ ತೊಡೆಯಲ್ಲಿ ಆಸೀನವಾಗುವ ಪುಣ್ಯ ನೀಡುವನು. ಮಹಾಭಕ್ತನಾದ ಹನುಮಂತ ದೇವರಿಗೆ ಮುಂದೆ ಬ್ರಹ್ಮಪದವಿ ಸಹ ದೊರೆಯುತ್ತದೆ.

ಹೀಗೆ ಹನುಮಂತನ ಮತವೆ ಶ್ರೀ ಹರಿಯ ಮತವಾಗಿದೆ ಎಂದು ರಾಮಾಯಣದಲ್ಲಿ ಶ್ರೀವಾಲ್ಮೀಕಿ ಮಹರ್ಷಿಗಳು ಅತ್ಯಂತ ಸುಂದರವಾಗಿ ರಚಿಸಿದ ಈ ಮಹಾಕಾವ್ಯದಲ್ಲಿ ಶ್ರೀರಾಮನ ಆದರ್ಶ ಸೀತಾಮಾತೆಯ ಪತಿ ಭಕ್ತಿ ಹನುಮಂತದೇವರ ಸ್ವಾಮಿ ಭಕ್ತಿ, ವಿಧೇಯತೆ, ಪೌರುಷ ಚಾತುರ್ಯ ಭರತನ ಸೋದರ ಪ್ರೇಮ, ಸುಗ್ರೀವನ ಸಖ್ಯ, ಜಾಂಬುವಂತನ ಮಾರ್ಗದರ್ಶನ, ಲಕ್ಷ್ಮಣನ ಭ್ರಾತೃ ಪ್ರೇಮ ಮುಂತಾದವುಗಳ ನಿದರ್ಶನವನ್ನು ನಾವು ಅರಿಯಬಹುದು.

**ಬುದ್ಧಿರ್ಬಲಂ ಯಶೋಧೈರ್ಯಂ ನಿರ್ಭಯತ್ವಂ ಆರೋಗತಾ**
**ಅಜಾಡ್ಯಂ ವಾಕ್ಪಟುತ್ವಂಚ ಹನುಮತ್ಸ್ಮರಣಾದ್ಭವೇತ್॥**



# ಜುಲೈ 2025 ತಿಂಗಳ ರಾಶಿ ಫಲಗಳು



ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ
ಅನುವಾದ- ಕೆ.ಎನ್.ಎಸ್

**ಮೇಷ**
ಸಮಯಕ್ಕೆ ಸರಿಯಾಗಿ ಕೆಲಸಗಳನ್ನು ಪೂರ್ಣಗೊಳಿಸುವುದು ಧೈರ್ಯದಿಂದ ವ್ಯವಹಾರದಲ್ಲಿ ಯಶಸ್ಸು, ವೃತ್ತಿ ವಿಷಯಗಳಲ್ಲಿ ಪ್ರಗತಿ, ವೈಯುಕ್ತಿಕ ಲಾಭ, ಸ್ಥಾನಮಾನದಲ್ಲಿ ಏರಿಕೆ, ಹೇರಳವಾದ ಆರೋಗ್ಯ ಸಂಬಂಧಿಕರೊಂದಿಗೆ ಸ್ನೇಹ ಸಂಪತ್ತು.

**ವೃಷಭ**
ಒಂದು ನಿಖರವಾದ ಯೋಜನೆ ಇತರರನ್ನು ಒಳಗೊಳ್ಳುತ್ತದೆ, ಮತ್ತು ಉತ್ತಮ ಫಲಿತಾಂಶಗಳನ್ನು ಸಾಧಿಸುತ್ತದೆ ಮತ್ತು ಸಹೋದರತ್ವವನ್ನು ಉತ್ತೇಜಿಸಲಾಗುತ್ತದೆ. ನೀವು ಅವರಿಂದ ಒಳ್ಳೆಯ ಸುದ್ದಿಯನ್ನು ಕೇಳುವಿರಿ.

**ಮಿಥುನ**
ಕೆಲಸದಲ್ಲಿ ಕೆಲವು ಅಡೆತಡೆಗಳನ್ನು ಎದುರಿಸುವಿರಿ ನಿಮಗೆ ಇಷ್ಟವಿಲ್ಲದ ಸ್ಥಳಕ್ಕೆ ವರ್ಗಾವಣೆಯಾಗುವಿರಿ ನೀವು ಬಹಳಷ್ಟು ಹಣವನ್ನು ಖರ್ಚು ಮಾಡುತ್ತೀರಿ ಇತರರನ್ನು ಮೆಚ್ಚಿಸಲು ಪ್ರಯತ್ನಿಸುವಿರಿ.

**ಕರ್ಕಾಟಕ**
ಹೊಸ ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ಸ್ಥಳಾಂತರದ ಸಲಹೆಗಳಿವೆ ಶುಭ ಕಾರ್ಯಗಳಿಗಾಗಿ ಹಣ ಖರ್ಚು ಮಾಡಲಾಗುವುದು ವಿಷ ಜ್ವರ ಬರುವ ಸಾಧ್ಯತೆ ಇದೆ.

**ಸಿಂಹ**
ನೀವು ಕ್ರಿಯಾಶೀಲ ಸ್ವಭಾವ ಮತ್ತು ಆತ್ಮ ವಿಶ್ವಾಸವನ್ನು ಹೊಂದಿರುತ್ತೀರಿ. ಅಹಂಕಾರದಿಂದಾಗಿ ಇತರರಿಗೆ ತೊಂದರೆ ಉಂಟು ಮಾಡುವ ಸಾಧ್ಯತೆ ಇದೆ. ಇದು ನಿಮ್ಮ ವೈಯುಕ್ತಿಕ ಜೀವನದಲ್ಲಿ ಸಮಸ್ಯೆಗಳನ್ನು ಉಂಟು ಮಾಡುತ್ತದೆ.

**ಕನ್ಯೆ**
ಅಧಿಕಾರಿಗಳಿಂದ ನಿಮಗೆ ಬೆಂಬಲ ಸಿಗುತ್ತದೆ. ವೃತ್ತಿಪರ ವ್ಯವಹಾರಗಳಲ್ಲಿ ಮನ್ನಣೆ, ಕಲಾವಿದರಿಗೆ ಉನ್ನತ ಮಟ್ಟದ ಪ್ರಶಸ್ತಿಗಳು ಸಿಗುತ್ತವೆ. ವೃತ್ತಿಪರ ಕ್ಷೇತ್ರದಲ್ಲಿ ಸ್ಥಳೀಯರ ಹೆಸರು ಮತ್ತು ಮನ್ನಣೆ ಹೆಚ್ಚಾಗುತ್ತದೆ.

**ತುಲಾ**
ಲೇವಾದೇವಿದಾರರಿಗೆ ಎಚ್ಚರಿಗೆ ನೀಡಲಾಗುವುದು ಸರ್ಕಾರದಿಂದ ಅಡೆ ತಡೆಗಳು ಎದುರಾಗುತ್ತದೆ. ದೀರ್ಘಾವಧಿಯ ಯೋಜನೆಗಳನ್ನು ರೂಪಿಸಲಾಗುವುದು ದೂರದೃಷ್ಟಿಯಿಂದ ಅಪಾಯಗಳನ್ನು ತಪ್ಪಿಸಲಾಗುತ್ತದೆ.


**ವೃಶ್ಚಿಕ**
ಗೌರವ ಸನ್ಮಾನಗಳು ದೊರೆಯುತ್ತವೆ ಖ್ಯಾತಿ ಮತ್ತು ಪ್ರತಿಷ್ಠೆ ಹೆಚ್ಚಾಗುತ್ತದೆ. ನೀವು ಸಂಪ್ರದಾಯವಾದಿ ಎಂದು ಗುರುತಿಸಲ್ಪಡುತ್ತೀರಿ ದೇವಾಲಯದ ಟ್ರಸ್ಟ್ ಮಂಡಳಿಗಳ ಸದಸ್ಯರಾಗಲು ನಿಮಗೆ ಅವಕಾಶವಿದೆ.

**ಧನಸ್ಸು**
ಪತಿ - ಪತ್ನಿಯರ ನಡುವಿನ ಸಂಬಂಧಗಳು ಉತ್ತಮವಾಗಿರುತ್ತವೆ. ಅವರು ಉತ್ತಮ ಬೌದ್ಧಿಕ ಸಾಮರ್ಥ್ಯವನ್ನು ಹೊಂದಿರುತ್ತಾರೆ ಮತ್ತು ಅವರ ಯೋಜನೆಗಳು ಮತ್ತು ಯೋಜನೆಗಳನ್ನು ಪೂರ್ಣಗೊಳಿಸಲು ಸರ್ಕಾರ ಮತ್ತು ಪಾಲುದಾರರ ಬೆಂಬಲವನ್ನು ಹೊಂದಿರುತ್ತಾರೆ.

**ಮಕರ**
ಯೋಗಕ್ಷೇಮ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಪ್ರತಿಕೂಲತೆಯನ್ನು ನೀವು ಪರಿಣಾಮಕಾರಿಯಾಗಿ ನಿವಾರಿಸುವಿರಿ. ನೀವು ಸವಾಲುಗಳನ್ನು ಸ್ವೀಕರಿಸುತ್ತೀರಿ ಮತ್ತು ಅವುಗಳನ್ನು ಪ್ರಾಯೋಗಿಕವಾಗಿ ಯಶಸ್ವಿಯಾಗಿ ಪೂರ್ಣಗೊಳಿಸುತ್ತೀರಿ.

**ಕುಂಭ**
ನಿಮ್ಮ ಮಾತಿನ ಚಕಮಕಿಯಿಂದಾಗಿ ಇತರರೊಂದಿಗೆ ವಾದಕ್ಕೆ ಇಳಿಯುವ ಸಂದರ್ಭಗಳನ್ನು ತಪ್ಪಿಸಿ ಆರ್ಥಿಕ ಲಾಭಗಳು ದೊರೆಯುತ್ತವೆ. ನೀವು ಹಣವನ್ನು ಉಳಿಸುವಿರಿ ಕುಟುಂಬ ಸದಸ್ಯರು ಸಂತೋಷವಾಗಿರುತ್ತಾರೆ.

**ಮೀನ**
ಕೀಲು ನೋವು ಮತ್ತು ಜ್ವರದಂತಹ ಕಾಯಿಲೆಗಳಿಗೆ ನೀವು ವೈದ್ಯರನ್ನು ಸಂಪರ್ಕಿಸಬೇಕಾಗುತ್ತದೆ. ತಿಂಗಳ ಮೊದಲಾರ್ಧವು ಅನುಕೂಲಕರವಾಗಿಲ್ಲ. ನೀವು ನಿಮ್ಮ ಕುಟುಂಬದಿಂದ ದೂರವಾಗಿ ಬೇರೆ ಸ್ಥಳಗಳಲ್ಲಿ ಸಮಯ ಕಳೆಯಬೇಕಾಗುತ್ತದೆ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ॥ ಅನಸೂಯ ಎಸ್. ರಾಜೀವ್

### 1.ರಾತ್ರಿ ಮೊಸರನ್ನ ತಿನ್ನುವುದು ಆರೋಗ್ಯಕ್ಕೆ ಒಳ್ಳೆಯದಲ್ಲ ಕಾರಣವೇನು?

**ಉತ್ತರ :** **ಅಲಕ್ಷ್ಮೀದೋಷ ಯುಕ್ತ ತ್ವಾತ್ ರಾತ್ರೌ ದಧಿ ಗರ್ಹಿತಮ್ ।** ಅಂದರೆ ರಾತ್ರಿ ಊಟದಲ್ಲಿ ಮೊಸರನ್ನು ಖಂಡಿತವಾಗಿ ತಿನ್ನಬಾರದು. ತಿಂದರೆ ಬುದ್ಧಿನಾಶವಾಗಿ ಅಲಕ್ಷ್ಮೀದೋಷ ತಗಲುತ್ತದೆ. ಮೊಸರು ರಜೋಗುಣಿಯಾಗಿರುವುದರಿಂದ ರಾತ್ರಿಯ ಸಮಯದಲ್ಲಿ ಮೊಸರನ್ನು ಸೇವಿಸಿದರೆ ಕೆಟ್ಟ ಶಕ್ತಿಗಳಿಂದ ತೊಂದರೆಯಾಗುವ ಸಾಧ್ಯತೆಯಿರುತ್ತದೆ. ರಾತ್ರಿಯು ತಮೋಗುಣಿಯಾಗಿದೆ. ತಮೋಗುಣಿ ಕಾಲದಲ್ಲಿ ಕೆಟ್ಟ ಶಕ್ತಿಗಳ ಪ್ರಾಬಲ್ಯವು ಹೆಚ್ಚಿರುತ್ತದೆ. ಈ ಕಾಲದಲ್ಲಿ ಮೊಸರನ್ನ ಸೇವಿಸಿದರೆ ದೇಹವು ರಜೋಗುಣದಿಂದ ತುಂಬಿ, ರಾತ್ರಿ ವಾಯು ಮಂಡಲದಲ್ಲಿ ಸಂಚರಿಸುವ ಕೆಟ್ಟ ಶಕ್ತಿಗಳ ಲಹರಿಗಳ ಕಾರ್ಯಕ್ಕೆ ಸ್ಪಂದಿಸುವ ದೃಷ್ಟಿಯಿಂದ ದೇಹವು ಅತಿ ಸಂವೇದನಾ ಶೀಲವಾಗುವುದರಿಂದ ಆ ಜೀವಕ್ಕೆ ಕೆಟ್ಟ ಶಕ್ತಿಗಳಿಂದ ತೊಂದರೆಯಾಗುವ ಸಾಧ್ಯತೆ ಹೆಚ್ಚಿರುತ್ತದೆ. ಆದುದರಿಂದ ರಾತ್ರಿ ಮೊಸರನ್ನು ತಿನ್ನಬಾರದು. **"ರಾತ್ರೌದಧ್ಯನ್ನ ಭುಕ್ತಿ ಶ್ಚ ಆಯುಃ ಕ್ಷೀಣಂ ದಿನೇದಿನೇ"** ಎಂಬಂತೆ ರಾತ್ರಿ ಮೊಸರು ತಿನ್ನುವುದರಿಂದ ಆಯುಷ್ಯ ಕಡಿಮೆಯಾಗುತ್ತದೆ ಎಂದು ಹೇಳುತ್ತಾರೆ. ವೈಜ್ಞಾನಿಕವಾಗಿ ಹೇಳಬೇಕೆಂದರೆ ರಾತ್ರಿ ಮೊಸರು ತಿನ್ನುವುದರಿಂದ ಆಮ್ಲೀಯತೆಯು ಜಾಸ್ತಿಯಾಗಿ ಕಫ ಕಟ್ಟುವಿಕೆ, ತಿಂದಿದ್ದು ಮೇಲೆ ಮೇಲೆ ಬರುವಿಕೆ ಮುಂತಾದ ಸಮಸ್ಯೆಗಳು ತಲೆದೋರುತ್ತದೆ.

### 2. ಪೂರ್ಣ ಫಲ ಅಂದರೆ ಏನು?

**ಉತ್ತರ :** ಸಿಪ್ಪೆ ಇಲ್ಲದ ತೆಂಗಿನಕಾಯಿಗೆ ಸ್ತ್ರೀಫಲ ಅಥವಾ ಲಕ್ಷ್ಮೀ ಅಂತಾರೆ. ಸಿಪ್ಪೆ ಇರುವ ತೆಂಗಿನಕಾಯಿಗೆ ಪುರುಷಫಲ ಅಥವಾ ನಾರಾಯಣ ಅಂತಾರೆ. ಲಕ್ಷ್ಮೀನಾರಾಯಣ ಇರುವ ಫಲವೇ ಪೂರ್ಣಫಲ. ಹೊರಗಿರುವ ಕವಚವು ನಾರಾಯಣರಾಗಿಯೂ ಒಳಗಿರುವ ರಸರೂಪಿ ಹಣ್ಣು ಲಕ್ಷ್ಮೀಯಾಗಿಯೂ ಫಲದಲ್ಲಿರುತ್ತಾರೆ. ಪೂರ್ಣ ಫಲವನ್ನು ಮನೋರಥಫಲ ಐಶ್ವರ್ಯ ರಥಫಲ ಎಂದೂ ಕರೆಯುತ್ತಾರೆ. ಪೂರ್ಣ ಕುಂಭ ಸ್ಥಾನಕ್ಕೆ ಕಲಶಕ್ಕೆ ತೆಂಗಿನಕಾಯಿ ಪ್ರಧಾನ. ತೆಂಗಿನಕಾಯಿಯ ಮೂರು ಕಣ್ಣುಗಳಲ್ಲಿ ಶಿವನ ಅಂಶವು ಇರುತ್ತದೆ. ತೆಂಗಿನಕಾಯಿ ದಾನ ಮಾಡುವುದರಿಂದ ಬ್ರಹ್ಮಾಂಡ ದಾನದ ಫಲ ಸಿಗುತ್ತದೆ. ದಂಪತಿಗಳಲ್ಲಿ ದಾಂಪತ್ಯ ಸುಖ ಹೆಚ್ಚಿಸಲು ತೆಂಗಿನ ಕಾಯಿ ದಾನ ಮಾಡುವುದು ಒಳ್ಳೆಯದು. ಹಾಗಾಗಿ ತೆಂಗಿನಕಾಯಿ ಸರ್ವಶ್ರೇಷ್ಠವಾದ ಪೂರ್ಣಫಲವಾಗಿದೆ.

### 3. ಶ್ರೀಕಾರದ ಮಹತ್ವವೇನು?

**ಉತ್ತರ :** ಸ್(ಶ್) +ರ್+ಈ= ಶ್ರೀ ಆಗುತ್ತದೆ. ಶ್ರೀ ಎಂದರೆ ಲಕ್ಷ್ಮೀ ಸಕಾರವು ಸತ್ವಗುಣ, ರಕಾರವು ರಜೋಗುಣ, ಈಕಾರವು ತಮೋಗುಣವನ್ನೂ ಸೂಚಿಸುತ್ತದೆ. ಹಾಗಾಗಿ ಮಾತೆಯು ತ್ರಿಗುಣಮಯ ಪ್ರಕೃತಿಯಾಗಿದ್ದಾಳೆ. ಅವಳ ಎಂಟು ರೂಪಗಳೇ ಅಷ್ಟಲಕ್ಷ್ಮಿಯರು ಅಂದರೆ ಆ. ಉ.ಮ (ಓಂಕಾರ), ನಾದ, ಬಿಂದು, ಕಲ, ಅತೀತ ಹಾಗೂ ಶಾಂತಿ ಹೀಗೆ ಮಾತೆ ಲಕ್ಷ್ಮಿಯ ರೂಪವೇ ಶ್ರೀಕಾರ.

### 4. ಓಂಕಾರದ ಮಹತ್ವವೇನು?

**ಉತ್ತರ :** ಓಂ ಎಂದರೆ ಪರಬ್ರಹ್ಮ, ಪರಮಾತ್ಮ, ಆಕಾರ, ಉಕಾರ, ಮಕಾರಗಳು ಸಾಕ್ಷಾತ್ ಪರಬ್ರಹ್ಮವಾಚಕ, ಅಕಾ ರವು ವಿಷ್ಣುವನ್ನೂ, ಉಕಾರವು ಮಹೇಶ್ವರವನ್ನೂ, ಮಕಾರವು ಬ್ರಹ್ಮನನ್ನೂ ಸೂಚಿಸುತ್ತದೆ. ಈ ರೀತಿ ಬ್ರಹ್ಮ, ವಿಷ್ಣು, ಮಹೇಶ್ವರರು ಪ್ರಣವಾಕ್ಷರ ವಾಚ್ಯರೆಂದು ಉಕ್ತವಾಗಿದೆ. ಓಂಕಾರವು ಜೀವನಿಗೂ ಪರಮಾತ್ಮನಿಗೂ ಇರುವ ನಿತ್ಯ ಸಂಬಂಧವನ್ನು ಹೇಳುತ್ತದೆ. ಓಂ ಎಂಬ ಅಕ್ಷರ ಪ್ರಣವ. ಪ್ರಣವವು ವೇದಾಧ್ಯಯನದ ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ, ಮಂತ್ರಗಳ ಪ್ರಾರಂಭದಲ್ಲಿ ಮತ್ತು ಗ್ರಂಥಗಳ ಪ್ರಾರಂಭದಲ್ಲಿ ಉಚ್ಚರಿಸಲ್ಪಡುವುದು. ಪ್ರಣವದ ಜಪದಿಂದ ತದ್ವಾಚ್ಯವಾದ ಪರಬ್ರಹ್ಮ ಭಾವನೆಯುಂಟಾಗಿ ಬ್ರಹ್ಮ ಸಾಕ್ಷಾತ್ಕಾರವಾಗುವುದರಿಂದ ಓಂಕಾರವು ಪರಬ್ರಹ್ಮ. ಸೃಷ್ಟಿ, ಸ್ಥಿತಿ, ಲಯವೇ ಓಂಕಾರ. ಅಕಾರದಿಂದ ಸ್ವೀಕಾರ, ಅಂಗೀಕಾರ ಹಾಗೆಯೇ ಆಗಲಿ ಇದು ಸೂಕ್ಷ್ಮದಿಂದ ಸ್ಥೂಲ ರೂಪಕ್ಕೆ ಬಂದ ಭಗವಂತನ ಸ್ಥಿತಿಯನ್ನು ಸೂಚಿಸುತ್ತದೆ. ಉ ಎಂದರೆ ಉತ್ಕರ್ಷ ಎಂದರೆ ಅತ್ಯಂತ ಸೂಕ್ಷ್ಮಕ್ಕೆ ಆಕರ್ಷಿಸುವುದು ಇದು ಲಯವನ್ನು ಸೂಚಿಸುತ್ತದೆ. ಮಕಾರವು ಮಾನ ಎಂದರೆ ಅಳತೆ. ಇದು ಸೃಷ್ಟಿಯನ್ನು ಸೂಚಿಸುತ್ತದೆ. ಈ ರೀತಿಯಾಗಿ ಓಂಕಾರವು ಪರಮಾತ್ಮನನ್ನು ತಲುಪಲು ಸುಮಾರ್ಗವಾದ ನಾದವಾಗಿದೆ.



# ನಿರ್ಮಲ ಮನದವರು ನಮ್ಮ ಜತೆಗೆ ಇರಬೇಕು

– ಎ.ಆರ್. ರಘುರಾಮ
99161 38436

ಮಹಾಭಾರತದ ಸಂದರ್ಭ. ಪಾಂಡವರನ್ನು ಹೇಗಾದರೂ ಮಾಡಿ ಸರ್ವನಾಶ ಮಾಡಬೇಕು ಎಂಬುದೇ ಕೌರವೇಂದ್ರನಾದ ದುರ್ಯೋಧನನ ಆಲೋಚನೆ. ಹಾಗಾಗಿ ಅವರನ್ನು ಕೌರವ ವಾರಣಾವತ ಎಂಬ ಸ್ಥಳಕ್ಕೆ ಕಳಿಸುವ ಯೋಜನೆ ರೂಪಿಸಿದ. ಅಲ್ಲಿ ಅರಗಿನ ಮನೆಯಲ್ಲಿ ಅವರು ಸುಟ್ಟು ಭಸ್ಮವಾಗಬೇಕು ಎಂಬುದು ಅವನ ದುರಾಲೋಚನೆ ಹಾಗಾಗಿ ನೋಡಲಿಕ್ಕೆ ರಮ್ಯವಾಗಿ ಕಾಣಿಸುವ ಕುಟೀರವೊಂದನ್ನು ನಿರ್ಮಿಸಿದ.

ಶಕುನಿ ಹಾಗೂ ಕರ್ಣರು ಇದಕ್ಕೆ ಕುಮ್ಮಕ್ಕು ನೀಡಿದ್ದರು. ವಿದುರನಿಗೆ ದುರ್ಯೋಧನಾದಿಗಳ ಈ ಕೃತ್ಯದ ಬಗ್ಗೆ ಸುಳಿವು ತಿಳಿಯುತ್ತದೆ. **"ಕೊಲ್ಲುವಾತನಿಗಿಂತ ಕಾಯುವಾತನೇ ಮೇಲು"** ಎಂಬ ಗಾದೆ ಸತ್ಯಸ್ಯ ಸತ್ಯ. ಹೇಗಾದರೂ ಮಾಡಿ ಪಾಂಡವರನ್ನು ರಕ್ಷಿಸಬೇಕು ಎಂದು ವಿದುರ ಉಪಾಯ ಹೂಡಿದ. ಧೃತರಾಷ್ಟ್ರನ ಸೂಚನೆಯಂತೆ ತಾಯಿ ಕುಂತಿ ಸಹಿತ ಪಾಂಡವರು ವಾರಣಾವತಕ್ಕೆ ಹೊರಟರು.

ಆಗ ವಿದುರ ಸ್ವಲ್ಪ ದೂರ ಅವರ ಜತೆ ಬಂದ. ಧರ್ಮರಾಯನಿಗೆ ಜಾಗೃತಿ ಮೂಡಿಸಿದ. ಅಗ್ನಿಯು ಸಮಗ್ರ ಕಾಡನ್ನೇ ಭಸ್ಮಮಾಡಿದರೂ ಬಿಲದಲ್ಲಿರುವ ಇಲಿಗಳನ್ನು ಏನೂ ಮಾಡಲಾಗದು ಎಂದು ಸೂಚ್ಯವಾಗಿ ಹೇಳಿದ. ಸೂಕ್ಷ್ಮಗ್ರಾಹಿಯಾದ ಧರ್ಮರಾಯನಿಗೆ ಇದರ ಅರ್ಥ ತಿಳಿಯಿತು. ವಾರಣಾವತಕ್ಕೆ ಬಂದವನೇ ಕೌರವ (ದುರ್ಯೋಧನ) ನಿರ್ಮಿತ ಕುಟೀರವನ್ನು ಪರೀಕ್ಷೆ ಮಾಡಿದ. ಅರಗು ಮತ್ತು ಶೀಘ್ರ ದಹನ ಪರಿಕರಗಳಿಂದ ಆ ಕುಟೀರ ನಿರ್ಮಿಸಿದ್ದು ತಿಳಿಯಿತು. ಅರಗಿನ ಮನೆಯೊಳಗೆ ಶೀಘ್ರವೇ ಸುರಂಗ ತೋಡಿಸಿದ. ಕೌರವೇಂದ್ರನ ಪೂರ್ವಯೋಜನೆಯಂತೆ ರಾತ್ರಿಯೇ ಕುಟೀರಕ್ಕೆ ಬೆಂಕಿ ಇಡಲಾಯಿತು. ಸುರಂಗದ ಮೂಲಕ ಸಾಗಿ ಪಾಂಡವರು ಪಾರಾದರು. ಈ ಪ್ರಸಂಗದಿಂದ ನಮಗೆ ತಿಳಿದು ಬರುವ ಸಂದೇಶ ಏನೆಂದರೆ ವಿದುರನಂಥ ಅಪ್ತರು ನಮಗೂ ಜೀವನದಲ್ಲಿ ಬೇಕು. ತ್ರಿಕಾಲದಲ್ಲೂ ನಿರ್ಮಲ ಮನಸ್ಸು ಉಳ್ಳವರು, ಹೃದಯ ವೈಶಾಲ್ಯತೆ ಹೊಂದಿದವರು, ಸಾಮಾಜಿಕ ಕಾಳಜಿ, ಧರ್ಮನಿಷ್ಠರ ರಕ್ಷಣೆ, ಅನುಕಂಪ ಹೊಂದಿದ ಜನರನ್ನು ನಾವು ಸಂಪಾದಿಸಿಟ್ಟುಕೊಂಡರೆ ಆಪತ್ ಕಾಲದಲ್ಲಿ ಅವರು ನಮ್ಮ ಜೀವ ರಕ್ಷಣೆಗೆ ಮುಂದಾಗುತ್ತಾರೆ. ಪ್ರತ್ಯಕ್ಷ ಸಹಾಯ ಮಾಡಲು ಆಗದಿದ್ದರೂ ಆಪತ್ತಿನ ಸುಳುವು ನೀಡಿ ನಮ್ಮನ್ನು ಬದುಕಿಸುತ್ತಾರೆ. ಸಹೃದಯರ ಸಂಖ್ಯೆಯು ಇಂದು ಕಡಿಮೆ ಇದ್ದರೂ, ಲಭ್ಯವಿರಬಹುದಾದವರನ್ನು ಹುಡುಕಿಕೊಂಡು ಹೋಗಿ ಅವರ ಮಾರ್ಗದರ್ಶನ ಪಡೆಯೋಣ. ಸಜ್ಜನರ ಸಂಗವು ಹೆಜ್ಜೇನು ಸವಿದಂತೆ.

## ವೃಕ್ಷೋ ರಕ್ಷತಿ ರಕ್ಷಿತಃ


**ಗಿಡವೊಂದ ನೆಡುವವನು**
**ದೇವರಾ ಸೇವಕನು**
**ನೆನೆವರವನನು ಜನರು**
**ಅವನೆಂದು ನೋಡದರು**

# ಪುಟಾಣಿ ಮಕ್ಕಳಿಗಾಗಿ

ಈ ಗೊಂಬೆಗೆ
ಚುಕ್ಕಿಯನ್ನು
ಸೇರಿಸಿ ಹಾಗೂ
ಬಣ್ಣವನ್ನು ತುಂಬಿರಿ.





ಬಣ್ಣವನ್ನು
ತುಂಬಿರಿ.



ಮಾರ್ಗ ಅನ್ವೇಷಣೆ

ಮಕ್ಕಳೇ, ಗೋದಾದೇವಿಯು ಶ್ರೀ ಕೃಷ್ಣನನ್ನು ಸೇರಲು ಯಾವ ಹಾದಿಯಲ್ಲಿ ಹೋದರೆ ಶ್ರೀಕೃಷ್ಣನನ್ನು ಸೇರಬಹುದು ಎಂದು ಕಂಡು ಹಿಡಿಯಿರಿ ನೋಡೋಣ !







ಈ ಚಿತ್ರವನ್ನು
ಗಮನಿಸಿ




ವರಸೆಯಾಗಿ
ಬರೆಯಿರಿ

ಅಂಡಾಳ್ ಅವರ ಚಿತ್ರವನ್ನು ಒಂದು ವರಸೆಯಾಗಿ ಇಡಿ
ನೋಡೋಣ ಮಕ್ಕಳೆ

ಉತ್ತರಗಳು:2,6,1,4,5,8,7,3

# ಮಕ್ಕಳೇ ಇದು ನಿಮಗಾಗಿ

## ರಸ ಪ್ರಶ್ನೆಗಳು

36 ಕ್ವಿಜ್

01. ಶಿವನಿಗೆ ಪ್ರಿಯವಾದ ಹೂ ಯಾವುದು?..............................................................
02. ವೇದಸಂಹಿತ ನಾಲ್ಕು ಭಾಗವಾಗಿ ವಿಭಜಿಸಲಾಗಿದೆ ಅವು ಯಾವುದು?..............................................
03. ಕರ್ಮಬಂಧದಿಂದ ಬಿಡುಗಡೆ ಹೊಂದಿರುವ ಚೇತನರನ್ನು ಏನೆಂದು ಕರೆಯುತ್ತಾರೆ? ..............................
04. ರಾಯಚೂರು ಜಿಲ್ಲೆ ಏತಕ್ಕೆ ಪ್ರಸಿದ್ಧಿಯಾಗಿದೆ?.....................................................
05. ಸತ್ಯವಾನ- ಸಾವಿತ್ರಿ ಎಂಬ ಕಥೆಯು ಯಾವ ಪರ್ವದಲ್ಲಿ ಬರುತ್ತದೆ? ..........................................
06. ದೇವಾಲಯದ ನೈರುತ್ಯ ದಿಕ್ಕಿನಲ್ಲಿ ಯಾವ ಗುಡಿ ಇದೆ? ..................................................
07. ವಿಗ್ರಹದ ಬಲಗಡೆಯ ವಕ್ಷದ ಶ್ರೀ ವತ್ಸದ ಮೇಲೆ ಯಾರು ಕುಳಿತಿದ್ದಾಳೆ?..................................
08. ಆಷಾಢ ಹುಣ್ಣಿಮೆಯಂದು ಯಾವ ಪೂರ್ಣಿಮೆ? ...........................................................
09. ಆಲಯದ ತೀರ್ಥವು ಯಾವ ಹೆಸರಿನಿಂದ ಕರೆಯಲ್ಪಡುತ್ತದೆ? .................................................
10. ಮುನಿಗಳು ಶ್ರೀ ಭೂನಿಲಾದಿ ಸತಿಯರೊಂದಿಗೆ ಯಾರನ್ನು ನಮಸ್ಕರಿಸಿದರು? ....................................
11. ಸಾಯಂಕಾಲದ ನಿವಾಳಿಸುವ ಪಂಜಿನ ಆರತಿಯನ್ನು ಏನೆಂದು ಕರೆಯುತ್ತಾರೆ?......................................
12. ಯಾರು ಈ ಗೋಪುರವನ್ನು ಪೂರ್ತಿ ಮಾಡಿಸಿದರು? .......................................................
13. ಮೂಲ ಶ್ರೀ ವಾಯುದೇವರ ಪ್ರಥಮ ರೂಪವೇ ಯಾರು ? ....................................................
14. ಓಂ ಎಂದರೆ ಏನು?..........................................................................
15. ಎಲ್ಲಿಂದ ಪಾಂಡವರು ಪಾರಾದರು? ........ ......................................................

## ಸೂಚನೆಗಳು


1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳುಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸ ತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ನಿಮ್ಮ ಉತ್ತರಗಳನ್ನು ನಮಗೆ ಕಳುಹಿಸಬೇಕಾದ ಕೊನೆಯ ದಿನಾಂಕ ಇದೇ ತಿಂಗಳ 25 ರ ಒಳಗೆ ಕಳುಹಿಸಬೇಕು.
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

**ಪ್ರಧಾನ ಸಂಪಾದಕರು**
**ಸಪ್ತಗಿರಿ ಮಾಸಪ್ರತಿಕೆ**
**ತಿ.ತಿ.ದೇ. ಪ್ರೆಸ್,**
**2 ನೇ ಅಂತಸ್ತು**
**ಕೆ.ಟಿ. ರಸ್ತೆ,**
**ತಿರುಪತಿ : 517 507**
**ಆಂಧ್ರ ಪ್ರದೇಶ್**

| | |
|---|---|
| ಹೆಸರು : | ವಿಳಾಸ : |
| ಚಂದಾ ಸಂಖ್ಯೆ : | |
| ತಂದೆಯ ಹೆಸರು : | |
| ತಾಯಿಯ ಹೆಸರು: | ದೂರವಾಣಿ ಸಂಖ್ಯೆ : |

ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ



- ಸುಬ್ರಮಣ್ಯ ಸ್ವಾಮಿಗೆ ಎಷ್ಟು ಜನ ಪತ್ನಿಯರು?
- ಸುಬ್ರಮಣ್ಯ ಸ್ವಾಮಿಯವರ ಪತ್ನಿಯರ ಹೆಸರೇನು?
- ಸುಬ್ರಮಣ್ಯಸ್ವಾಮಿಯ ಇನ್ನೊಂದು ಹೆಸರೇನು?
- ಸುಬ್ರಮಣ್ಯ ಸ್ವಾಮಿ ಆರು ಮುಖವನ್ನು ಹೊಂದಿರುವುದಕ್ಕೆ ಏನೆಂದು ಕರೆಯುತ್ತಾರೆ?
- ಸುಬ್ರಮಣ್ಯ ಸ್ವಾಮಿಯ ವಾಹನ ಯಾವುದು?
- ಸುಬ್ರಮಣ್ಯ ಸ್ವಾಮಿಯ ಆಯುಧ ಯಾವುದು ?
- ಸುಬ್ರಹ್ಮಣ್ಯ ಸ್ವಾಮಿಯ ತಂದೆ ತಾಯಿ ಯಾರು?
- ಸುಬ್ರಹ್ಮಣ್ಯ ಸ್ವಾಮಿಯ ಸೋದರ ಯಾರು?

1) ಇಬ್ಬರೂ 2) ವಲ್ಲಿ ಹಾಗೂ ದೇವಸೇನ 3) ಬಾಲಮುರಗನ್ ಹಾಗೂ ಸ್ವಾಮಿನಾಥಸ್ವಾಮಿ 4) ಷಣ್ಮುಖ 5) ನವಿಲು 6) ವೇಲ್
7) ಶಿವ ಹಾಗೂ ಪಾರ್ವತಿ 8) ಗಣೇಶ

ಮಕ್ಕಳೇ! ಈ ಚಿತ್ರದಲ್ಲಿರುವ ಕಪ್‌ನಲ್ಲಿರುವ ಅಂಕೆಗಳನ್ನು ಕೂಡಿದರೆ ಹಾಗೂ ಕಳೆದರೆ ಸರಿಯಾದ ಉತ್ತರದೊಂದಿಗೆ ಯಾವ ತಟ್ಟೆಯಲ್ಲಿ ಸರಿಹೊಂದುತ್ತದೆ ಎಂದು ಕಂಡು ಹಿಡಿಯಿರಿ ನೋಡೋಣ!

| | |
|---|---|
| 1 | 18-2 |
| 2 | 11-4 |
| 3 | 16+2 |
| 4 | 22+2 |
| 5 | 8-3 |

| | |
|---|---|
| i | 5 |
| ii | 24 |
| iii | 7 |
| iv | 16 |
| v | 6 |
| vi | 18 |

1) iv 2) iii 3) v 4) ii 5) i



ಮಕ್ಕಳೇ ಚೆನ್ನಾಗಿದ್ದೀರಾ ಏನು ಪಕ್ಷೀ ಮಾತುನಾಡುತ್ತಿದೆ ಎಂದು ನೋಡುತ್ತಿದ್ದೀರಾ ನೀವು ಏನು ಮಾತಾನಾಡಿದರು ಅದು ನಾನು ಮಾತನಾಡುತ್ತೇನೆ. ನಾನು ಮಧುರೈಯಲ್ಲಿ ಮೀನಾಕ್ಷಿ ದೇವಿಯ ಬಲದ ಕೈಯಲ್ಲಿ ಇರುತ್ತೇನೆ. ಹಾಗೂ ಗೋದಾ,ಅಂಡಾಳ್ ಎಂದು ಹೇಳುವ ಭೂದೇವಿಯ ಎಡದ ಕೈಯಲ್ಲಿ ಇರುತ್ತೇನೆ. ಧನುರ್ಮಾಸದಲ್ಲಿ ದೇವರ ಹೂಮಾಲೆಯಲ್ಲಿ ನಾನು ಅಲಂಕರಿಸಿರುತ್ತೇನೆ ನಾನು ಯಾರು ಎಂದು ಹೇಳಿ ನೋಡೋಣ!

**ಪುಟಾಣಿಗಳೇ ನಾನು ಮೇಲೆ ಹೇಳಿದ ಮತ್ತು ಮೇಲಿರುವ ಚಿತ್ರವನ್ನು ನೋಡಿ ನಾನು ಯಾರು ಎಂದು ಕಂಡು ಹಿಡಿಯಿರಿ ನೋಡೋಣ!**

ಗಿಳಿ

ಚಿತ್ರಕಥೆ

# ಬಾಲ್ಯದಲ್ಲಿ ಒಳ್ಳೆಯದನ್ನು ಕಲಿಯೋಣ!!!

ಕಥೆ : ತೆಲುಗು ಮೂಲ : ಶ್ರೀಮತಿ. ವಿ. ನಾಗವಲ್ಲಿ
ಅನುವಾದ : ಆರ್.ಕೆ.ವಿ.
ಚಿತ್ರಗಳು : ಡಾ॥ ಕೆ. ಶ್ರೀಧರನ್

ಹಸ್ತಿನಾಪುರದಲ್ಲಿ ಪಾಂಡವರು, ಕೌರವರು ತಮ್ಮ ವಿದ್ಯಾಭ್ಯಾಸದೊಂದಿಗೆ ಹಲವು ರೀತಿಯ ಕ್ರೀಡೆಗಳನ್ನು ಕಲಿಯುತ್ತಾ ಸಮಯವನ್ನು ಕಳೆಯುತ್ತಿದ್ದರು. ಅದರಲ್ಲಿ ಭೀಮನು ತನ್ನ ಆಟಪಾಠಗಳೊಂದಿಗೆ ಕೌರವರನ್ನು ಸದಾ ಪೀಡಿಸುತ್ತಾ, ಅವರನ್ನು ಅಪಹಾಸ್ಯ ಮಾಡುತ್ತಾ ಹಿಂಸಿಸುತ್ತಿದ್ದ. ಭೀಮನ ಉಪಟಳವನ್ನು ತಡೆಯಲಾರದೇ ಎಲ್ಲರೂ ಅಣ್ಣನಾದ ದುರ್ಯೋಧನನ ಬಳಿ ಹೋಗಿ ತಮ್ಮ ಗೋಳನ್ನು ಹೇಳಿಕೊಂಡರು. ನಂತರದ ಕತೆ ಏನೆಂದರೆ





ವನಭೋಜನದಲ್ಲಿ ಎಲ್ಲರೂ ಸಂತೋಷದಿಂದ ಕುಣಿದಾಡುತ್ತಿದ್ದರು. ಆಗ ದುರ್ಯೋಧನನು
ಏಯ್ ಭೀಮಸೇನಾ! ಹೀಗೆ ಬಾರೋ ಇಲ್ಲಿ ನೋಡು ಈ ಲಾಡು ತಿನ್ನು
ಇರೋ ಬಂದೇ ದುರ್ಯೋಧನಾ! ಊ- ಈ ಲಾಡು ಎಂಬಾ ಚೆನ್ನಾಗಿವೆ.
ಹಾಗೇ ಆ ವಿಷದ ಲಾಡುಗಳನ್ನು ತಿಂದು ಭೀಮನು ಮೂರ್ಛಿತನಾದ.
ಏಯ್! ತಮ್ಮಂದಿರಾ! ಎಲ್ಲರೂ ಇಲ್ಲಿ ಬನ್ನಿ. ಈ ಭೀಮನನ್ನು ಹಗ್ಗದಿಂದ ಕಟ್ಟಿ ನೀರಿನಲ್ಲಿ ಎಸೆಯಿರಿ.
ಭಲೇ -- ಭಲೇ ... ಹಾಗೇ ಮಾಡ್ತೀವಿ ಅಣ್ಣಾ...! ಹಾಗೇ ಅವರೆಲ್ಲಾ ಭೀಮನನ್ನು ನೀರಿಲ್ಲಿ ಎಸೆದರು.
ಹಾಗೇ ನೀರಿನಲ್ಲಿ ಬಿದ್ದ ಭೀಮನು ನಾಗಲೋಕಕ್ಕೆ ಹೋದ. ಆ ಮಗುವನ್ನು ನೋಡಿದ ವಾಸುಕಿಈ ಮಗು ಯಾರು ಆರ್ಯಕಾ?
ಅಯ್ಯಾ ಮಹಾಪ್ರಭೂ! ಆ ಮಗು ನಮ್ಮ ಮೊಮ್ಮಗನಾದ ಶೂರಸೇನನ ಮಗಳಾದ ಕುಂತಿಯ ಮಗ ಭೀಮ ಸ್ವಾಮೀ!
ಹೌದೇ! ಭೀಮಸೇನಾ! ಇತ್ತ ಬಾ ! ಈ ಪಾನೀಯಗಳನ್ನು ಕುಡಿ ತುಂಬಾ ರುಚಿಕರವಾಗಿರುತ್ತವೆ.
ಊ - ಊ ಇವೆಲ್ಲಾ ಚೆನ್ನಾಗಿವೆ... ತಾತಾ! ಈ ಬಲವರ್ಧಕ ರಸಗಳು ಇರುವ ಎಂಟು ಮಡಿಕೆಗಳನ್ನು ಕುಡಿದುಬಿಟ್ಟೆ. ಚೆನ್ನಾಗಿ ನಿದ್ದೆ ಬರುತ್ತಿದೆ ಇನ್ನು ನಾನು ಸ್ವಲ್ಪ ನಿದ್ದೆ ಮಾಡ್ತೀನಿ ತಾತಾ !
ಮರುದಿನ ನಿದ್ದೆಯಿಂದ ಎದ್ದ ಭೀಮಸೇನ ಅಪ್ಪಾ ಭೀಮಸೇನಾ! ನಿನಗಾಗಿ ಅಮ್ಮ ಎದುರುನೋಡುತ್ತಿದ್ದಾಳೆ.. ಇನ್ನು ಹೊರಡು . ಚೆನ್ನಾಗಿ ಬಲಶಾಲಿಯಾಗಿ ಬಾಳು.
ಹಾಗೇ ತಾತಾ! ಧನ್ಯವಾದಗಳು !! ಇನ್ನು ಹೋಗಿ ಬರುತ್ತೇನೆ.
ಕುಂತಿದೇವಿ ತನ್ನ ಮಗ ಕಂಡುಬರಲಿಲ್ಲವೆಂದು ಜೋರಾಗಿ ದುಃಖಿಸತೊಡಗಿದಳುಅಮ್ಮಾ ನಾನು ಬಂದುಬಿಟ್ಟೆ! (ಎನ್ನುತ್ತಾ ನಡೆದ ಘಟನೆಯನ್ನೆಲ್ಲಾ ಅಮ್ಮನಿಗೆ ಹೇಳಿದ)
ಹೌದೇ ಮಗೂ! ಹೀಗೆಲ್ಲಾ ನಡೆಯಿತೇ! ಏನಾದರೇನು ನೀನು ಹಿಂದಿರುಗಿದೆಯಲ್ಲಾ ಅಷ್ಟೇ ಸಾಕು, ಆ ಕೃಷ್ಣಪರಮಾತ್ಮನಿಗೆ ವಂದನೆಗಳನ್ನು ಅರ್ಪಿಸೋಣ.
K-Sreedharan
ಈ ರೀತಿ ಕೌರವ ಪಾಂಡವರ ನಡುವೆ ಅವರ ಬಾಲ್ಯದಲ್ಲಿ ಪ್ರಾರಂಭವಾದ ದ್ವೇಷ ಸೇಡುಗಳೇ ಮಹಾಭಾರತದ ಯುದ್ಧಕ್ಕೆ ನಾಂದಿಹಾಡಿತು.
ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ? ಎಂಬಂತೆ ಬಾಲ್ಯದಲ್ಲೇ ಸೇಡು, ದ್ವೇಷ, ಪ್ರತೀಕಾರದಂತಹಾ ಭಾವನೆಗಳನ್ನು ಬೆಳೆಸಿಕೊಂಡರೆ ಅವು ನಮ್ಮೊಂದಿಗೇ ಬೆಳೆದು ಹಿರಿದಾಗುತ್ತವೆ. ಆದ್ದರಿಂದ ಅವುಗಳನ್ನು ಬಾಲ್ಯದಲ್ಲೇ ತೆಗೆದು ಹಾಕಿದರೆ ನಂತರ ನಮ್ಮ ಜೀವನದಲ್ಲಿ ಸುಖಶಾಂತಿ ನೆಲೆಸುತ್ತವೆ....

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

1. ಹೆಸರು ಮತ್ತು ವಿಳಾಸ :

(ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

(ಸೆಲ್ ನಂಬರ್)

2. ಬೇಕಾಗುವ ಭಾಷೆ :

☐ ಕನ್ನಡ ☐ ತೆಲುಗು ☐ ತಮಿಳು

☐ ಹಿಂದೀ ☐ ಇಂಗ್ಲೀಷು ☐ ಸಂಸ್ಕೃತ

3. ವಾರ್ಷಿಕ ಚಂದಾ : ☐ ರೂ.240/-

4. ಆಜೀವಚಂದಾ : ☐ ರೂ.2,400/- ( 12 ವರ್ಷ),

5. ವಿದೇಶಿ ವಾರ್ಷಿಕ ಚಂದಾ : ☐ ರೂ.1030/-

6. ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

7. ಸಲ್ಲಿಸಿದ ಹಣ :

ಡಿ.ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ಅಟ್‌ಪರ್ ಚೆಕ್ಕು ಮಾತ್ರವೇ

ಸ್ಥಳ :

ದಿನಾಂಕ : ಚಂದಾದಾರರ ಸಹಿ

1. ಸಪ್ತಗಿರಿ ವಾರ್ಷಿಕ ಚಂದಾ ರೂ.240/-ಆಜೀವಚಂದಾ (12 ವರ್ಷ) ರೂ.2,400/-ಗಳು ಅನ್‌ಲೈನ್‌ಗಾಗಿ (https://ttdevasthanams.ap.gov. in), ಡಿ.ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ,ತಿ.ತಿ.ದೇ.ತಿರುಪತಿ.ಅವರ ಹೆಸರಿನಲ್ಲಿ ತೆಗೆಯಬೇಕು.
2. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿ-ಹಾಳೆಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.
3. ಎಂ.ಓ.ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.
4. ನಮ್ಮ ವಿಳಾಸ-ಪ್ರಧಾನಸಂಪಾಕರು,ಸಪ್ತಗಿರಿ ಕಾರ್ಯಾಲಯ,ತಿ.ತಿ.ದೇ., ಪ್ರೆಸ್. ಎರಡನೇ ಅಂತಸ್ತು, ಕೆ.ಟಿ.ರೋಡ್ಡು, ತಿರುಪತಿ -517507.
5. ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್ : 0877-2264359, 0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

## ಆಧ್ಯಾತ್ಮಿಕ ಮಾಸಪತ್ರಿಕೆ ಸಪ್ತಗಿರಿ

- 'ಸಪ್ತಗಿರಿ' ತಿ.ತಿ.ದೇ.,ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ಪ್ರಕಟಿಸಲಾಗಿದೆ.
- 'ಸಪ್ತಗಿರಿ' ಪತ್ರಿಕೆಯಲ್ಲಿ ಅನೇಕ ಆಧ್ಯಾತ್ಮಿಕ ವೈಶಿಷ್ಟಗಳನ್ನು ಪ್ರಕಟಿಸುತ್ತಿದೆ.
- 'ಸಪ್ತಗಿರಿ' ಪತ್ರಿಕೆಯು ತೆಲುಗು,ತಮಿಳು,ಕನ್ನಡ,ಹಿಂದಿ,ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಟವಾಗಿದೆ.
- 'ಸಪ್ತಗಿರಿ' ಪತ್ರಿಕೆಯ ವಾರ್ಷಿಕ ಚಂದಾ ರೂ. 240/-
- 'ಸಪ್ತಗಿರಿ' ಪತ್ರಿಕೆಯ ಆಜೀವ ಚಂದಾ (12 ವರ್ಷಗಳು ಮಾತ್ರ) ರೂ.2400/-
- 'ಸಪ್ತಗಿರಿ' ವಿದೇಶಿ ವಾರ್ಷಿಕ ಚಂದಾ ರೂ. 1030/-
- 'ಸಪ್ತಗಿರಿ' ಪತ್ರಿಕೆಯ ಚಂದಾ ಓದುಗರು ಡಿ.ಡಿ./ಇ.ಎಂ.ಓ./ಐ.ಪಿ.ಓ./ Online (ttdevasthanams.ap.gov.in) ಮೂಲಕ ಮಾಡಬಹುದು.
- 'ಸಪ್ತಗಿರಿ' ಪತ್ರಿಕೆಯ ಚಂದಾದಾರರು ಯಾವುದೇ ರಾಷ್ಟ್ರೀಯ ಬ್ಯಾಂಕ್ ಮುಖಾಂತರ ಪ್ರಧಾನ ಸಂಪಾದಕರು,ಸಪ್ತಗಿರಿ ಮಾಸಪತ್ರಿಕೆ, ತಿ.ತಿ.ದೇ., ತಿರುಪತಿ. ನೀವು ಡಿ.ಡಿ.ಅಂಚೆ ಮೂಲಕ, ಪ್ರಧಾನ ಸಂಪಾದಕರು,ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ.,ಪ್ರೆಸ್ ಬಿಲ್ಡಿಂಗ್, ತಿರುಪತಿ - 517 507 ಎಂಬ ವಿಳಾಸಕ್ಕೆ ಕಳುಹಿಸಬಹುದು.
- ಚಂದಾದಾರರು ತಮ್ಮ ವಿಳಾಸ, ಪಿನ್‌ಕೋಡ್, ಸೆಲ್‌ಫೋನ್ ಸಂಖ್ಯೆ ಮತ್ತು ನಿಮಗೆ ಬೇಕಾದ ಪತ್ರಿಕೆಯ ಭಾಷೆಯನ್ನು ಸ್ಪಷ್ಟವಾಗಿ ಬರೆಯಬೇಕು.
- 'ಸಪ್ತಗಿರಿ' ಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪದಿದ್ದರೆ ಅಥವಾ ವಿಳಾಸ ಬದಲಾದರೆ ಈ, ಇ-ಮೇಲ್ (Chiefeditortpt@gmail.com) ಅನ್ನು ಸಂಪ್ರದಿಸ ಬೇಕು.
- ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0877-2264359, 0877-2264360
- ಹೆಚ್ಚಿನ ವಿವರಗಳಿಗೆ ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್,ತಿರುಪತಿ - 517 507 ಈ ವಿಳಾಸವನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.
- ನೇರವಾಗಿ ಸಂಪರ್ಕಿಸಲು ಬಯಸುವವರು ಪ್ರಧಾನ ಸಂಪಾದಕರ ಕಾರ್ಯಾಲಯದ ಕೆಲಸದ ವೇಳೆ ಬೆಳ್ಳಿಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯ ವರೆಗೆ) ಯಲ್ಲಿ ಸಂಪರ್ಕಿಸಬಹುದು.

Printed by Sri Sri. R.V. Vijay Kumar, B.A., B.Ed, and and Published by Dr. V. G. Chokkalingam, M.A., Ph.D. on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507. Editor : Dr. V. G. Chokkalingam, M.A., Ph.D.



ಹೈದರಾಬಾದ್‌ನ ಹಿಮಾಯತ್ ನಗರದಲ್ಲಿರುವ ಶ್ರೀವೆಂಕಟೇಶ್ವರ ಸ್ವಾಮಿಯವರ ಆಲಯದಲ್ಲಿ ನಡೆದ ವಾರ್ಷಿಕ ಬ್ರಹ್ಮೋತ್ಸವಗಳ ಸಂದರ್ಭವಾಗಿ 05-06-2025 ರಂದು ಗರುಡವಾಹನ ಸೇವೆಯಲ್ಲಿ ಕುಟುಂಬ ಸಮೇತರಾಗಿ ಪಾಲ್ಗೊಂಡ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ. ಬಿ. ಆರ್. ನಾಯುಡು ರವರು



ತಿರುಪತಿ, ಸ್ವಿಮ್ಸ್ ಬಳಿಯಿರುವ ಭವನಗಳನ್ನು 28-05-2025 ರಂದು ಸಂದರ್ಶಿಸಿದ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಜೆ. ಶ್ಯಾಮಲರಾವ್, ಐ.ಎ.ಎಸ್., ರವರು ಮತ್ತು ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ ಐ.ಎ.ಎಸ್., ರವರು ಮತ್ತು ಸ್ವಿಮ್ಸ್‌ನ ನಿರ್ದೇಶಕರಾದ ಪ್ರೊ. ಆರ್ವಿಕುಮಾರ್ ಮತ್ತು ಇತರ ಅಧಿಕಾರಿಗಳು ಪಾಲ್ಗೊಂಡರು.



ಪರಿಸರ ಸಂರಕ್ಷಣೆಯ ಸಂದರ್ಭವಾಗಿ 05-06-2025 ರಂದು ತಿರುಮಲೆಯಲ್ಲಿರುವ ಗೋಗರ್ಭ ಡ್ಯಾಮ್ ಬಳಿಯಲ್ಲಿ ವಿವಿಧ ಭಾಗಗಳಲ್ಲಿ ಸಸಿಗಳನ್ನು ನೆಡುತ್ತಿರುವ ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ.ಹೆಚ್. ವೆಂಕಯ್ಯ ಚೌದರಿ ಐ.ಆರ್.ಎಸ್., ರವರು



23-05-2025 ರಂದು ತಿ.ತಿ.ದೇ., ಆಡಳಿತ ಮಂಡಳಿಯ ಎಕ್ಸ್ ಅಫಿಷಿಯಾ ಸದಸ್ಯರಾಗಿ ಶ್ರೀ ಸಿ. ದಿವಾಕರ್ ರೆಡ್ಡಿಯವರು ಪ್ರಮಾಣವನ್ನು ಸ್ವೀಕರಿಸಿದರು. ನಂತರ ತುಡಾ ಅಧ್ಯಕ್ಷರಾದ ಶ್ರೀ ಸಿ. ದಿವಾಕರ್ ರೆಡ್ಡಿ ದಂಪತಿಗಳಿಗೆ ತೀರ್ಥ ಪ್ರಸಾದಗಳನ್ನು, ಸ್ವಾಮಿಯವರ ಚಿತ್ರಪಟವನ್ನು ನೀಡುತ್ತಿರುವ ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ.ಎಚ್. ವೆಂಕಯ್ಯ ಚೌದರಿ ಐ.ಆರ್.ಎಸ್., ರವರು



05-06-2025 ರಂದು ತಿ.ತಿ.ದೇ., ಮುಖ್ಯ ಜಾಗೃತ ಮತ್ತು ಭದ್ರತಾ ಅಧಿಕಾರಿಯಾಗಿ (ಸಿ.ವಿ.ಮತ್ತು ಎಸ್.ಓ.) ಶ್ರೀ ಕೆ.ವಿ. ಮುರಳಿ ಕೃಷ್ಣ ಐ.ಪಿ.ಎಸ್. ರವರು ಪ್ರಮಾಣ ಸ್ವೀಕರಿಸಿದರು.



ತಿ.ತಿ.ದೇ., ಸಪ್ತಗಿರಿ ಆಧ್ಯಾತ್ಮಿಕ ಮಾಸ ಪತ್ರಿಕೆಯ ಕಾರ್ಯಾಲಯದಲ್ಲಿ ಪ್ರಧಾನ ಸಂಪಾದಕರಾಗಿ (ಎಫ್.ಎ.ಸಿ.) 31-05-2025 ರಂದು ಪದವಿಯನ್ನು ಸ್ವೀಕರಿಸಿದ ಡಾ॥ ವಿ.ಜಿ. ಚೊಕ್ಕಲಿಂಗಂ ರವರು

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams
Printing on 25-06–2025 and Posting at Tirupati RMS.Regd. with the Registrar of Newspapers for India under
RNI. No. APKAN/2021/80589. Postal Regd.No.TRP/156/2024-2026 "Licenced toPost Without Prepayment
No. PMGK/RNP/WPP-04(6)/2024-2026" Posting on 5th of Every Month

